ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 44 ಅ.27-ನ.2, 1997 ಬೆಲೆ ರೂ. 2.00



ಅಂತರ್ರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಭಾರತೀಯ ಧ್ವಜದೊಂದಿಗೆ ಮೇಡಂ ಕಾಮಾ ಮತ್ತು ಎಸ್.ಆರ್.ರಾಣಾ

ಭಾರತದ ವಿಮೋಚನಾ ಹೋರಾಟದ ನೆನಪು (ಚಿತ್ರ)

ಅಧಿಕಾರವುಳಿಯಿತು! ನೀತಿ, ತತ್ವ ಹೋಯಿತು!!

ಉತ್ತರ ಪ್ರದೇಶ ಹಾಗೂ ಗುಜರಾತಿನ ಇತ್ತೀಚಿನ ಬೆಳವಣಿಗೆಗಳು ಬಂಡವಾಳಶಾಹಿ ಪಕ್ಷಗಳ ಕೆಲಸ-ಕಾರ್ಯಗಳಲ್ಲಿ ಕುಟಿಲ ತಂತ್ರ, ಪಕ್ಷಾಂತರ, ಕುದುರೆ ವ್ಯಾಪಾರ, ಅದಕ್ಕಾಗಿ ನೀತಿ ಬಾಹಿರವಾಗಿ ಸಂಗ್ರಹಿಸಿದ ಕಪ್ಪುಹಣವನ್ನು ಬಿಳಿ ಮಾಡುವುದು ಮತ್ತು ಹಿಂಸಾಚಾರ ಇವೇ ಪ್ರಧಾನವಾಗುತ್ತಿವೆ ಎಂಬುದನ್ನು ಕಣ್ಣಿಗೆ ಕಾಣುವಂತೆ ಪ್ರದರ್ಶಿಸಿವೆ. ಬಿಜೆಪಿ ಉತ್ತರ ಪ್ರದೇಶದಲ್ಲಿ ವಿವಿಧ ಪಕ್ಷಗಳಿಂದ ದೊಡ್ಡ ಪ್ರಮಾಣದಲ್ಲಿ ಪಕ್ಷಾಂತರವನ್ನು ಮಾಡಿಸಿದ ರೀತಿ(ನಿಜ ಸಮಾಜವಾದಿ ಪಕ್ಷದಿಂದ ಪಕ್ಷಾಂತರ ಮಾಡಿಸಲು ಅದಕ್ಕಾಗಲಿಲ್ಲ. - ಎಡ ಪಕ್ಷಗಳಿಂದಂತೂ ಸಾಧ್ಯವೇ ಇಲ್ಲ ಬಿಡಿ) ಕೇಂದ್ರದಲ್ಲಿ ಅಧಿಕಾರ ಗಿಟ್ಟಿಸಲು ಕಾತುರವಾಗಿರುವ ಆ ಪಕ್ಷ ನೀತಿಗಳು, ತತ್ವಗಳ ಬಗ್ಗೆ ಹೇಳುತ್ತಿದ್ದ ದೊಡ್ಡ ದೊಡ್ಡ ಮಾತುಗಳೆಲ್ಲಾ ಬರಿಯ ಬೊಗಳೆ ಎಂಬುದನ್ನು ಸಾಬೀತು ಮಾಡಿದೆ ಎಂದು ಸಿಪಿಐ(ಎಂ)ನ ಹಿರಿಯ ಮುಖಂಡರು ಹೇಳಿದ್ದಾರೆ.

"ಬಿಜೆಪಿಗೆ ಇತ್ತೀಚಿನ ಬೆಳವಣಿಗೆಗಳಿಂದ ಉತ್ತರ ಪ್ರದೇಶದಲ್ಲಿ ತಮ್ಮ ಸರ್ಕಾರದ ಮುಂದುವರಿಕೆಯಿಂದ ಬಹಳ ಸಂತೋಷವಾಗಿರಬಹುದು. ಆದರೆ ಇದಕ್ಕೆ ತಾವು ಭಾರೀ ಬೆಲೆ ತೆರಬೇಕಾಗುತ್ತದೆ ಎಂಬುದನ್ನೂ ಅವರು ಅರಿಯಬೇಕಾಗುತ್ತದೆ" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರಿಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ 1996 ರ ಚುನಾವಣೆಗಳ ನಂತರ ಯಾವುದೇ ಪಕ್ಷಕ್ಕೆ ಅಥವಾ ಕೂಟಕ್ಕೆ ಸ್ಪಷ್ಟಬಹುಮತ ಸಿಗಲಿಲ್ಲ. ಅತಿದೊಡ್ಡ ಪಕ್ಷವಾಗಿ ಬಂದ ಬಿಜೆಪಿ ಸರಕಾರ ರಚಿಸುವ ದಾವೆ ಹೂಡಿತು. ಆದರೆ ತನಗೆ ಸದನದಲ್ಲಿ ಬಹುಮತವಿದೆಯೆಂಬುದನ್ನು ರಾಜ್ಯಪಾಲರಿಗೆ ಮನವರಿಕೆ ಮಾಡಿಸಲು ಅದು ವಿಫಲವಾಯಿತು. ಒಂದೊಮ್ಮೆ ಅಧಿಕಾರದ ಪ್ರಮಾಣ ವಚನ ಸ್ವೀಕರಿಸಿದೆವೆಂದರೆ ಕಾಂಗ್ರೆಸ್, ಬಿ.ಎಸ್.ಪಿ., ಜನತಾದಳಗಳಿಂದ ಪಕ್ಷಾಂತರ ನಡೆಸಿ ಬಹುಮತ ಗಿಟ್ಟಿಸಬಹುದೆಂಬುದು ಆಗಲೂ ಬಿಜೆಪಿಯ ಲೆಕ್ಕಾಚಾರವಾಗಿತ್ತು. ಆದರೆ ಅಧಿಕಾರ ಕೈಯಲ್ಲಿಲ್ಲದುದರಿಂದ ಆಗ ಆ ಲೆಕ್ಕಾಚಾರ ತಲೆಕೆಳಗಾಯಿತು. ಆರು ತಿಂಗಳ ನಂತರ ಹೇಗಾದರೂ ಉತ್ತರ ಪ್ರದೇಶದಲ್ಲಿ ಅಧಿಕಾರ ಪಡೆಯಲು ಅದು ಬಿಎಸ್‌ಪಿಯೊಂದಿಗೆ ಒಂದು ವಿಶಿಷ್ಟ ಒಪ್ಪಂದ - ಸರದಿ ಮುಖ್ಯಮಂತ್ರಿ ಒಪ್ಪಂದ! - ಮಾಡಿಕೊಂಡಿತು. ಅಲ್ಲದೆ ಇದರ ಮೂಲಕ ಮುಂದಿನ ಲೋಕಸಭಾ ಚುನಾವಣೆಗಳಲ್ಲಿ ಬಿಎಸ್‌ಪಿ ಯೊಂದಿಗೆ ಅಖಿಲ ಭಾರತ ಮಟ್ಟದಲ್ಲಿ ಮೈತ್ರಿ ಏರ್ಪಡಿಸಿಕೊಳ್ಳುವ ಯೋಚನೆಯೂ ಇತ್ತು ಎಂದು ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾ ಸುರ್ಜಿತ್ ಹೇಳುತ್ತಾರೆ.

ಕುಟಿಲತಂತ್ರ

ಉತ್ತರ ಪ್ರದೇಶ ಬಿಜೆಪಿ-ಬಿಎಸ್‌ಪಿ ಕೂಟ ವಿಪರೀತ ವಿರೋಧಾಭಾಸಗಳಿಂದ ಕೂಡಿತ್ತು ಎಂಬುದು ಎಲ್ಲರಿಗೂ ಗೊತ್ತು. ಅದರಲ್ಲೂ ಬಿಜೆಪಿ ತನ್ನ ಕುಟಿಲ ತಂತ್ರದ ಭಾಗವಾಗಿ ಈ ಕೂಟ ಏರ್ಪಡಿಸಿಕೊಂಡಿತ್ತು. ಈ ಅವಕಾಶವನ್ನು ಬಳಸಿಕೊಂಡು ತನ್ನ ಪ್ರಮುಖ ವಿರೋಧಿ ಹಾಗೂ ರಾಜ್ಯದಲ್ಲಿ ಪ್ರಧಾನ ಜಾತ್ಯಾತೀತ ಶಕ್ತಿಯಾದ ಸಮಾಜವಾದಿ ಪಕ್ಷದ ಮೇಲೆ ತೀವ್ರ ಧಾಳಿಯನ್ನು ಆರಂಭಿಸಿತು. ಬಿಜೆಪಿ-ಬಿಎಸ್‌ಪಿ ಆಳ್ವಿಕೆಯ 7 ತಿಂಗಳಲ್ಲಿ ಆ ಪಕ್ಷದ 200 ಕಾರ್ಯಕರ್ತರನ್ನು ಕೊಲ್ಲಲಾಯಿತು, ಸಾವಿರಾರು ಕಾರ್ಯಕರ್ತರನ್ನು ಜೈಲಿಗಟ್ಟಲಾಯಿತು. ಶಾಲೆ-ಕಾಲೇಜು-ವಿಶ್ವವಿದ್ಯಾಲಯಗಳ ಹೆಸರುಗಳನ್ನು ಮುಖ್ಯಮಂತ್ರಿಗಳ ಮರ್ಜಿಯಂತೆ ಬದಲಾಯಿಸಲಾಯಿತು, ಅಧಿಕಾರಿಗಳ ವರ್ಗಾವರ್ಗಿ, ರಾಜಕೀಯ ಹಿತಾಸಕ್ತಿಗಳಿಗಾಗಿ ಜಿಲ್ಲೆಗಳನ್ನು ವಿಭಜಿಸಲಾಯಿತು.

"ಈ ಏಳು ತಿಂಗಳ ಬಿಜೆಪಿ-ಬಿಎಸ್‌ಪಿ ಕೂಟದ ಸರಕಾರದ ಕೈಯಲ್ಲಿ ಸಮಾಜವಾದಿ ಪಕ್ಷದ ಮೇಲೆ ತೀವ್ರ ದಮನ ನಡೆಸುತ್ತಿದ್ದಾಗ ಕೇಂದ್ರ ಸರಕಾರವಾಗಲೀ, ಸಂಯುಕ್ತ ರಂಗವಾಗಲೀ ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸಲಿಲ್ಲ. ರಾಷ್ಟ್ರಪತಿಗಳಿಗೆ ಗೃಹ ಇಲಾಖೆಗೆ ಕೊಟ್ಟ ಮನವಿಗಳು ಕಡತದಲ್ಲೇ ಉಳಿದವು. ರಾಜ್ಯದಲ್ಲಿ ರಾಜಕೀಯ ಕಾರ್ಯಕರ್ತರ, ಸಾಮಾನ್ಯ ನಾಗರಿಕರ ಜೀವ-ಹಕ್ಕುಗಳಿಗೆ ರಕ್ಷಣೆ ನೀಡಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಿಲ್ಲ ಸಮಾಜವಾದಿ ಪಕ್ಷ ಏಕಾಂಗಿಯಾಗಿ ಹೋರಾಡಬೇಕಾಯಿತು" ಎಂದು ಸುರ್ಜಿತ್ ಕಳೆದ ಏಳು ತಿಂಗಳ ಆಳ್ವಿಕೆಯ ಬೆಳವಣಿಗೆಗಳ ಬಗ್ಗೆಯೂ ಖೇದ ವ್ಯಕ್ತಪಡಿಸಿದ್ದಾರೆ.

ನಿರೀಕ್ಷಿಸಿದಂತೆ ಈ ಕೂಟದ ಭಾಗೀದಾರರ ನಡುವಿನ ಸೆಳೆತ ಮುಖ್ಯಮಂತ್ರಿಯಾಗುವ ಸರದಿ ಕಲ್ಯಾಣ್ ಸಿಂಗ್‌ರವರಿಗೆ ಬರುವ ವೇಳೆಗೆ ಬಿಕ್ಕಟ್ಟಾಗಿ ಪರಿಣಮಿಸಿತು. ಎರಡೂ ಪಕ್ಷಗಳ ಕೇಂದ್ರ ಮುಖಂಡರು ಮಧ್ಯಪ್ರವೇಶಿಸಿ ಇದನ್ನು ಪರಿಹರಿಸಲು ಪ್ರಯತ್ನಿಸಿದರು. ಬಿಎಸ್‌ಪಿ ತನ್ನವರೇ ವಿಧಾನಸಭಾಧ್ಯಕ್ಷರಾಗಬೇಕು ಎಂದು ಪಟ್ಟು ಹಿಡಿಯಿತು. ಏಕೆಂದರೆ ಬಿಜೆಪಿಯ ವಿಧಾನಸಭಾಧ್ಯಕ್ಷ ಪಕ್ಷಾಂತರ ಏರ್ಪಡಿಸಬಹುದು ಎಂಬ ಸಂದೇಹವನ್ನು ಅದು ವ್ಯಕ್ತಪಡಿಸಿತು. (ನಂತರ ನಡೆದಿರವು ಪಕ್ಷಾಂತರಗಳ ಹಿನ್ನೆಲೆಯಲ್ಲಿ ಈ ಬೇಡಿಕೆಯನ್ನು ಗಮನಿಸಬೇಕು) ಹೀಗೆ ಮಾಡುವುದಿಲ್ಲ ಎಂದು ಬಿಜೆಪಿ ಮುಖಂಡರು ಭರವಸೆ ನೀಡಿದರು. ಬಿಎಸ್‌ಪಿ ಒಪ್ಪಿತು. ಕಲ್ಯಾಣ್ ಸಿಂಗ್ ಮುಖ್ಯಮಂತ್ರಿಯಾದರು. ಮತ್ತೆ ಜಗಳ ಬಂತು. ಮತ್ತೆ ಕೇಂದ್ರ ಮುಖಂಡರು ಮಧ್ಯಪ್ರವೇಶಿಸಿ 'ಒಪ್ಪಂದ' ಮಾಡಿಸಿದರು. ಆದರೆ ಒಂದೇ ವಾರದೊಳಗೆ ಬಿಎಸ್‌ಪಿ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿತು.

ನೀತಿಯೊಂದಿದ್ದಿದ್ದರೆ.....

ಈ ಸರಕಾರ ರಚನೆಗೊಂಡದ್ದೇ ಬಿಜೆಪಿಗೆ ಬಿಎಸ್‌ಪಿಯ ಬೆಂಬಲದಿಂದಾಗಿ. ಅದಿಲ್ಲದ್ದರಿಂದ ಆರು ತಿಂಗಳು ಸರಕಾರ ರಚಿಸುವುದೇ ಆಗಿರಲಿಲ್ಲವಲ್ಲ. ಅಂತಹ ಬೆಂಬಲವನ್ನು ಹಿಂತೆಗೆದುಕೊಂಡಾಗ ಸಹಜವಾಗಿಯೇ ಈ ಕೂಟಕ್ಕೆ ಸದನದಲ್ಲಿ ಬಹುಮತ ಉಳಿಯುವುದಿಲ್ಲ. ನೀತಿ-ತತ್ವ ಎಂಬುದಿದ್ದಿದ್ದರೆ ಆ ಸರಕಾರ ರಾಜೀನಾಮೆ ನೀಡಬೇಕಿತ್ತು. ಕಲ್ಯಾಣ್ ಸಿಂಗ್ ಹಾಗೆ ಮಾಡದೆ ನೀತಿಯೆಂಬುದು ತಮಗಿಲ್ಲ ಎಂದು ತೋರಿಸಿಕೊಟ್ಟ ಮೇಲೆ ಅಂತಹ ಸರಕಾರವನ್ನು ವಜಾ ಮಾಡಬೇಕು ಎಂದು ಎಲ್ಲಾ ರಾಜಕೀಯ ಪಕ್ಷಗಳು ಒತ್ತಾಯಿಸಿದವು. ಸದನದಲ್ಲಿ ಒಟ್ಟಾಗಿ ಬಹುಮತ ಪಡೆದಿದ್ದ ಈ ಎಲ್ಲಾ ಪಕ್ಷಗಳ ಅಭಿಪ್ರಾಯವನ್ನು ಗಣನೆಗೆ ತಗೊಂಡು ಕೇಂದ್ರ ಸರ್ಕಾರ ಕಲ್ಯಾಣ್ ಸಿಂಗ್ ಸರಕಾರವನ್ನು ವಜಾ ಮಾಡಿ ಹೊಸ ಚುನಾವಣೆಗಳನ್ನು ನಡೆಸಬೇಕಾಗಿತ್ತು ಎಂದು ಸುರ್ಜಿತ್ ಅಭಿಪ್ರಾಯ ಪಡುತ್ತಾರೆ. ಈ ಸಂದರ್ಭದಲ್ಲಿ ಸರ್ಕಾರದ ಬಲವನ್ನು ಸದನದಲ್ಲಿ ಪರೀಕ್ಷಿಸಬೇಕು ಎಂಬ ಬೊಮ್ಮಾಯಿ ಕೇಸಿನಲ್ಲಿನ ಸುಪ್ರೀಂ ಕೋರ್ಟಿನ ತೀರ್ಪನ್ನು ಉದ್ಧರಿಸುವುದು ಸರಿಯಲ್ಲ ಎನ್ನುವ ಅವರು ಇದೇ ಉತ್ತರ ಪ್ರದೇಶದಲ್ಲಿ ಮುಲಾಯಂ ಸರಕಾರಕ್ಕೆ ಇದೇ ಬಿಎಸ್‌ಪಿ ಬೆಂಬಲ ಹಿಂತೆಗೆದುಕೊಂಡಾಗ ಅದನ್ನು ವಜಾ ಮಾಡಲಾಗಿತ್ತು ಎಂಬುದನ್ನು ನೆನಪಿಸಿದ್ದಾರೆ. ಬಿಜೆಪಿಯೂ ಆಗ ವಜಾವನ್ನು ಆಗ್ರಹಿಸಿತ್ತು! ಅಲ್ಲದೆ ನ್ಯಾಯಾಲಯಗಳು ಬೇರೆ ಪಕ್ಷಗಳಿಂದ ಪಕ್ಷಾಂತರಗಳನ್ನು ನಡೆಸುವ ಪ್ರಯತ್ನಗಳ ಬಗ್ಗೆಯೂ ಕೇಸುಗಳನ್ನು ಪರಿಶೀಲಿಸುತ್ತಿದೆಯಲ್ಲಾ ಎಂದೂ ಅವರು ಪ್ರಶ್ನಿಸಿದರು.

ನಾಚಿಕೆಗೇಡಿನ ಸಂಗತಿ

ಕಲ್ಯಾಣ್ ಸಿಂಗ್ ವಿಶ್ವಾಸ ಮತ ಗಳಿಸುವ ವೇಳೆಗೆ ಉತ್ತರ ಪ್ರದೇಶ ವಿಧಾನ ಸಭೆಯಲ್ಲಿ ನಡೆದ ಘಟನೆಗಳು ನಿಜಕ್ಕೂ ನಾಚಿಕೆಗೇಡು ಎಂದಿರುವ ಸುರ್ಜಿತ್ "ಬಿಜೆಪಿಗೆ ಈ ಘಟನೆಗಳು ಹಿಡಿದ ದಾರಿಯಿಂದ, ತನ್ನ ಸರಕಾರ ಮುಂದುವರಿದಿರುವುದರಿಂದ ಸಂತೋಷವಾಗಿರಬಹುದು. ಆದರೆ ಇದಕ್ಕೆ ಭಾರೀ ಬೆಲೆ ತೆರಬೇಕಾಗುತ್ತದೆ ಎಂಬುದನ್ನು ಅವರು ಅರಿಯಬೇಕಾಗುತ್ತದೆ. ಇದುವರೆಗೆ ಬೆನ್ನು ತಟ್ಟಿಕೊಂಡಂತೆ ತಾವೊಂದು ತತ್ವ ಬದ್ಧ ಪಕ್ಷ ಎಂದು ಜನರೆದುರು ಹೇಳುವುದು ಅವರಿಗೆ ಇನ್ನು ಮುಂದೆ ಕಷ್ಟವಾಗುತ್ತದೆ. ಅವರು ಹೇಳುತ್ತಿದ್ದ ಉನ್ನತ ನೈತಿಕ ಮಟ್ಟ ಚೂರುಚೂರಾಗಿದೆ. ಅವರು ಅಧಿಕಾರದಾಹಿಗಳು, ಅಧಿಕಾರಕ್ಕಾಗಿ ಯಾವ ದಾರಿ ಹಿಡಿಯಲೂ ಸಿದ್ಧ ಎಂದು ಜನರೆದುರು ಬಟ್ಟ ಬಯಲಾಗಿದೆ" ಎಂದು ಟೀಕಿಸಿದ್ದಾರೆ.

ಇತರ ರಾಜಕೀಯ ಪಕ್ಷಗಳೂ ಈ ಘಟನೆಗಳಿಂದ ಪಾಠ ಕಲಿಯಬೇಕಾಗಿದೆ ಎನ್ನುತ್ತಾರೆ ಸುರ್ಜಿತ್. ಸಮಾನ ಹಿತಾಸಕ್ತಿಗಳನ್ನು ಗುರುತಿಸಿಕೊಳ್ಳದೆ, ಕೇವಲ ಅಧಿಕಾರದಾಟ ನಡೆಸಿದರೆ ಅದರಿಂದ ಏನೂ ಆಗುವುದಿಲ್ಲ ಎಂಬುದನ್ನು ಬಿಎಸ್‌ಪಿ ತಿಳಿಯಬೇಕು. ತನ್ನ ಅನುಕೂಲಕ್ಕೆ ಸರಿಯಾಗಿ ಮೈತ್ರಿಗಳನ್ನು ಏರ್ಪಡಿಸಿಕೊಳ್ಳುವ, ಮುರಿಯುವ, ಆ ಮೂಲಕ ಹೆಚ್ಚು ಸೀಟುಗಳನ್ನು ಪಡೆಯುವ ಕೆಲಸವನ್ನು ಬಹಳ ದಿನ ನಡೆಸಿಕೊಂಡು ಹೋಗಲು ಸಾಧ್ಯವಿಲ್ಲ, ದಲಿತ ಜಾತಿಗಳ ಜನರ ಹಿತಾಸಕ್ತಿಗಳನ್ನು ರಕ್ಷಿಸಬೇಕೆಂದಿದ್ದರೆ ಅವನ್ನು ಪ್ರತಿಪಾದಿಸುವ ಮಿತ್ರರನ್ನೇ ಅವರು ಹುಡುಕಬೇಕಾಗುತ್ತದೆ ಎಂದು ಸುರ್ಜಿತ್ ಹೇಳಿದ್ದಾರೆ.

ಈ ಆಟಗಳಲ್ಲಿ ಅತಿಹೆಚ್ಚು

ಪುಟ 8 ನೋಡಿ

> "ಒಟ್ಟಿನಲ್ಲಿ ಈಗ ನಾವು ನೋಡುತ್ತಿರುವುದೇನು? ಬಂಡವಾಳಶಾಹಿ ರಾಜಕೀಯ ಪಕ್ಷಗಳ ಅವನತಿಯನ್ನು ನಾವು ನೋಡುತ್ತಿದ್ದೇವೆ. ತತ್ವ ವಿಹೀನ, ನೀತಿ ಬಾಹಿರ, ಯಾವುದೇ ಬದ್ಧತೆಯಿಲ್ಲದ ರಾಜಕೀಯ ಇದು. ಹೇಗಾದರೂ ಮಾಡಿ, ಯಾವ ವಿಧಾನದಿಂದಲಾದರೂ ಅಧಿಕಾರ ಸ್ಥಾನದಲ್ಲಿ ಕೂರುವುದೇ ಇವರೆಲ್ಲರ ಏಕೈಕ ಗುರಿಯಾಗಿರುವಂತಿದೆ"
>
> . ಸಿಪಿಐ(ಎಂ) ಕೇಂದ್ರ ಸಮಿತಿ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯ ಸಂಪಾದಕೀಯದಿಂದ

ದೀಪಾವಳಿಯನ್ನು ದಿವಾಳಿ ತೆಗೆಯುವ ಬೆಲೆ ಏರಿಕೆ

ಎಸ್.ಕೆ.ಉಪಾಧ್ಯಾಯ

ದೇಶಾದ್ಯಂತ ಅತ್ಯುತ್ಸಾಹ ಹುಮ್ಮನಸ್ಸಿನಿಂದ ಆಚರಿಸಲ್ಪಡುವ ಹಬ್ಬ ದೀಪಾವಳಿ. ನವ ರಾತ್ರಿ ಮುಗಿಸಿ ದೀಪಾವಳಿಯತ್ತ ಸಾಗಿ ಮಕರ ಸಂಕ್ರಮಣ ದಾಟಿ ಯುಗಾದಿಯಲ್ಲಿ ಮುಖ್ಯ ಹಬ್ಬಗಳು ಮುಕ್ತಾಯವಾಗುತ್ತವೆ. ಈ ಹಬ್ಬಗಳಿಗಾಗಿ ಮುಖ್ಯವಾಗಿ ದೀಪಾವಳಿ-ಯುಗಾದಿ ಹಬ್ಬಗಳಿಗಾಗಿ ಮನೆ ಮಂದಿಗೆಲ್ಲ ತರತರದ ಬಟ್ಟೆ ಬರೆಗಳು, ನಾಲ್ಕೈದು ದಿವಸ ಸಿಹಿ ತಿಂಡಿಗಳ ಭರ್ಜರಿ ಊಟ ನಡೆಯಬೇಕು. ಹೆಣ್ಣು ಮಕ್ಕಳಿಗೆ, ಸೊಸೆಯಂದಿರಿಗೆಲ್ಲಾ ಬಂಗಾರ-ಸೀರೆಗಳ ಉಡುಗೊರೆ ಸಲ್ಲಬೇಕು. ಆಗ ಮಾತ್ರ ನಿಜವಾಗಿಯೂ ಹಬ್ಬ ಆಚರಿಸಿದ್ದು ಸಾರ್ಥಕವಾಗುತ್ತದೆಂದು ನಮ್ಮವರ ಅನಿಸಿಕೆ. ಈ ಅನಿಸಿಕೆಯನ್ನು ಸಾಕಾರಗೊಳಿಸಲು ಸಾಧ್ಯವಾಗುತ್ತಿಲ್ಲವೆಂದು ಗೃಹಿಣಿಯರ ಆತಂಕ.

ಐವತ್ತನೆಯ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ಈ ಸಮಯದಲ್ಲಿ ಐವತ್ತರಷ್ಟು ಬೆಲೆ ಹೆಚ್ಚಳದ ಭಾರವನ್ನೂ ಹೊರಬೇಕಾಗಿದೆಯಲ್ಲ ಎಂದು ಗೊಣಗಾಡುತ್ತಾರೆ ಹಬ್ಬದ ದಿವಸ ನಾನಾ ಕನಸುಗಳನ್ನು ಕಾಣುವ ಮಹಿಳೆಯರು. ಮಹಿಳೆಯರ, ಮಕ್ಕಳ ಕೊರಗು ಸಹಜವಾಗಿಯೇ ಹೊರ ಹೊಮ್ಮುತ್ತಿದೆ. ಹೋದ ವರ್ಷ ದೀಪಾವಳಿ ಹಬ್ಬದ ನಂತರ, ಪೆಟ್ರೋಲ್, ಡೀಸೆಲ್, ಕೆರೋಸಿನ್, ಸಕ್ಕರೆ, ಗೋದಿ, ಅಕ್ಕಿ, ಅಡಿಗೆ ಅನಿಲಗಳ ಬೆಲೆ ಶೇ.25 ರಿಂದ 50 ರಷ್ಟು ಹೆಚ್ಚಾಗಿವೆ. ರೈಲ್ವೆ, ಬಸ್ಸುಗಳ ಪ್ರಯಾಣ ದುಬಾರಿಯಾಗಿದೆ. ಮಾರ್ಕೇಟಿಗೆ ಹೋದರೆ ಮಕ್ಕಳ ಪಟಾಕಿ, ಆಟಿಕೆಗಳ ಬೆಲೆ ಕೈಗೆಟಕುವುದಿಲ್ಲ. ಬಟ್ಟೆ ಬರೆಗಳೆಲ್ಲ ತುಟ್ಟಿಯಾಗಿವೆ. ಸಿಹಿಪದಾರ್ಥಗಳ ಬೆಲೆ ನೂರರಷ್ಟು ಹೆಚ್ಚಾಗಿವೆ. ಅದು ಕಾಂಗ್ರೆಸ್ಸಾಗಲಿ, ಬಿ ಜೆ ಪಿ ಯಾಗಲಿ, ಜನತಾ ದಳವಾಗಲಿ, ಬಡ ಮಧ್ಯಮ ವರ್ಗದ ಜನರ ಕುರಿತು ಚಿಂತಿಸುವುದಿಲ್ಲ. ಅವರೆದುರಿಸುತ್ತಿರುವ ಬೆಲೆಯೇರಿಕೆ ಯಂಥ ಸಮಸ್ಯೆಗಳಿಗೆ ಪರಿಹಾರ ಒದಗಿಸುತ್ತಿಲ್ಲವೆಂದು ಜನ ಸಾಮಾನ್ಯರ ಆಕ್ರೋಶ. ಬರೇ ಹಬ್ಬಕ್ಕಾಗಿಯೇ ಕೊಳ್ಳುವ ವಸ್ತುಗಳ ಬೆಲೆ ಹೆಚ್ಚಳವಾಗಿದೆ ಎಂಬುದು ಮಾತ್ರವಲ್ಲ ದೈನಂದಿನ ಉಪಯೋಗಕ್ಕೆ ಬೇಕಾಗಿರುವ ಕಾಯಿ ಪಲ್ಲೆಗಳೆಲ್ಲ ಕೆಜಿಗೆ ರೂ.15-20 ರಿಂದ ಕೆಳಗಿಳಿಯದೆ, ದೈನಂದಿನ ಜೀವನಕ್ಕೂ ಆತಂಕ ಒಡ್ಡುತ್ತಿರುವುದು ಸಾಮಾನ್ಯ ಜನರಲ್ಲಿ ಅಸಮಾಧಾನದ ಹೊಗೆ ಹೆಚ್ಚಿಸಿದೆ. ಮಾತ್ರವಲ್ಲ ಇಷ್ಟು ದಿವಸ ಪಡಿತರ ಅಂಗಡಿಗಳಲ್ಲಿ ಜನಸಾಮಾನ್ಯರಿಗೆಲ್ಲ 3-4 ಕೆ ಜಿ ಯಷ್ಟಾದರೂ ಆಹಾರ ಧಾನ್ಯ, ಪೂರೈಸಲಾಗುತ್ತಿದೆ. ಕಳೆದ ಮೂರು ತಿಂಗಳಿಂದ ಅದು ಕೂಡ ನಿಲ್ಲಿಸಲ್ಪಟ್ಟು ಎಲ್ಲದಕ್ಕೂ ವ್ಯಾಪಾರಸ್ಥರನ್ನೇ ಅವಲಂಬಿಸಬೇಕಾಗಿ ಬಂದಿರುವುದು ಬೆಂಕಿಗೆ ಎಣ್ಣೆ ಸುರಿದಂತಾಗಿದೆ.

ಕಾಂಗ್ರೆ, ಜನತಾದಳ, ಬಿ.ಜೆ.ಪಿ ಪಕ್ಷಗಳ ಆಡಳಿತಗಳಿಗೆ ಪರ್ಯಾಯವಾಗಿ ಪಶ್ಚಿಮ ಬಂಗಾಲ, ಕೇರಳ, ತ್ರಿಪುರ ಸರಕಾರಗಳಿವೆ.

ಬೆಂಗಳೂರಿನ ತಿಪ್ಪಸಂದ್ರದಲ್ಲಿರುವ ಕೇರಳೀಯರು, ಮಲ್ಲೇಶ್ವರಂನಲ್ಲಿರುವ ಬಂಗಾಲಿಗಳು ಕೇರಳ-ಪಶ್ಚಿಮ ಬಂಗಾಲಗಳತ್ತ ಬೊಟ್ಟು ಮಾಡಿ ತೋರಿಸುತ್ತಾರೆ. ಕೇರಳದಲ್ಲಿ ಹೊಸ ವರ್ಷ ಪ್ರಾರಂಭದ "ಓಣಂ" ಹಬ್ಬ ಆಚರಿಸುತ್ತಾರೆ. ಪಶ್ಚಿಮ ಬಂಗಾಲದಲ್ಲಿ ನವರಾತ್ರಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಜನ ಚಿಂತಿಸಬೇಕಾದ ಅವಶ್ಯಕತೆಯಿಲ್ಲ ಎಂಬುದು ಅವರ ವಾದ. ಅದು ಸರಿ. ಕೇರಳದಲ್ಲಿ ಬರೇ ಓಣಂ ಹಬ್ಬಕ್ಕಾಗಿ ಮಾತ್ರವಲ್ಲ. ವರ್ಷದ ಹನ್ನೆರಡು ತಿಂಗಳಲ್ಲಿಯೂ ಸಾರ್ವಜನಿಕರಿಗೆ ಸಕ್ಕರೆ, ಅಕ್ಕಿ, ಗೋದಿಗಳನ್ನೆಲ್ಲಾ ಕಡಿಮೆ ಬೆಲೆಯಲ್ಲಿ "ಮಾವೇಲಿ ಸ್ಟೋರ್ಸ್"ಗಳ ಮೂಲಕ ವಿತರಣೆ ಮಾಡುತ್ತಾರೆ. ಕೇರಳದಲ್ಲಿ 633 "ಮಾವೇಲಿ ಸ್ಟೋರ್ಸ್"ಗಳಿವೆ. ಸಾರ್ವಜನಿಕ ವಿತರಣೆಗಾಗಿ ರೇಶನ್ ಅಂಗಡಿಗಳಲ್ಲದೆ ಮಾರ್ಕೆಟ್‌ನಲ್ಲಿ ವ್ಯಾಪಾರಸ್ಥರು ನಿರ್ಧರಿಸುವ ಬೆಲೆ ಹೆಚ್ಚಳದಿಂದ ಬಡ-ಮಧ್ಯಮ ವರ್ಗದವರನ್ನು ರಕ್ಷಿಸುವ ಉದ್ದೇಶದಿಂದ ಕೇರಳ ಸಿವಿಲ್ ಸಪ್ಲೈಸ್ ಕಾರ್ಪೋರೇಷನ್ ಈ ವ್ಯವಸ್ಥೆಯನ್ನು ಕೈಗೊಂಡಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದ ಎಡ ಪ್ರಜಾಪ್ರಭುತ್ವ ಸರಕಾರ ಈ ವ್ಯವಸ್ಥೆಯ ಮೂಲಕ ಹಬ್ಬ ಹುಣ್ಣಿಮೆ ದಿವಸಗಳಲ್ಲಿ ಬೆಲೆ ಹೆಚ್ಚಿಸಿ ಜನರನ್ನು ಸುಲಿಯುತ್ತಿರುವ ವರ್ತಕರಿಂದ, ಜನರಿಗೆ ರಕ್ಷಣೆ ನೀಡುತ್ತಿದೆ. ರೇಷನ್ ಅಂಗಡಿಗಳಲ್ಲಿ ರೇಷನ್ ಕಾರ್ಡುಗಳ ಮೂಲಕ ವಸ್ತುಗಳನ್ನು ವಿತರಣೆ ಮಾಡಲಾಗುವುದು. ಮಾವೇಲಿ ಸ್ಟೋರ್ಸ್‌ಗಳಲ್ಲಿ ರೇಶನ್ ಕಾರ್ಡಿನ ಅವಶ್ಯಕತೆಯಿಲ್ಲದೆ, ನ್ಯಾಯಬೆಲೆಯಲ್ಲಿ, ಆಹಾರ ಧಾನ್ಯ, ಕಾಯಿಪಲ್ಲೆ, ಸೋಪ್ ಮುಂತಾದವನ್ನೆಲ್ಲಾ ಮಾರಲಾಗುವುದು. ನಮ್ಮ ಸರ್ಕಾರಕ್ಕೇನು ಧಾಡಿ ಎಂದು ಕೇರಳ ಮಹಿಳೆಯರ ಪ್ರಶ್ನೆ.

ಮಲ್ಲೇಶ್ವರದಲ್ಲಿರುವ ಬಂಗಾಲಿಗಳ ವಾದವೂ ಅದೇ ರೀತಿ. ಪಶ್ಚಿಮ ಬಂಗಾಲದ ಜ್ಯೋತಿ ಬಸು ಸರಕಾರ ಹದಿನಾಲ್ಕು ವಸ್ತುಗಳನ್ನು ರೇಶನ್ ಅಂಗಡಿಗಳ ಮೂಲಕ ಮಾರಾಟ ಮಾಡುತ್ತಿದ್ದಾರೆ. ಇದು ಅಲ್ಲಿಯ ಮಹಿಳೆಯರಿಗೆ ಅತಿ ದೊಡ್ಡ ರಕ್ಷಣೆಯಾಗಿದೆ. ಮಾರ್ಕೆಟ್ಟಿನಲ್ಲಿರುವ ಬೆಲೆಯ ಹೆಚ್ಚಳದ ಮಂಗ ಮುಷ್ಟಿಯಲ್ಲಿ ಸಿಕ್ಕಿಕೊಳ್ಳುವ ಅವಾಂತರವನ್ನು ಪಶ್ಚಿಮ ಬಂಗಾಲದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಡರಂಗ ಸರಕಾರ ತಪ್ಪಿಸಿದೆ. ಎಡ ಪಕ್ಷಗಳ ಬೆಂಬಲದಿಂದ ಆಡಳಿತ ನಡೆಸುತ್ತಿರುವ ಕೇಂದ್ರ ಮತ್ತು ರಾಜ್ಯ ಸರಕಾರ ಪಶ್ಚಿಮ ಬಂಗಾಲ, ಕೇರಳ ಸರಕಾರಗಳು ಕೈಗೊಂಡಿರುವ ಇಂಥ ಉತ್ತಮ, ಜನಪರ ನೀತಿಯನ್ನು ಅನುಸರಿಸಲು ಯಾಕೆ ಹಿಂದೇಟು ಹಾಕುತ್ತಿದ್ದಾರೆ ಎಂಬ ಪ್ರಶ್ನೆ ಈ ಜನರಿಂದ ಕೇಳಿ ಬರುತ್ತಿದೆ.

ಬಂಡವಾಳಶಾಹಿ ಭೂಮಾಲಕ ವರ್ಗಗಳ ನೆಲೆಗಟ್ಟಿರುವ ಈ ಪಕ್ಷಗಳು ತಮ್ಮ ವರ್ಗಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲು ತಯಾರಿಲ್ಲ. ತಮ್ಮ ವರ್ಗದ ರಕ್ಷಣೆ ಮಾಡಬೇಕು. ವ್ಯಾಪಾರಿ ವರ್ಗದ ಹಿತ ಕಾಪಾಡಬೇಕು, ಕಾಳಸಂತೆಕೋರರ ಲಾಭಕ್ಕೆ ಹಾನಿಯಾಗದಂತೆ ನೋಡಿಕೊಳ್ಳಬೇಕು. ಹಾಗಿರುವಾಗ ಬೆಲೆಯೇರಿಕೆಯನ್ನು ತಡೆಗಟ್ಟಲು ಸಾಧ್ಯವೇ? ರೇಶನ್ ಅಂಗಡಿಗಳ ಮೂಲಕ ಸರಕಾರಿ ಸ್ಟೋರ್ಸ್‌ಗಳ ಮೂಲಕ ಅಗ್ಗದರದಲ್ಲಿ ಅತ್ಯಾವಶ್ಯಕ ವಸ್ತುಗಳನ್ನು ಮಾರಾಟ ಮಾಡಲು ಸಾಧ್ಯವೆ? ಆ ಕಾರಣದಿಂದಲೇ ದೇಶದಲ್ಲಿ ಸಾಕಷ್ಟು ಅಕ್ಕಿ, ಗೋದಿ, ಸಕ್ಕರೆ ಸಂಗ್ರಹವಿದ್ದರೂ, ಉತ್ಪಾದಕರ, ವ್ಯಾಪಾರಸ್ಥರ ಒತ್ತಡಕ್ಕೆ ಮಣಿದು ರೇಶನ್ ಅಂಗಡಿಗಳಲ್ಲಿ ಮಾರುವ ಸಕ್ಕರೆ, ಗೋದಿ, ಅಕ್ಕಿ ಬೆಲೆಗಳನ್ನೆಲ್ಲಾ ಪ್ರತಿವರ್ಷ ಹೆಚ್ಚಿಸುತ್ತಿದ್ದಾರೆ. ಮಾರ್ಕೇಟಿನಲ್ಲಿ ವ್ಯಾಪಾರಸ್ಥರು ಬೆಲೆ ಹೆಚ್ಚಿಸಿದಂತೆ ರೇಶನ್ ಅಂಗಡಿಗಳಲ್ಲಿ ಮಾರಲ್ಪಡುವ ಸಕ್ಕರೆ, ಅಕ್ಕಿ, ಗೋಧಿಯ ಬೆಲೆಯನ್ನೂ ಹೆಚ್ಚಿಸಿ ಮಾರ್ಕೇಟಿನ ಬೆಲೆಗೆ ಸಮಾನಾಂತರಗೊಳಿಸುವ ಪ್ರಯತ್ನ ನಡೆದಿದೆ. ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್‌ಗಳ ಒತ್ತಡಕ್ಕೆ ಮಣಿಯುತ್ತಿರುವ ಕೇಂದ್ರ ಸರ್ಕಾರ ಆರ್ಥಿಕ ನೀತಿಯನ್ನು ವಿರೋಧಿಸುತ್ತ, ಎಂಥ ಸಂಕಷ್ಟ ಬಂದರೂ ಕೂಡ ಮಧ್ಯಮ, ಕೆಳವರ್ಗದ ಜನರಿಗೆ ಸ್ವಲ್ಪವಾದರೂ ಪರಿಹಾರ ಸಿಗಬೇಕೆಂಬ ಉದ್ದೇಶದಿಂದ ತಮ್ಮದೇ ಆದ ವ್ಯವಸ್ಥೆ ಮೂಲಕ ಹಬ್ಬದ ದಿನಗಳಲ್ಲಿ ಜನರಿಗೆ ಬೆಲೆ ಹೆಚ್ಚಳದ ಭೂತದಿಂದ ರಕ್ಷಣೆ ನೀಡುತ್ತಿದ್ದಾರೆ. ಆದರೆ ನಮ್ಮ ಸರಕಾರ ಈ ದಿಸೆಯಲ್ಲಿ ವಿಫಲವಾಗಿವೆ. ದೀಪಾವಳಿ ಹಬ್ಬದ ದೀಪಕ್ಕೆ ಎಣ್ಣೆಯ ಬದಲಾಗಿ ನೀರೆರೆಯುತ್ತಿವೆ.

ನವೆಂಬರ್ 1, ಕರ್ನಾಟಕ ಏಕೀಕರಣದ ಕನಸು ಈಡೇರಿದ ದಿನ. ಭಾಷಾವಾರು ಏಕೀಕರಣದ ಕನಸು ಕೇವಲ ಕನ್ನಡಿಗರಿಗಷ್ಟೇ ಅಲ್ಲ. ಇದು ಇಡೀ ದೇಶದ ವಿವಿಧ ಭಾಷಾ ಗುಂಪುಗಳ ಕನಸು. ಸ್ವಾತಂತ್ರ್ಯ ಹೋರಾಟದ ಭಾಗವಾಗಿ ರೂಪುಗೊಂಡು ಬೆಳೆದ ಚಳುವಳಿ. ಸ್ವಾತಂತ್ರ್ಯದ ನಂತರ ಅಧಿಕಾರ ಪಡೆದವರ ವಚನಭಂಗದಿಂದಾಗಿ ನಂತರವೂ ಮುಂದುವರೆದು ಹಲವು ಪ್ರಾಣಗಳನ್ನೂ ಬಲಿತೆಗೆದುಕೊಂಡು ಕೊನೆಗೂ ಕರ್ನಾಟಕವೂ ಸೇರಿದಂತೆ ಎಲ್ಲಾ ಭಾಷಾವಾರು ಪ್ರಾಂತ್ಯಗಳ ರಚನೆಯೊಂದಿಗೆ ಯಶಸ್ವಿಯಾದ ಚಳುವಳಿ. ಭಾಷಾವಾರು ಪ್ರಾಂತ್ಯಗಳೇನೋ ಆದವು. ಆದರೆ ಈಗಲೂ ಅವಕ್ಕೆ ಸಾಕಷ್ಟು ಅಧಿಕಾರವಿಲ್ಲ. ಆದ್ದರಿಂದ ಈ ಚಳುವಳಿ ಹೊಸ ರೂಪದಲ್ಲಿ, ಮುಂದುವರಿಯುತ್ತಿದೆ-ಕೇಂದ್ರ, ರಾಜ್ಯ ಸಂಬಂಧಗಳ ಪುನರ್‌ರಚನೆಯ ಹೋರಾಟದ ರೂಪದಲ್ಲಿ ಸ್ವಾತಂತ್ರ್ಯದ ಸುವರ್ಣೋತ್ಸವದ ಸಂದರ್ಭದಲ್ಲಿ ಈ ಹೋರಾಟದ ಇತಿಹಾಸವನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರವರ ಈ ಲೇಖನ ನೆನಪಿಸುತ್ತಿದೆ.

ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಹೋರಾಟಗಳು ಪ್ರಜಾಸತ್ತಾತ್ಮಕ ಮುನ್ನಡೆಯ ಹೋರಾಟಗಳಾಗಿದ್ದವು

ಪ್ರಕಾಶ್ ಕಾರಟ್

ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಹೋರಾಟ ಸ್ವತಂತ್ರ ಭಾರತದಲ್ಲಿ ಸಾಮೂಹಿಕ ಆಂದೋಲನವಾಗಿ ಬೆಳೆದ ಒಂದು ಪ್ರಮುಖ ಆಂದೋಲನ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನೀಡಿದ ಒಂದುಗಂಭೀರ ವಚನವನ್ನು ಈಡೇರಿಸ ಲಿಕ್ಕಾಗಿ ಮುಂದುವರಿದ ಆಂದೋಲನವದು. ಭಾರತ ಒಂದು ಬಹುದೇಶಿಯ, ಬಹುಭಾಷಾ ರಾಷ್ಟ್ರವೆಂಬುದೊಂದು ವಾಸ್ತವಿಕತೆ. ಆದ್ದರಿಂದ ಅಖಿಲ ಭಾರತ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟ ದಿಂದಾಗಿ ಎಲ್ಲಾ ಭಾರತೀಯ ರಾಷ್ಟ್ರೀಯ ಜಾಗೃತಿಯಾಯಿತಷ್ಟೇ ಅಲ್ಲ, ಅದಕ್ಕೆ ಸಮಾನಾಂತರವಾಗಿ ಪ್ರಮುಖ ಭಾಷಾ ಗುಂಪುಗಳ ಜನಗಳಲ್ಲಿ ಭಾಷಾ-ದೇಶೀಯ ಪ್ರಜ್ಞೆಯ ಬೆಳವಣಿಗೆಯೂ ಕಂಡುಬಂತು. ಈ ಉಪ-ರಾಷ್ಟ್ರೀಯ ಜಾಗೃತಿ ಬ್ರಿಟಿಶ್ ಆಳ್ವಿಕೆಯ ಫಲಿತಾಂಶವೂ ಆಗಿತ್ತು. ಜತೆಗೆ ಬಂಡವಾಳಶಾಹಿಯ ಬೆಳವಣಿಗೆಯ, ಹೊಸ ವರ್ಗಗಳು ರಚನೆಗೊಂಡುದರ ಫಲಿತಾಂಶವೂ ಆಗಿತ್ತು. ಇವೆಲ್ಲಾ ಸಾಮ್ರಾಜ್ಯ ಶಾಹಿ-ವಿರೋಧಿ ಆಂದೋಲನ ದಲ್ಲಿ ಜನರನ್ನು ಅಣಿನೆರೆಸಲು ಕಾಣಿಕೆ ನೀಡಿದವು.

ಮೇಲೆ ಹೇಳಿದ ಈ ಭಾಷಾ-ದೇಶೀಯ ಪ್ರಜ್ಞೆ ಪ್ರಜಾಪ್ರಭುತ್ವವಾದಿ ಸ್ವರೂಪ ಹೊಂದಿದ್ದುದನ್ನು ಗುರುತಿಸಿದ ಗಾಂಧೀಜಿ ನೇತೃತ್ವದ ಕಾಂಗ್ರೆಸ್, ಆ ಮೂಲಕ ಜನ ಗಳನ್ನು ಅಣಿನೆರೆಸುವ ಸಾಧ್ಯತೆಯನ್ನು ಮನಗಂಡಿತು. ಆದ್ದರಿಂದ ಪ್ರಾಂತ್ಯಗಳನ್ನು ಭಾಷಾವಾರು ಆಧಾರದ ಮೇಲೆ ಮರುಸಂಘಟಿಸಬೇಕು, ಇದು ಸ್ವಾತಂತ್ರ್ಯದ ನಂತರದ ಪ್ರಮುಖ ಕೆಲಸಗಳಲ್ಲಿ ಒಂದು ಎಂದು ಸ್ವೀಕರಿಸಿತು.

ಕಾಂಗ್ರೆಸ್ ನೀಡಿದ ವಚನ

ಭಾಷಾ-ದೇಶೀಯ ಪ್ರಜ್ಞೆ(ಅಂದರೆ ಕರ್ನಾಟಕದ ಸಂದರ್ಭದಲ್ಲಿ ಹೇಳುವು ದಾದರೆ ಕನ್ನಡ ಭಾಷಿಕ ಪ್ರದೇಶಗಳ ಏಕೀಕರಣ ಹಾಗೂ ಕನ್ನಡ ಭಾಷೆಯ ಬೆಳವಣಿಗೆ ಆಗಬೇಕೆಂಬ ಪ್ರಜ್ಞೆ-ಅನು.) ಯ ಬೆಳವಣಿಗೆ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಪ್ರಜ್ಞೆ ಒಟ್ಟೊಟ್ಟಿಗೇ ಬೆಳೆದು ಬಂತು. 1905 ರಲ್ಲಿ ಬ್ರಿಟಿಶ ಆಳರಸರು ಬಂಗಾಳದ ವಿಭಜನೆ ಮಾಡಿದ್ದರಿಂದ ಒಂದು ಉತ್ಕ್ರಾಂತಿ ಭುಗಿಲೆದ್ದಿತು. 1908 ರಲ್ಲಿ ಕಾಂಗ್ರೆಸ್ ಪಕ್ಷ ಬಿಹಾರ ಪ್ರಾಂತೀಯ ಕಾಂಗ್ರೆಸ್ ಸಮಿತಿಯನ್ನು ರಚಿಸಿತು. ಬ್ರಿಟಿಶ್ ಆಳ್ವಿಕೆಯಲ್ಲಿ ಪ್ರಾಂತ್ಯಗಳನ್ನು ಅವರ ಆಡಳಿತದ ಅನುಕೂಲತೆಗಳಿಗೆ ಅನುಗುಣ ವಾಗಿ ರಚಿಸಲಾಗಿತ್ತು. ಇವೆಲ್ಲಾ ಬಹುಭಾಷಾ ಪ್ರಾಂತ್ಯಗಳಾಗಿದ್ದವು. ಆಂಧ್ರ ಮಹಾಸಭಾ ದಂತಹ ಸಂಘಟನೆಗಳು(1913 ರಲ್ಲಿ ಸ್ಥಾಪನೆಗೊಂಡದ್ದು), ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಾಹಿತ್ಯಿಕ ಸಂಘಟನೆಗಳು ಹೆಚ್ಚುತ್ತಿದ್ದ ಭಾಷಾ-ದೇಶೀಯ ಬೇಡಿಕೆಗಳನ್ನು ಹೆಚ್ಚೆಚ್ಚಾಗಿ ಎತ್ತಲಾರಂಭಿಸಿದವು.

1920 ರಲ್ಲಿ ನಡೆದ ನಾಗಪುರ ಎಐಸಿಸಿ ಅಧಿವೇಶನ ಪ್ರಾಂತ್ಯಗಳನ್ನು ಭಾಷಾವಾರಾಗಿ ಪುನರ್ರಚಿಸಬೇಕೆಂಬ ನಿರ್ಣಯವನ್ನು ಅನು ಮೋದಿಸಿತು. ಅಲ್ಲದೆ ತನ್ನ ಸಂಘಟನೆಯನ್ನು ಭಾಷಾವಾರು ಪ್ರಾಂತ್ಯಗಳ ಆಧಾರದ ಮೇಲೆ ರಚಿಸುವ ನಿರ್ಣಯವನ್ನು ಅನು ಮೋದಿಸಿತು. ಇದರ ನಂತರ ಕಾಂಗ್ರೆಸ್ ತನ್ನ ಪ್ರದೇಶ ಕಾಂಗ್ರೆಸ್ ಸಮಿತಿಗಳನ್ನು ಭಾಷಾವಾರು ಆಧಾರದಲ್ಲಿ ರಚಿಸಿತು. ಉದಾ: ಆಂಧ್ರಪ್ರದೇಶ, ಕರ್ನಾಟಕ, ಒರಿಸ್ಸಾ, ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಗಳು ಇತ್ಯಾದಿ.

ಒಂದು ಭಾಷಾ-ದೇಶೀಯ ಗುಂಪಿನ ಭಾಗವೆಂಬ ಪ್ರಜ್ಞೆ ಮತ್ತು ಆ ಸಮುದಾಯದ ಭಾಷಾ ಮತ್ತು ಸಾಂಸ್ಕೃತಿಕ ಭಾವನೆಗಳನ್ನು ಅಭಿವ್ಯಕ್ತಗೊಳಿಸುವ ಒತ್ತಾಸೆಯೆಂಬುದು ಒಂದು ದೇಶೀಯತೆಯ ಬೆಳವಣಿಗೆಯ ಪ್ರಕ್ರಿಯೆ. ಭಾರತದಲ್ಲಿ ಇದು ಎರಡು ಪ್ರವಾಹಗಳಲ್ಲಿ ನಡೆಯಿತು-ಒಂದು ಅಖಿಲ ಭಾರತ ಪ್ರಜ್ಞೆ ಮತ್ತು ಎರಡನೆಯದಾಗಿ, ಭಾರತದ ವಿವಿಧ ಭಾಷಾ-ದೇಶೀಯತೆಯ ಬೆಳವಣಿಗೆ. ಈ ಎರಡು ಏಕಕಾಲದಲ್ಲಿ ನಡೆಯುವ ಪ್ರಕ್ರಿಯೆಗಳು ಸೇರಿದ್ದರಿಂದಲೇ ರಾಷ್ಟ್ರೀಯ ಸ್ವಾತಂತ್ರ್ಯ ಆಂದೋಲನಕ್ಕೆ ಮುಂದೊತ್ತಲು ಸಾಧ್ಯವಾಯಿತು.

ವಚನ ಈಡೇರಿಸಲು ಹಿಂಜರಿಕೆ

ಪ್ರಾಂತ್ಯಗಳ ಭಾಷಾವಾರು ಮರು ವಿಂಗಡನೆಯ ವಚನ ನೀಡಿದ ರಾಷ್ಟ್ರೀಯ ಬಂಡವಾಳಶಾಹಿಗಳ ಪ್ರತಿನಿಧಿ ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯದ ನಂತರ ತನ್ನ ವಚನ ಈಡೇರಿಸಲು ಹಿಂದೇಟು ಹಾಕಿತು. 'ಪ್ರಾಂತೀಯತೆ' ಬೆಳೆಯುತ್ತದೆ, ಹೊಸದಾಗಿ ಸ್ವತಂತ್ರಗೊಂಡ ದೇಶ ಹರಿದು ಹಂಚಿಹೋಗುತ್ತದೆ ಎಂಬ ನೆವಗಳನ್ನು ಕಾಂಗ್ರೆಸ್ ನೀಡಿತು. 1948 ರಲ್ಲಿ ಕಾಂಗ್ರೆಸ್ ಜವಾಹರಲಾಲ್ ನೆಹರೂ, ವಲ್ಲಭಾಯಿ ಪಟೇಲ್ ಹಾಗೂ ಪಟ್ಟಾಭಿ ಸೀತಾ ರಾಮಯ್ಯರಿದ್ದ ಸಮಿತಿಯನ್ನು (ಜೆ.ವಿ.ಪಿ. ಸಮಿತಿ) ರಚಿಸಿತು. ಈ ಸಮಿತಿಯ ವರದಿ ಭಾಷಾವಾರು ಆಧಾರದಲ್ಲಿ ರಾಜ್ಯಗಳ ರಚನೆಯ ನೀತಿಯನ್ನು ಅನುಮೋದಿಸಲಿಲ್ಲ, ಆದರೆ ಆಂಧ್ರಪ್ರದೇಶದ ಬೇಡಿಕೆಯಲ್ಲಿ ಶಕ್ತಿಯಿದೆ ಎಂದಿತು.

ಭಾಷಾವಾರು ಪ್ರಾಂತ್ಯದ ವಿಚಾರಕ್ಕೆ ಪ್ರತಿರೋಧ ಏಕೆ ಬಂತು? ಕಾಂಗ್ರೆಸ್‌ನ ಹಾಗೂ ಹೊಸದಾಗಿ ಸ್ವತಂತ್ರಗೊಂಡ ಸರಕಾರದ ವರ್ಗಸ್ವರೂಪವೇ ಇದಕ್ಕೆ ಕಾರಣ. ದೊಡ್ಡ ಬಂಡವಾಳಶಾಹಿಗಳಿಗೆ ಬೇಕಾಗಿದ್ದುದ್ದು ಒಂದು ಏಕೀಕೃತ ಭಾರತೀಯ ಮಾರುಕಟ್ಟೆ ಹಾಗೂ ತಮ್ಮ ಹಿತಾಸಕ್ತಿಗಳನ್ನು ಈಡೇರಿಸಲು ಒಂದು ಕೇಂದ್ರೀಕೃತ ಪ್ರಭುತ್ವ ವ್ಯವಸ್ಥೆ. ಭಾಷಾವಾರು ಪ್ರಾಂತ್ಯಗಳ ರಚನೆ ಈ ಹಿತಾಸಕ್ತಿ ಈಡೇರಿಕೆಗೆ ಬಾಧಕವಾಗುತ್ತದೆ ಎಂದು ಅವರಿಗನಿಸಿತು. ಅಲ್ಲದೆ ದೇಶವಿಭಜನೆಯ ಅನುಭವದಿಂದಾಗಿ ಕೂಡಾ ಕಾಂಗ್ರೆಸ್ ಇನ್ನೊಂದು ಈ ರೀತಿಯ ಪ್ರಮುಖ ಮರುವಿಂಗಡಣೆ ನಡೆಸಲು ಹಿಂಜರಿಯಿತು.

ಆದರೆ ಆಳುವ ವರ್ಗಗಳ ಈ ಹಿತಾಸಕ್ತಿಗಳು ಶ್ರೀಸಾಮಾನ್ಯನ ಆಕಾಂಕ್ಷೆಗಳಿಗೆ, ಸಾಮ್ರಾಜ್ಯಶಾಹಿ-ವಿರೋಧಿ ಆಂದೋಲನದ ಅಭಿನ್ನ ಅಂಗವಾಗಿದ್ದ ಭಾಷಾ-ದೇಶೀಯ ಭಾವನೆಗಳಿಗೆ ವಿರುದ್ಧವಾಗಿದ್ದವು. ಜನತೆ ತಮ್ಮದೇ ಭಾಷೆಯ ಮೂಲಕ ರಾಜಕೀಯ ಚಟುವಟಿಕೆಗಳಲ್ಲಿ ಮತ್ತು ಆಡಳಿತದಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ಸ್ಪಷ್ಟ ಭಾಷಾ-ದೇಶೀಯತೆಯ ಗಡಿಗಳ ಆಧಾರದಲ್ಲಿ ರಾಜ್ಯಗಳನ್ನು ರಚಿಸುವುದು ಅಗತ್ಯವಾಗಿತ್ತು. ಏಕೆಂದರೆ ಭಾರತದಲ್ಲಿ ಒಂದು ಪ್ರಜಾಸತ್ತಾತ್ಮಕ ಪ್ರಭುತ್ವ ವ್ಯವಸ್ಥೆ ಹಾಗೂ ಒಕ್ಕೂಟ ರಾಜಕೀಯ ವ್ಯವಸ್ಥೆಗೆ ಇದೇ ಅಡಿಗಲ್ಲು. ಮುಂಬೈ, ಮದ್ರಾಸ್, ಬಂಗಾಳದಂತಹ ಬಹುಭಾಷಾ ಪ್ರಾಂತ್ಯ ಗಳಲ್ಲಿ ಆಡಳಿತ, ಶಿಕ್ಷಣ, ನ್ಯಾಯಾಲಯ ಗಳಲ್ಲಿ ಒಂದು ಸಮಾನ ಭಾಷೆಯ ಬಳಕೆಗೆ ಅವಕಾಶವಿರಲಿಲ್ಲ. ಒಂದು ಪ್ರಜಾಸತ್ತಾತ್ಮಕ ಆಳ್ವಿಕೆ ಸಾಧ್ಯವಾಗಬೇಕಾದರೆ ತಮ್ಮದೇ ಸ್ವಂತ ಭಾಷೆಯನ್ನು ಶಿಕ್ಷಣ ಆಡಳಿತ ಹಾಗೂ ಪ್ರಭುತ್ವ ವ್ಯವಹಾರಗಳ ಮಾಧ್ಯಮವಾಗಿ ಬಳಸುವಂತಾಗುವುದು ಅತ್ಯಗತ್ಯ.

ಕಮ್ಯುನಿಸ್ಟರ ಗಮನಾರ್ಹ ಪಾತ್ರ

ಕೇಂದ್ರದಲ್ಲಿನ ಕಾಂಗ್ರೆಸ್‌ನ ತಿರಸ್ಕಾರದ ನಿಲುವಿನಿಂದಾಗಿ ರಾಜ್ಯಗಳ ಪುನರ್ರಚನೆಗೆ ಒತ್ತಾಯಿಸಿ ಸಾಮೂಹಿಕ ಆಂದೋಲನಗಳು ಬೆಳೆದು ಬಂದವು. ಮೊದಲು ಪ್ರಮುಖ ಹೋರಾಟ ಮೂಡಿ ಬಂದದ್ದು ಆಂಧ್ರ ಪ್ರದೇಶ ರಚನೆಯ ಪ್ರಶ್ನೆಯ ಮೇಲೆ. ನಂತರ ಐಕ್ಯ ಕೇರಳ, ಕರ್ನಾಟಕ, ಸಂಯುಕ್ತ ಮಹಾರಾಷ್ಟ್ರ, ಗುಜರಾತ್ ಇತ್ಯಾದಿ ಹೋರಾಟಗಳು 1950 ರ ದಶಕದಲ್ಲಿ ಕಂಡುಬಂದವು.

ಈ ಭಾಷಾವಾರು ಪ್ರಾಂತ್ಯಗಳ ಬೇಡಿಕೆಯಲ್ಲಿ ಕಮ್ಯುನಿಸ್ಟ್ ಪಕ್ಷ ಗಮನಾರ್ಹ ಪಾತ್ರ ವಹಿಸಿತು. ಈ ಬೇಡಿಕೆಗೆ ಕಮ್ಯುನಿಸ್ಟರು ಒಂದು ಸೈದ್ಧಾಂತಿಕ ಆಧಾರ ವನ್ನು ಒದಗಿಸಿದ್ದಲ್ಲದೆ ಈ ಸಾಮೂಹಿಕ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ದರು ಹಾಗೂ ಹಲವೆಡೆ ನೇತೃತ್ವವನ್ನೂ ನೀಡಿದರು. ಸ್ವಾತಂತ್ರ್ಯದ ಮೊದಲೇ ಕಮ್ಯುನಿಸ್ಟರ ಪ್ರಯತ್ನಗಳು ಈ ಪ್ರಜಾಸತ್ತಾತ್ಮಕ ಬೇಡಿಕೆಯ ಮೇಲೆ ಗಮನ ಕೇಂದ್ರೀಕರಿಸಲು ನೆರವಾಗಿದ್ದವು. ವಿಶಾಲಾಂಧ್ರ ಕುರಿತು ಪಿ.ಸುಂದರಯ್ಯನವರ ಕಿರುಹೊತ್ತಿಗೆ, ಕೇರಳದ ದೇಶಿ ಪ್ರಶ್ನೆಯ ಬಗ್ಗೆ ಇ.ಎಂ.ಎಸ್. ನಂಬೂದರಿಪಾಡ್ ರ ಪುಸ್ತಕ ಮತ್ತಿತರ ಕಮ್ಯುನಿಸ್ಟ್ ಪ್ರಕಟಣೆಗಳು ಈ ಭಾಷಾ-ದೇಶೀಯತೆಯ ಪ್ರಶ್ನೆಯನ್ನು ಕುರಿತಂತೆ ಒಂದು ಅತ್ಯಂತ ವ್ಯವಸ್ಥಿತ ಹಾಗೂ ವೈಜ್ಞಾನಿಕವಾದ ನಿಲುವನ್ನು ಒದಗಿಸಿ ಅದನ್ನು ಪಾಳೆಯಗಾರಿ-ವಿರೋಧಿ ಹೋರಾಟ ದೊಂದಿಗೆ ಹಾಗೂ ವಿಶಾಲ ಪ್ರಜಾಪ್ರಭುತ್ವ ಆಂದೋಲನದೊಂದಿಗೆ ಬೆಸೆದವು.

ಆಂಧ್ರಪ್ರದೇಶದ ರಚನೆ

ವಿಶಾಲಾಂಧ್ರಕ್ಕಾಗಿ ಜನಪ್ರಿಯ ಹೋರಾಟದ ಪರಿಣಾಮವಾಗಿ ಹಿರಿಯ ಗಾಂಧಿವಾದಿ ಪೊಟ್ಟಿ ಶ್ರೀರಾಮುಲು ಅನಿರ್ದಿಷ್ಟ ಕಾಲದ ಉಪವಾಸ ಮುಷ್ಕರ ಕೈಗೊಂಡರು. 56 ದಿನಗಳ ಉಪವಾಸದ ನಂತರ ತೀರಿಕೊಂಡರು. ಪ್ರತಿಭಟನಾ ಮತ ಪ್ರದರ್ಶನಗಳ ಮೇಲೆ ಪೋಲೀಸ್ ಗೋಳೀಬಾರುಗಳಲ್ಲಿ ಹಲವಾರು ಜನ ಪ್ರಾಣಕಳೆದುಕೊಂಡರು. ಕೊನೆಗೂ ಕೇಂದ್ರ ಸರ್ಕಾರ ತನ್ನ ಪ್ರತಿರೋಧ ಬಿಟ್ಟು ಡಿಸೆಂಬರ್ 1952 ರಲ್ಲಿ ಆಂಧ್ರಪ್ರದೇಶ ರಚನೆಗೆ ಒಪ್ಪಬೇಕಾಗಿ ಬಂತು. ಈ ಹೋರಾಟ ಯಶಸ್ವಿಯಾದ ಕೂಡಲೇ ಕೇರಳ, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ಮತ್ತಿತರ ರಾಜ್ಯಗಳಲ್ಲೂ ಆಂದೋಲನ ತೀವ್ರಗೊಂಡಿತು.

ಭಾಷಾವಾರು ಪ್ರಾಂತ್ಯಗಳ ರಚನೆಗೆ ಒತ್ತಾಯಿಸಿ ದೊಡ್ಡ ಮತಪ್ರದರ್ಶನಗಳು, ಚಳುವಳಿಗಳು ನಡೆದವು. ಇದರಿಂದಾಗಿ ಕೇಂದ್ರ ಸರಕಾರ 1953 ರಲ್ಲಿ ಒಂದು ರಾಜ್ಯ ಪುನರ್ವಿಂಗಡಣಾ ಆಯೋಗವನ್ನು ನೇಮಿಸಿತು. 1955 ರಲ್ಲಿ ಈ ಸಮಿತಿ ತನ್ನ ವರದಿಯನ್ನು ಸಲ್ಲಿಸಿತು. ಇದರಲ್ಲಿ ಭಾಷಾ ನೀತಿಯನ್ನು ಅರೆಮನಸ್ಸಿನಿಂದ, ಭಾಗಶಃ ಸ್ವೀಕರಿಸಲಾಗಿತ್ತು. ಕೇರಳ, ಕರ್ನಾಟಕ, ತಮಿಳುನಾಡು, ರಾಜಸ್ತಾನ, ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ, ಒರಿಸ್ಸಾ, ಅಸ್ಸಾಂ, ಬಂಗಾಳ ಹಾಗೂ ಜಮ್ಮು-ಕಾಶ್ಮೀರ ರಾಜ್ಯಗಳನ್ನು ರಚಿಸಬೇಕು ಎಂದು ಅದು ಶಿಫಾರಸು ಮಾಡಿತು. ಆದರೆ ಈ ಆಯೋಗ ಭಾಷಾ ನೀತಿಯನ್ನು ಸಮಾನವಾಗಿ ಅನ್ವಯಿಸದೆ ಗುಜರಾತನ್ನೂ ಒಳಗೊಂಡ ಮುಂಬೈ ಪ್ರಾಂತ್ಯವನ್ನು ಹಾಗೆಯೇ ಇರಿಸಿತು. ಹೈದರಾಬಾದನ್ನೂ ಪ್ರತ್ಯೇಕವಾಗಿ ಇಡಲು ಶಿಫಾರಸು ಮಾಡಿತು. ಮರಾಠಿ ಭಾಷಿಕ ವಿದರ್ಭ ರಾಜ್ಯವೊಂದನ್ನು ರಚಿಸಬೇಕೆಂದು ಪ್ರತಿಪಾದಿಸಿತು.

ಈ ಆಯೋಗದ ಶಿಫಾರಸುಗಳ ಪ್ರಕಾರ 1956 ರಲ್ಲಿ ಹಲವು ಭಾಷಾವಾರು ಪ್ರಾಂತ್ಯಗಳು ರಚನೆಗೊಂಡವು. ಆಯೋಗ ಭಾಷಾ ನೀತಿಯನ್ನು ಭಾಗಶಃ ಅನ್ವಯಿಸಿದ್ದರಿಂದಾಗಿ ಇನ್ನಷ್ಟು ಹೋರಾಟ ಗಳು ಎದ್ದುಬಂದವು. ಮಹಾರಾಷ್ಟ್ರ, ಗುಜರಾತ್‌ನ ಪ್ರತ್ಯೇಕ ರಾಜ್ಯಗಳ ರಚನೆಗಾಗಿ ಹೋರಾಟ ಬಲಿಷ್ಟ ಆಂದೋಲನವಾಗಿ ಬೆಳೆಯಿತು. ಸಂಯುಕ್ತ ಮಹಾರಾಷ್ಟ್ರ ಆಂದೋಲನದ ಮೇಲೆ ತೀವ್ರ ದಮನ ನಡೆಸಿ ಹಲವಾರು ಜನರು ಕೊಲ್ಲಲ್ಪಟ್ಟರು. ನವಂಬರ್ 1956 ರಲ್ಲಿ ಒಂದೇ ದಿನದಲ್ಲಿ ಮುಂಬೈಯಲ್ಲಿ ಪೋಲೀಸರು 90 ಜನರನ್ನು ಗುಂಡಿಕ್ಕಿ ಕೊಂದರು. ಮುಂಬೈಯನ್ನು ಪ್ರತ್ಯೇಕ ರಾಜ್ಯವಾಗಿ ಉಳಿಸಿಕೊಳ್ಳುವ ಪ್ರಯತ್ನ ದೊಡ್ಡ ಬಂಡವಾಳಶಾಹಿಗಳ ಹಿತಾಸಕ್ತಿ ಗಳನ್ನು ಬಿಂಬಿಸುವ ಪ್ರಯತ್ನವಾಗಿತ್ತು. ಆದರೂ ಮಹಾರಾಷ್ಟ್ರ, ಗುಜರಾತ್ ರಾಜ್ಯಗಳು ರಚನೆಗೊಂಡವು. ನಂತರ ಪಂಜಾಬಿ ಸೂಬಾ ಆಂದೋಲನ ನಡೆಯಿತು. ಇದರಿಂದ 1966 ರಲ್ಲಿ ಪಂಜಾಬೀ ಭಾಷಿಕ ರಾಜ್ಯ ಹಾಗೂ ಹರ‍್ಯಾಣ ರಚನೆಗೊಂಡವು. ಪುನರ್ವಿಂಗಡಣೆಯ ಅಂತಿಮ ಸುತ್ತು 1970 ರ ದಶಕದ ಆರಂಭದಲ್ಲಿ ನಡೆಯಿತು. ಆಗಿದ್ದ ಅಸ್ಸಾಂ ಪ್ರಾಂತ್ಯದಿಂದ ಏಳು ಪ್ರತ್ಯೇಕ ರಾಜ್ಯಗಳು ರಚನೆಗೊಂಡವು.

ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ನಡೆದ ಎರಡು ದಶಕಗಳ ಹೋರಾಟ ದಿಂದಾಗಿ ಹಿಂದಿದ್ದ ಪ್ರಾಂತ್ಯಗಳ ಗಡಿಗಳನ್ನು ಹೊಸದಾಗಿ ರೂಪಿಸಲಾಯಿತು ಹಾಗೂ ಹಿಂದಿದ್ದ ರಾಜರುಗಳ ಸಂಸ್ಥಾನಗಳನ್ನು ಸಂಪೂರ್ಣವಾಗಿ ಈ ಭಾಷಾವಾರು ರಾಜ್ಯಗಳಲ್ಲಿ ಅಳವಡಿಸಲಾಯಿತು. ಈ ಪ್ರಜಾಸತ್ತಾತ್ಮಕ ಕಾರ್ಯ ಈಡೇರಿದ್ದು ಆಳುವ ವರ್ಗಗಳ ಮುತುವರ್ಜಿಯಿಂದಲ್ಲ, ಸಾಮೂಹಿಕ ಆಂದೋಲನಗಳ ಮುತುವರ್ಜಿಯಿಂದ ಮತ್ತು ಜನರ ಆಕಾಂಕ್ಷೆಗಳ ಒತ್ತಡದಿಂದಾಗಿ ಎಂಬುದನ್ನು ಗಮನಿಸಬೇಕು.

ಒಕ್ಕೂಟ ವ್ಯವಸ್ಥೆಗಾಗಿ ಮುಂದುವರಿದ ಹೋರಾಟ

FICCI ಮತ್ತು ಅಖಿಲ ಭಾರತ ಉತ್ಪಾದಕರ ಸಂಘ(AIMO) ದಂತಹ ದೊಡ್ಡ ವ್ಯಾಪಾರಸ್ಥರ ಸಂಘಟನೆಗಳು ದೇಶ ಛಿದ್ರವಾಗಿ ಹೋಗುತ್ತಿದೆ ಎಂದು ಬೆದರಿಸಿ ದರೂ ಜನಸಂಘ, ಸ್ವತಂತ್ರ ಪಕ್ಷಗಳಂತಹ ಬಲಪಂಥೀಯ ರಾಜಕೀಯ ಪಕ್ಷಗಳು ವಿರೋಧಿಸಿದರೂ ಭಾಷಾವಾರು ಪ್ರಾಂತ್ಯ ಗಳು ರಚನೆಯಾದವು. ಇದು ದೇಶದ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೊಂದು ಮುನ್ನಡೆಯಾಗಿತ್ತು. ಇದು ದೇಶವನ್ನು ದುರ್ಬಲಗೊಳಿಸಲಿಲ್ಲ, ಬದಲಾಗಿ ಅದರ ಐಕ್ಯತೆಯನ್ನು ಬಲಗೊಳಿಸಿತು. ಜನಸಂಘ ಮತ್ತು ಆರ್.ಎಸ್.ಎಸ್. ತಮ್ಮ 'ಅಖಂಡ ಭಾರತ' ಪರಿಕಲ್ಪನೆಯಿಂದಾಗಿ ಭಾಷಾವಾರು ಪ್ರಾಂತ್ಯಗಳ ರಚನೆ 'ತಾಯಿ ಭಾರತಿ'ಯನ್ನು ಛಿದ್ರ-ಛಿದ್ರಗೊಳಿಸುವ ಕ್ರಮವಾಗಿತ್ತೆಂದು ಹೇಳಿ ವಿರೋಧಿಸಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಭಾರತೀಯ ಪ್ರಭುತ್ವ ವ್ಯವಸ್ಥೆಯ ಪ್ರಜಾಪ್ರಭುತ್ವೀಕರಣ ಹಾಗೂ ಕೇಂದ್ರ-ರಾಜ್ಯ ಸಂಬಂಧಗಳ ಪುನರ್ರಚನೆಯ ಕೆಲಸ ಇನ್ನೂ ಮುಗಿದಿಲ್ಲ. ಅದಕ್ಕಾಗಿ ಹೋರಾಟ ಮುಂದುವರಿಯಬೇಕಾಗಿದೆ. 1950 ರಲ್ಲಿ ಅಂಗೀಕರಿಸಿದ ಭಾರತದ ಸಂವಿಧಾನದ ಹಲವಾರು ಅಂಶಗಳಲ್ಲಿ ಒಕ್ಕೂಟ ಸ್ವರೂಪಕ್ಕಿಂತ, ಏಕಘಟಕ ಸ್ವರೂಪವೇ ಹೆಚ್ಚಾಗಿ ಕಾಣುತ್ತದೆ. 1950 ರ ದಶಕದಲ್ಲಿ ರಚನೆಗೊಂಡ ಭಾಷಾವಾರು ಪ್ರಾಂತ್ಯಗಳು ಹಲವು ಮುಖ್ಯ ಅಂಶಗಳಲ್ಲಿ ಈಗಲೂ ಅಧಿಕಾರ ವಿಹೀನವಾಗಿವೆ. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಪ್ರಕ್ರಿಯೆ ಮುಂದುವರಿಯಬೇಕಾದರೆ ರಾಜ್ಯಗಳಿಗೆ ಇನ್ನಷ್ಟು ಅಧಿಕಾರಗಳ ವಿಕೇಂದ್ರೀಕರಣ ವಾಗಬೇಕಾಗಿದೆ. ಅಲ್ಲಿಂದ ಮುಂದೆ ಪಂಚಾಯತೀ ರಾಜ್ಯ ವ್ಯವಸ್ಥೆಗೆ ಹಾಗೂ ಸ್ಥಳೀಯ ಸಂಸ್ಥೆಗಳಿಗೂ ಸಾಕಷ್ಟು ಅಧಿಕಾರ ಗಳನ್ನು ನೀಡಬೇಕಾಗಿದೆ. ಸಾಮ್ರಾಜ್ಯಶಾಹಿ-ವಿರೋಧಿ ಆಂದೋಲನದ ದಿನಗಳಲ್ಲಿ ಆರಂಭಿಸಿದ ಹೋರಾಟವನ್ನು ಈಗ ಇನ್ನೊಂದು ರೂಪದಲ್ಲಿ ಮುಂದೊಯ್ಯ ಲಾಗುತ್ತಿದೆ. ಅದೆಂದರೆ ಕೇಂದ್ರ-ರಾಜ್ಯ ಸಂಬಂಧಗಳನ್ನು ಬದಲಿಸಿ ಭಾರತವನ್ನು ಹೆಚ್ಚೆಚ್ಚು ಒಕ್ಕೂಟ ವ್ಯವಸ್ಥೆಯಾಗಿ ಮಾಡುವ ಹೋರಾಟವದು. ☐



ಸಿಪಿಐ(ಎಂ) ಪಕ್ಷದ 4ನೇ ಸಿಂಧನೂರು ತಾಲೂಕು ಸಮ್ಮೇಳನ

ರಾಯಚೂರು: ಪಕ್ಷದ 4ನೇ ಸಿಂಧನೂರು ತಾಲೂಕು ಸಮ್ಮೇಳನವು ಅಕ್ಟೋಬರ್ 5 ಮತ್ತು 6 ರಂದು ಸಿಂಧನೂರಿನಲ್ಲಿ ನಡೆಯಿತು. ಪ್ರಾರಂಭದಲ್ಲಿ ಶರಬಣ್ಣ ನಾಗಲಾಪೂರ ಧ್ವಜಾರೋಹಣ ಮಾಡಿದರು. ಜಿಲ್ಲಾ ಕಾರ್ಯದರ್ಶಿ ಬಿ. ಲಿಂಗಪ್ಪ ಸಮ್ಮೇಳನ ಉದ್ಘಾಟಿಸಿದರು. ಪುರಸಭಾ ಸದಸ್ಯ ಶೇಷಾದ್ರಿ ಮಾತನಾಡಿ ಭ್ರಷ್ಟಾಚಾರ ಮತ್ತು ಕೋಮುವಾದದ ವಿರುದ್ಧ ಹೋರಾಟದ ಅನಿವಾರ್ಯತೆಯನ್ನು ಹೇಳಿದರು.

ಹೊಸ ಸಮಿತಿ: ಶರಬಣ್ಣ, ನಾಗಲಾಪೂರ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು. ಬಿ.ಲಿಂಗಪ್ಪ, ಶೇಷಾದ್ರಿ, ಎಂ.ಗೋಪಾಲಕೃಷ್ಣ, ಗಂಗೂಬಾಯಿ, ಸುಬಾಷ್ ಶರಣಪ್ಪ, ಶಿವಮೂರ್ತಿ ರಸೂಲಮ್ಮ, ರಮೇಶ್ ಹಾಗೂ ದೇವೇಂದ್ರಗೌಡ ತಾಲೂಕು ಸಮಿತಿ ಸದಸ್ಯರಾಗಿ ಆಯ್ಕೆಗೊಂಡರು.

ನಿರ್ಣಯಗಳು

ಸಮ್ಮೇಳನವು ತಾಲೂಕಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ನಿರ್ಣಯಗಳನ್ನು ಕೈಗೊಂಡಿತು.

ತುಂಗಭದ್ರಾ ಎಡದಂಡೆ ಕಾಲುವೆಯ ಪರಿಪೂರ್ಣ ದುರಸ್ತಿ ಕಾರ್ಯ ಕೈಗೊಳ್ಳಬೇಕು

ನಗರದ ಸರ್ಕಾರಿ ಭೂಮಿಯಲ್ಲಿ ಅಕ್ರಮ ಕಟ್ಟಡಗಳ ವಿರುದ್ಧ ಕ್ರಮಕೈಗೊಂಡು ಭೂಮಿಯನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಬೇಕು ಹಾಗೂ ನಗರದಲ್ಲಿ ಕುಡಿಯುವ ನೀರಿನ ಪೂರೈಕೆ, ಶೌಚಾಲಯಗಳ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸಮ್ಮೇಳನ ಸರಕಾರವನ್ನು ಒತ್ತಾಯಿಸಿದೆ.

ಸಿಪಿಐ(ಎಂ) ದ.ಕ. ಜಿಲ್ಲಾ ಸಮ್ಮೇಳನ

ಸಿಪಿಐ(ಎಂ) ನ 16ನೇ ರಾಜ್ಯ ಸಮ್ಮೇಳನದ ಮೊದಲು ನಡೆಯುವ ವಿವಿಧ ಜಿಲ್ಲಾ ಸಮ್ಮೇಳನಗಳ ದಿನಾಂಕಗಳನ್ನು ಪ್ರಕಟಿಸಲಾಗಿತ್ತು ಅದರಲ್ಲಿ ದ.ಕ.ಜಿಲ್ಲಾ ಸಮ್ಮೇಳನದ ದಿನಾಂಕಗಳಲ್ಲಿ ತುಸು ಬದಲಾವಣೆಯಾಗಿದೆ ಎಂದು ತಿಳಿಸಲಾಗಿದೆ. ಅದೀಗ ನವಂಬರ್ 14, 15, 16 ರಂದು ನಡೆಯಲಿದೆ.

ಶಾಖಾ ಸಮ್ಮೇಳನಗಳು

ಸಿಪಿಐ(ಎಂ) ಸಮ್ಮೇಳನಗಳು

ದಾಂಡೇಲಿ: ಪಕ್ಷದ ದಾಂಡೇಲಿ ನಗರ ಸಮಿತಿಯ ಪ್ರಥಮ ಸಮ್ಮೇಳನವು ಸೆಪ್ಟೆಂಬರ್ 5ರಂದು ನಡೆಯಿತು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ನಿತ್ಯಾನಂದ ಸ್ವಾಮಿ ಸಮ್ಮೇಳನ ಉದ್ಘಾಟಿಸಿದರು. ಜಿಲ್ಲಾ ಸಮಿತಿ ಸದಸ್ಯರಾದ ಶಾಂತಾರಾಮ ನಾಯಕ್ ಅತಿಥಿಗಳಾಗಿ ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ನಾಯ್ಕ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು.

ನೂತನ ಸಮಿತಿ

ಕಾರ್ಯದರ್ಶಿಯಾಗಿ ಭೀಮರಾವ್ ಜೇರಲಗಿಯವರು ಪುನರಾಯ್ಕೆಗೊಂಡರು

ಸದಸ್ಯರುಗಳಾಗಿ ಎಚ್ ಬಿ ನಾಯಕ್, ಗುರುಪಾದ ಮರಾಠೆ, ಎಸ್.ವಿ.ಸುವಂತ ಎಮ್.ಎಚ್.ನಾಯಕ್, ಜೆ.ಆರ್ ನಾಯಕ್ ಹಾಗೂ ಡಿ.ಎಸ್ ಕಲ್ಘಟಕರ ಆಯ್ಕೆಗೊಂಡರು.

ನಿರ್ಣಯಗಳು

ಆಜಾದ್ ನಗರ, ಮಾರುತಿ ನಗರ, ನಿರ್ಮಲ ನಗರ ಪ್ರದೇಶಗಳಲ್ಲಿ ಒಳಚರಂಡಿ ನೀರು ಸರಬರಾಜು, ಸ್ವಚ್ಛತಾಕಾರ್ಯ ಕೈಗೊಳ್ಳಬೇಕು. ಪ್ಲೈವುಡ್ ಕಂಪನಿ ಪುನರಾರಂಭ ಮಾಡಬೇಕು. ಶೀಘ್ರವಾಗಿ ಸುಸಜ್ಜಿತ ಕಸಾಯಿ ಖಾನೆ ಕೆಲಸ ಪ್ರಾರಂಭಿಸಬೇಕು ಹಾಗೂ ಆಜಾದ್ ನಗರದಲ್ಲಿ ಅಂಗನವಾಡಿ ಕೇಂದ್ರ ಸ್ಥಾಪಿಸಬೇಕೆಂದು ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿತು.

ಸುರಪುರ:

ಸಿ.ಪಿ.ಐ.(ಎಂ) ಪಕ್ಷದ ಎರಡನೇ ಶಾಖಾಸಮ್ಮೇಳನ ಅಕ್ಟೋಬರ್ ಒಂದರಂದು ನಡೆಯಿತು. ತಾಲೂಕು ಕಾರ್ಯದರ್ಶಿ ಸಿ.ಎಸ್.ಆನೆಗುಂದಿ ಭಾಗವಹಿಸಿದ್ದರು.

ತಾಲೂಕಿನ ಆರ್ಥಿಕ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿ ಕುರಿತು ಸಮ್ಮೇಳನದಲ್ಲಿ ಚರ್ಚಿಸಿ ಗ್ರಾಮೀಣ ಪ್ರದೇಶದಿಂದ ನಗರಗಳ ವರೆಗೆ ಉತ್ತಮ ರಸ್ತೆ ನಿರ್ಮಿಸಿ ಉತ್ತಮ ಸಾರಿಗೆ ಸೌಕರ್ಯ ಕಲ್ಪಿಸಿ ಕೊಡುವಂತೆ ಸರ್ಕಾರವನ್ನು ಒತ್ತಾಯಿಸಿತು.ಎಂ.ದೇವೇಂದ್ರಪ್ಪ ಪತ್ತಾರ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ದೇವದುರ್ಗ, ಕಕ್ಕಲು ದೊಡ್ಡಿ ಹಾಗೂ ಸೋಮನಕಟ್ಟೆಯ ಪ್ರಥಮ ಶಾಖಾ ಸಮ್ಮೇಳನವನ್ನು ಜಿಲ್ಲಾ ಮುಖಂಡರಾದ ಕರಿಯಪ್ಪ ಅಚ್ಚೊಳ್ಳಿ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಜಿಲ್ಲಾ ಸಮಿತಿ ಸದಸ್ಯರಾದ ಮಲ್ಲಯ್ಯ ಜಾಲಹಳ್ಳಿ ಭಾಗವಹಿಸಿದರು.

ಕಕ್ಕಲ ದೊಡ್ಡಿ ಶಾಖೆಯ ಕಾರ್ಯದರ್ಶಿಯಾಗಿ ಚನ್ನನ ಗೌಡ ದೇಸಾಯಿ ಆಯ್ಕೆಗೊಂಡರು.

ಸೋಮನಕಟ್ಟೆಯ ಶಾಖಾ ಕಾರ್ಯದರ್ಶಿಯಾಗಿ ಈರಣ್ಣ ಆಯ್ಕೆಯಾದರು.

ಸಮ್ಮೇಳನದ ನಂತರ ಚನ್ನಗೌಡ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಕರಿಯಪ್ಪ ಅಚ್ಚೊಳ್ಳಿ ಹಾಗೂ ಮಲ್ಲಯ್ಯ ಜಾಲಹಳ್ಳಿ ಮಾತನಾಡಿದರು. ಸಿ.ಎಸ್.ನಾಡಗೌಡ ಕಾರ್ಯಕ್ರಮ ನಿರೂಪಿಸಿದರು.

ಜಾಲಹಳ್ಳಿ:

ದೇವದುರ್ಗ ತಾಲೂಕಿನ ಜಾಲಹಳ್ಳಿ ನಗರದ 6ನೇ ಬ್ಲಾಕಿನ ಪಕ್ಷದ ಸಮ್ಮೇಳನವು ಸೆಪ್ಟೆಂಬರ್ 18ರಂದು ನಡೆಯಿತು. ಸಮ್ಮೇಳನದಲ್ಲಿ ಒಳಚರಂಡಿ, ನೀರಿನ ಟ್ಯಾಂಕ್ ಹಾಗೂ ರಸ್ತೆ ರಿಪೇರಿಗೆ ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯ್ತು. ಶಾಖಾ ಕಾರ್ಯದರ್ಶಿಯಾಗಿ ಶ್ಯಾಮಸುಂದರ ಮಹೇಂದ್ರಕರ ಆಯ್ಕೆಗೊಂಡರು.

ಭಟ್ಕಳ ತಾಲೂಕು ಶಾಖೆಗಳ ಸಮ್ಮೇಳನ

ಭಟ್ಕಳ: ಸಿ ಪಿ ಐ (ಎಂ) ಪಕ್ಷದ ಭಟ್ಕಳ ತಾಲೂಕು ಮಟ್ಟದ ವಿವಿಧ ಶಾಖಾ ಸಮ್ಮೇಳನಗಳು ಇತ್ತೀಚೆಗೆ ಯಶಸ್ವಿಯಾಗಿ ಜರುಗಿದವು.

ಮುರ್ಡೇಶ್ವರ ಶಾಖಾ ಸಮ್ಮೇಳನವು ಗಣಪತಿ ದೇವಾಡಿಗ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಶಾಖೆಯ ಕಾರ್ಯದರ್ಶಿ ಚಂದ್ರ ನಾಯ್ಕ 3 ವರ್ಷ ಅವಧಿಯ ಶಾಖಾ ಚಟುವಟಿಕೆ ಬಗ್ಗೆ ವರದಿ ಮಂಡಿಸಿದರು. ಸಿಪಿಐ (ಎಂ) ಪಕ್ಷದ ಉ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ವಿ. ಎಸ್. ನಾಯ್ಕ, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶಾಂತಾರಾಂ ನಾಯಕ್, ಜಿಲ್ಲಾ ಸಮಿತಿ ಸದಸ್ಯರಾದ ಸುಭಾಸ ಕೊಪ್ಪಿಕರ ಮತ್ತು ತಿಲಕ ಗೌಡ ಹಾಜರಿದ್ದರು.

ಚಿತ್ರಾಪುರ ಟೈಲ್ಸ್ ಶಾಖೆ:

ಸಮ್ಮೇಳನವು ಕಾಂ.ವೆಂಕಟೇಶ ದೇವಾಡಿಗ ಅಧ್ಯಕ್ಷತೆಯಲ್ಲಿ ಜರುಗಿತು. ಶಾಖಾ ಕಾರ್ಯದರ್ಶಿ ನಾಗಪ್ಪ ದೇವಾಡಿಗ ಸ್ವಾಗತಿಸಿ ವರದಿ ಮಂಡಿಸಿದರು. ವರದಿ ಮೇಲೆ ಪ್ರತಿನಿಧಿಗಳ ಚರ್ಚೆ ನಡೆಯಿತು. ಬೈಲೂರು ಸರ್ಕಾರಿ ಆಸ್ಪತ್ರೆ ದುರವಸ್ಥೆ ಅಲ್ಲಿಯ ವೈದ್ಯರನ್ನು ವರ್ಗಾಯಿಸಲು ಸರ್ಕಾರವನ್ನು ಒತ್ತಾಯಿಸಿ, ಬಸ್ತಿಮಕ್ಕಿಯಲ್ಲಿ ಬಸ್ ನಿಲುಗಡೆ ಮಾಡುವಂತೆ ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರನ್ನು ಒತ್ತಾಯಿಸುವ ಕೆಲವು ಪ್ರಮುಖ ನಿರ್ಣಯಗಳನ್ನು ಸಮ್ಮೇಳನ ಕೈಗೊಂಡಿತು.

ಭಾರತ ವಿದ್ಯಾರ್ಥಿ ಯುವಜನ ಶಾಖೆ ಸಮ್ಮೇಳನ ಮತ್ತು ವೆಂಕ್ಟಾಪುರ ಶಾಖಾ ಸಮ್ಮೇಳನವು ಜರುಗಿತು.

ದಾಂಡೇಲಿಯಲ್ಲಿ ನವೆಂಬರ್ 9,10 ರಂದು ನಡೆಯುವ ಪಕ್ಷದ ಜಿಲ್ಲಾ ಸಮ್ಮೇಳನಕ್ಕೆ ಒಟ್ಟು 30 ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗಿದೆ.

ಪಕ್ಷವನ್ನು ಭಟ್ಕಳ ತಾಲೂಕಿನಲ್ಲಿ ಬಲಿಷ್ಠವಾಗಿ ಕಟ್ಟುವ ನಿಟ್ಟಿನಲ್ಲಿ ಜನಪರ ಚಳುವಳಿಯನ್ನು ರೂಪಿಸಲು ಸಮ್ಮೇಳನ ನಿರ್ಧರಿಸಿದೆ.

ಕರ್ನಾಟಕದಲ್ಲಿ ಕಳೆದ ವಾರ

ಅಕ್ಟೋಬರ್ 17

➡ ಪ್ರಸಕ್ತ ಸಾಲಿನಲ್ಲಿ ಒಂದು ಲಕ್ಷ ಟನ್ ಲೆವಿ ಅಕ್ಕಿ ಸಂಗ್ರಹಿಸಲು ರಾಜ್ಯ ಸಂಪುಟ ನಿರ್ಧಾರ.

➡ ವೀರಪ್ಪನ್ ಒತ್ತೆಯಾಳುಗಳಲ್ಲಿ ಇಬ್ಬರ ಸ್ಥಿತಿ ಚಿಂತಾಜನಕವಾಗಿದೆಯೆಂದು ವರದಿ. ಸಂಪುಟ ಸಭೆಯಲ್ಲಿ ಒತ್ತೆಯಾಳು ಬಿಡುಗಡೆ ಬಗ್ಗೆ ಚರ್ಚೆ. ಮುಖ್ಯಮಂತ್ರಿಗಳು ಚೆನ್ನೈಗೆ ಹೋಗಲು ನಿರ್ಧಾರ.

ಅಕ್ಟೋಬರ್ 18

➡ ವೀರಪ್ಪನ್‌ಗೆ ಒಂದು ವಾರದ ಗಡುವು. ಇಲ್ಲವಾದರೆ ಜಂಟಿ ಕಾರ್ಯಾಚರಣೆ ಪುನರಾರಂಭಿಸುವುದಾಗಿ ಕರ್ನಾಟಕ, ತಮಿಳುನಾಡು ಸರ್ಕಾರಗಳ ಎಚ್ಚರಿಕೆ.

➡ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕೊಜೆಂಟ್ರಿಕ್ಸ್ ಕಂಪನಿಯ ದೇಣಿಗೆ ಪಡೆಯುವುದಿಲ್ಲ ಎಂದು ಸಮ್ಮೇಳನ ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರಕಟಣೆ.

ಅಕ್ಟೋಬರ್ 19

➡ ಸಮರ್ಪಕವಾಗಿ ಕಾರ್ಯನಿರ್ವಹಿಸದ ಸಹಕಾರಿ ಸಂಘಗಳನ್ನು ಮುಚ್ಚಲು ನಿರ್ಧರಿಸಿರುವುದಾಗಿ ಸಹಕಾರಿಖಾತೆ ಸಚಿವರು.

➡ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 1997ನೇ ಸಾಲಿನ ಜಾನಪದ ಕಲಾವಿದ, ಜಾನಪದ ತಜ್ಞ ಪ್ರಶಸ್ತಿ ಹಾಗೂ 1996 ನೇ ಸಾಲಿನ ಜಾನಪದ ಕೃತಿ ಪ್ರಶಸ್ತಿಗಳ ಪ್ರಕಟಣೆ.

ಅಕ್ಟೋಬರ್ 20

➡ ವೀರಪ್ಪನ್ ಸೆರೆಗೆ ತಮಿಳುನಾಡು ವಿಶೇಷ ಕಾರ್ಯಾಚರಣೆ ಪಡೆ ಸಜ್ಜಾಗುತ್ತಿದೆ ಎಂದು ಪೋಲೀಸ್ ಮೂಲಗಳು.

➡ ಈ ತಿಂಗಳ ಕೊನೆಯ ವೇಳೆಗೆ 10 ನಿಗಮ-ಮಂಡಳಿಗಳಿಗೆ ಅಧ್ಯಕ್ಷರನ್ನು ಹಾಗೂ 200 ನಿರ್ದೇಶಕರನ್ನು ನೇಮಿಸಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳು.

➡ ನೀರಾವರಿ ಸೌಲಭ್ಯ ಪಡೆಯುವ ರೈತರಿಗೆ ಅಭಿವೃದ್ಧಿ ಸುಂಕ ವಿಧಿಸಲು, ಪ್ರಾಥಮಿಕ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಹಣ ಸಂಗ್ರಹಣೆಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಯೋಜನಾ ಮಂಡಳಿ ಸೂಚನೆ

ಅಕ್ಟೋಬರ್ 21

➡ ವೀರಪ್ಪನ್‌ನಿಂದ ಎಲ್ಲಾ ಒತ್ತೆಯಾಳುಗಳ ಬಿಡುಗಡೆ.

➡ ನವಂಬರ್ 1 ರಿಂದ ರಾಜ್ಯಾದ್ಯಂತ 'ಕನ್ನಡ ನಾಮಫಲಕ ಸಪ್ತಾಹ' ಆಚರಿಸುವುದಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು.

➡ ರಾಜ್ಯದ ಹತ್ತೊಂಬತ್ತು ಕಡೆ 'ಮಿನಿ' ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಒಟ್ಟು 4 ಕೋಟಿ ರೂ. ಮಂಜೂರು ಮಾಡಿರುವುದಾಗಿ ಗ್ರಾಮೀಣಾಭಿವೃದ್ಧಿ ಸಚಿವರು.

ಅಕ್ಟೋಬರ್ 22

➡ ವೀರಪ್ಪನ್ ಶರಣಾಗಬಯಸುವ ಸೂಚನೆಯಿರುವುದರಿಂದ ಆತನಿಗೆ ಇನ್ನೂ ಎರಡು ವಾರಗಳ ಸಮಯ ಕೊಡಬಹುದೆಂದು ಮುಖ್ಯಮಂತ್ರಿಗಳು.

ನಾರಾಯಣಪುರ ಬಲದಂಡೆ ಕಾಮಗಾರಿಗಾಗಿ ಹೋರಾಟ

ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿ ಬಡ, ರೈತ , ಕೃಷಿಕೂಲಿಕಾರರು ಮಳೆಯ ಅಭಾವದಿಂದ ಕೆಲಸವಿಲ್ಲದೇ ದೊಡ್ಡ, ದೊಡ್ಡ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಆದರೆ ಸರ್ಕಾರ ಇಷ್ಟು ಬರಗಾಲವಿದ್ದರೂ ತಾಲೂಕನ್ನು ಬರಗಾಲ ಪೀಡಿತವೆಂದು ಘೋಷಿಸದೇ ಇರುವುದು ಸರ್ಕಾರದ ಬೇಜವಬ್ದಾರಿತನವಾಗಿದೆ. ಈ ಕೂಡಲೇ ಸರ್ಕಾರ ಶೀಘ್ರದಲ್ಲಿ ಬರಗಾಲದ ಕಾಮಗಾರಿಯನ್ನು ಆರಂಭಿಸಿ ಕೂಲಿಕಾರರಿಗೆ ಕೆಲಸ ಕೊಟ್ಟು ವಲಸೆ ಹೋಗುವುದನ್ನು ತಡೆಯಬೇಕು ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ಕರಿಯಪ್ಪ ಅಚ್ಚೊಳ್ಳಿಯವರು 24.9.97 ರಂದು ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಹೇಳಿದರು.

ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಕಾಂ. ಚಂದ್ರಶೇಖರ ಬಾಳೆಯವರು ಮಾತನಾಡುತ್ತಾ ರೈತ ಸಂಘ 1983 ರಿಂದ ಚಳುವಳಿ ಮಾಡಿದ ಪರಿಣಾಮವಾಗಿ 70. ಕಿ.ಮೀ. ಮುಖ್ಯ ಕಾಲುವೆ ಕೆಲಸ ನಡೆದಿದೆ. ಆದರೆ ಈಗ ಸರ್ಕಾರ ಏಕಾಏಕಿ ಕಾಮಗಾರಿಯನ್ನು ತಾಂತ್ರಿಕ ಕಾರಣ ನೀಡಿ ನಿಲ್ಲಿಸಿರುವುದನ್ನು ಖಂಡಿಸಿದರು. ಬಲದಂಡೆಯ ಕಾಮಗಾರಿಯನ್ನು ಮುಂದುವರಿಸಬೇಕೆಂದು ಆಡಳಿತ ಜನತಾ ದಳದವರು ಧರಣೆ ಕುಳಿತಿರುವುದನ್ನು ಖಂಡಿಸಿದರು. ಹೋರಾಟ ಸಮಿತಿಯನ್ನು ಬಿಟ್ಟು ಪಕ್ಷದಿಂದ ಧರಣೆ ಕುಳಿತಿರುವುದು ತಮ್ಮ ಸ್ವಾರ್ಥ ರಾಜಕೀಯಕ್ಕೆ ರೈತರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ತಾಕತ್ತಿದ್ದರೆ ಈ ಹೋರಾಟವನ್ನು ನಿಲ್ಲಿಸದೇ 70 ಕಿ.ಮೀ. ನಂತರ ಕಾಮಗಾರಿ ಪ್ರಾರಂಭವಾಗುವವರೆಗೂ ಹೋರಾಟ ಮಾಡಲಿ ಎಂದು ಸವಾಲು ಹಾಕಿದರು. ಬಲದಂಡೆ ಕಾಲುವೆಯಲ್ಲಿ ಆಗಿರುವ ಭ್ರಷ್ಟಾಚಾರದ ವಿರುದ್ಧ, ಶೀಘ್ರದಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಒತ್ತಾಯಿಸಿ ರೈತರು ಮತ್ತೊಮ್ಮೆ ಉಗ್ರ ಹೋರಾಟಕ್ಕೆ ಇಳಿಯಬೇಕಾಗಿದೆ ಎಂದರು. ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಮಲ್ಲಯ್ಯ ಜಾಲಹಳ್ಳಿಯವರು ತಾಲೂಕಿನಲ್ಲಿ ರೈತರು ಬರಗಾಲದ ಪರಿಣಾಮವಾಗಿ ಆರ್ಥಿಕ ಪರಿಸ್ಥಿತಿಯಿಂದ ತತ್ತರಿಸುತ್ತಿದ್ದು, ಈ ಕೂಡಲೇ ರೈತರ ಸಾಲ ವಸೂಲಿ ನಿಲ್ಲಿಸಬೇಕು. ಬರಗಾಲದ ಕಾಮಗಾರಿಯನ್ನು ಆರಂಭಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸಮಿತಿ ಸದಸ್ಯರಾದ ಡಿ. ವೀರನಗೌಡ ಮಾತನಾಡಿದರು. ತಾಲೂಕ ಕಾರ್ಯದರ್ಶಿ ಬಸನಗೌಡ ದೇಸಾಯಿ ತಾಲೂಕನ್ನು ಬರಗಾಲದ ತಾಲೂಕೆಂದು ಘೋಷಿಸಿ ಬರಗಾಲದ ಕಾಮಗಾರಿ ಆರಂಭಿಸಲು ಒತ್ತಾಯಿಸಿ ತಹಸಿಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು. ವಿದ್ಯುತ್ ಸಮಸ್ಯೆಯ ಬಗ್ಗೆ ಕೆ.ಇ.ಬಿ. ಅಧಿಕಾರಿಗಳ ಜೊತೆ ಚರ್ಚಿಸಿ ಲೋಡ ಸೆಡ್ಡಿಂಗ್ ವ್ಯವಸ್ಥೆ ರದ್ದು ಪಡಿಸಬೇಕೆಂದು ಒತ್ತಾಯಿಸಲಾಯಿತು. ಸುಮಾರು 500 ಕ್ಕಿಂತಲೂ ಹೆಚ್ಚು ಜನರು ಭಾಗವಹಿಸಿದ್ದರು.

ಕಾರ್ಮಿಕಾಧಿಕಾರಿ ನೇಮಕಕ್ಕೆ ಸಿ.ಐ.ಟಿ.ಯು ಒತ್ತಾಯ

ಹೊನ್ನಾವರ : ಉತ್ತರ ಕನ್ನಡ ಜಿಲ್ಲೆಯ ಕಾರಾವಾರದ ಕಾರ್ಮಿಕಾಧಿಕಾರಿ ಕಛೇರಿಯಲ್ಲಿ ಕೆಲವು ದಿನಗಳಿಂದ ಕಾರ್ಮಿಕಾಧಿಕಾರಿಗಳು ಇಲ್ಲದೇ ಕಾರ್ಮಿಕ ವಿವಾದಗಳು ಕಛೇರಿ ಕಡತಗಳು ವಿಲೇವಾರಿ ಆಗದೇ ತುಂಬಾ ತೊಂದರೆಯಾಗಿದೆ.

ಕಳೆದ ಸಲ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ರವರು ಕಾರವಾರಕ್ಕೆ ಬಂದಾಗ ಈ ಕುರಿತು ಸಿ.ಪಿ.ಐ(ಎಂ) ಪರವಾಗಿ ಉತ್ತರ ಕನ್ನಡ ಜಿಲ್ಲಾ ಸಮಿತಿ ಮನವಿಯನ್ನು ಸಹ ಅರ್ಪಿಸಿತ್ತು. ಜಿಲ್ಲೆಯಲ್ಲಿ ಕಾರ್ಮಿಕ ವಿವಾದಗಳು ಪರಿಹಾರ ಕ್ರಮಕ್ಕೆ ಯಾವುದೇ ಸ್ಪಂದನೆ ಇಲ್ಲದಂತಾಗಿದೆ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲನೆ ಮಾಡಿ ತ್ವರಿತವಾಗಿ ಕಾರ್ಮಿಕಾಧಿಕಾರಿಯನ್ನು ನೇಮಕ ಮಾಡಬೇಕೆಂದು ಸಿ ಐ ಟಿ ಯು ಒತ್ತಾಯಿಸಿದೆ.

ಮೊಕದ್ದಮೆ ವಾಪಸ್ಸಿಗೆ ಎಸ್‌ಎಫ್‌ಐ ಆಗ್ರಹ

ರಾಯಚೂರು: ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ನೀಗಿಸುವಂತೆ ಹಾಗೂ ಎಸ್.ಎಫ್.ಐ. ಪ್ರತಿಭಟನಾಕಾರರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಎಸ್.ಎಫ್.ಐ. ರಾಜ್ಯ ಸಮಿತಿಯ ಕರೆಯ ಮೇರೆಗೆ ಅಕ್ಟೋಬರ್ 14 ರಂದು ನೂರಾರು ವಿದ್ಯಾರ್ಥಿಗಳು ನಗರದ ಅಂಬೇಡ್ಕರ್ ಸರ್ಕಲ್ ನ ಹತ್ತಿರ ಮತಪ್ರದರ್ಶನ ನಡೆಸಿ, ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯ ಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ವಿ.ಎಸ್. ಯಲ್ಲಪ್ಪ ಮಾತನಾಡುತ್ತಾ ರಾಜ್ಯದಲ್ಲಿದ್ದ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ ಸುಮಾರು 3150 ಉಪನ್ಯಾಸಕರ ಹುದ್ದೆಗಳ ಭರ್ತಿಗೆ ಒತ್ತಾಯಿಸಿ ಅಕ್ಟೋಬರ್ 8 ರಂದು ಬೆಂಗಳೂರು ಎಸ್‌ಎಫ್‌ಐ ಕಾರ್ಯಕರ್ತರು ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಗೆ ಮುತ್ತಿಗೆ ಹಾಕಿದ ಹಿನ್ನೆಲೆಯಲ್ಲಿ ಅವರ ವಿರುದ್ಧದ ಮೊಕದ್ದಮೆ ಹಿಂದೆ ಪಡೆಯಬೇಕೆಂದರು. ನಂತರ ಎಸ್.ಎಫ್.ಐ ಜಿಲ್ಲಾ ಉಪಾಧ್ಯಕ್ಷರಾದ ಡಿ.ಎಸ್. ಶರಣಬಸವ ಮಾತನಾಡುತ್ತಾ ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಾಗಿ ಹೋರಾಟ ಮಾಡುತ್ತಿರುವುದನ್ನು ನೋಡಿ ಸರ್ಕಾರ ದಮನಕಾರಿ ನೀತಿ ಅನುಸರಿಸುತ್ತಿದೆ ಎಂದರು.

ಈ ಪ್ರತಿಭಟನೆ ನೇತೃತ್ವವನ್ನು ಎಸ್‌ಎಫ್‌ಐ ತಾಲೂಕು ಅಧ್ಯಕ್ಷ ವೈ.ಈರಣ್ಣ ಹಾಗೂ ಕಾರ್ಯದರ್ಶಿ ಕೆ.ಬಿ. ವೀರೇಶ ನವರು ವಹಿಸಿದ್ದರು. ಈ ಪ್ರತಿಭಟನಾ ಪ್ರದರ್ಶನದಲ್ಲಿ ಜಿ.ಬಿ. ಗೋಪಾಲ ನಾಯಕ್, ಎಸ್. ಶರಣಪ್ಪ, ವೀರಭದ್ರ, ಎಸ್. ರಾಮಣ್ಣ, ನಾರಾಯಣ, ಹನುಮಂತನಾಯಕ್, ಗೂಳಪ್ಪ, ಡಾಕಪ್ಪ, ಶಾಂತಪ್ಪ ಪವಾರ್, ವೆಂಕಟೇಶ್, ಬಸವರಾಜ್, ಹಾಗೂ ಇನ್ನಿತರ ಮುಖಂಡರು ಭಾಗವಹಿಸಿದ್ದರು.



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಏಪ್ರಿಲ್ 1906 ರಲ್ಲಿ ಸಶಸ್ತ್ರ ಹೋರಾಟದ ದಾರಿಹಿಡಿದ ಕ್ರಾಂತಿಕಾರಿಗಳ ವಾರಪತ್ರಿಕೆ 'ಜುಗಾಂತರ್' ಆರಂಭವಾಯಿತು. ಅದರ ಸಂಪಾದಕ ಭೂಪೇಂದ್ರನಾಥ್ ದತ್ತರಿಗೆ ಒಂದು ವರ್ಷದ ಸಜೆಯಾಯಿತು. ಈ ಪತ್ರಿಕೆಯ ಸುತ್ತ ನೆರೆದ ಕ್ರಾಂತಿಕಾರಿಗಳನ್ನು 'ಜುಗಾಂತರ್ ಪಾರ್ಟಿ'ಗೆ ಸೇರಿದವರೆಂದು ನಂತರ ಗುರುತಿಸಲಾಗುತ್ತಿದೆ.


1907 ರ ರಾಷ್ಟ್ರೀಯ ಕಾಂಗ್ರೆಸ್‌ನ ಸೂರತ್ ಅಧಿವೇಶನದಲ್ಲಿ ಮಂದಗಾಮಿಗಳು ಮತ್ತು ಉಗ್ರಗಾಮಿಗಳ ನಡುವೆ ಹಣಾಹಣಿ ನಡೆಯಿತು. 'ಸುರೇಂದ್ರ ನಾಥ್ ಬ್ಯಾನರ್ಜಿಯತ್ತ ಒಂದು ಪಾದರಕ್ಷೆ ತೂರಿಬಂದು ಗಲ್ಲಕ್ಕೆರಗಿತು. ಅದೊಂದು ಮರಾಠ ಪಾದರಕ್ಷೆ ಎಂದೊಬ್ಬ ಪತ್ರಕರ್ತ ಈ ಅಧಿವೇಶನದ ಬಗ್ಗೆ ಹೇಳುತ್ತಾ ವರ್ಣಿಸಿದ್ದಾನೆ. ಪರಿಣಾಮವಾಗಿ ಕಾಂಗ್ರೆಸ್‌ನಲ್ಲಿ ಒಂದು ತಾತ್ಕಾಲಿಕ ಒಡಕು ಉಂಟಾಯಿತು.



ಈ ಹಿನ್ನೆಲೆಯಲ್ಲಿ ಸಶಸ್ತ್ರ ಕ್ರಾಂತಿಕಾರಿ ಹೋರಾಟದ ಮೂಲಕ ದೇಶದ ವಿಮೋಚನೆಯ ಕನಸು ಹೊತ್ತ ಯುವಜನರ ಚಟುವಟಿಕೆಗಳು ಇನ್ನಷ್ಟು ತೀವ್ರಗೊಂಡವು. 'ಸ್ವಾತಂತ್ರ್ಯ ಒಂದು ದೇಶದ ಜೀವನದ ಉಸಿರು. ಜೀವನದ ಮೇಲೆ ಧಾಳಿ ನಡೆದಾಗ ಆತ್ಮರಕ್ಷಣೆಯ ಯಾವುದೇ ಅಥವಾ ಪ್ರತಿಯೊಂದು ಸಾಧನ ಸಮರ್ಥನೀಯ'ಎಂಬ ಅರವಿಂದರ ಪ್ರತಿಪಾದನೆಯನ್ನು ಬಂಗಾಳದ ಶ್ರೀಮಂತ ಕ್ರಾಂತಿಕಾರಿಗಳು ಪ್ರತಿಪಾದಿಸಿದರು.

ಕಿಂಗ್ಸ್‌ಫೋರ್ಡ್ ಎಂಬ ಕಲ್ಕತ್ತಾದ ಮ್ಯಾಜಿಸ್ಟ್ರೇಟ್ ಅತ್ಯಂತ ಕ್ರೂರ ತೀರ್ಪುಗಳಿಗೆ ಕುಖ್ಯಾತನಾದವ. 'ವಂದೇಮಾತರಂ' ಹಾಡಿದ್ದಕ್ಕೆ ಒಬ್ಬ ಬಾಲಕನಿಗೆ ಬಹಿರಂಗ ಛಡಿಯೇಟುಗಳ ಶಿಕ್ಷೆ ವಿಧಿಸಿದ. 'ದಿ ನೇಶನ್' ಪತ್ರಿಕೆ ಕಿಂಗ್ಸ್‌ಫೋರ್ಡ್‌ಗೆ ಮರಣದಂಡನೆಯಾಗಬೇಕೆಂದು ಸಾರಿತು. 19 ವರ್ಷದ ಖುದಿರಾಂ ಬೋಸ್ ಮತ್ತು ಪ್ರಫುಲ್ಲ ಚಕಿಗೆ ಈ ಮರಣದಂಡನೆಯನ್ನುಜಾರಿಗೆ ಗೊಳಿಸುವ ಕೆಲಸ ಕೊಡಲಾಯಿತು. ಆ ವೇಳೆಗೆ ಆತ ಭದ್ರತೆಯ ದೃಷ್ಟಿಯಿಂದ ಮುಝಫರ್ ಪುರಕ್ಕೆ ವರ್ಗವಾಗಿದ್ದ. ಖುದಿರಾಂ ಬೋಸ್ ಕಿಂಗ್ಸ್‌ಫೋರ್ಡ್‌ನ ಸವಾರಿಯ ಮೇಲೆ ಬಾಂಬೆಸೆದ. ದುರದೃಷ್ಟವಶಾತ್ ಕಿಂಗ್ಸ್‌ಫೋರ್ಡ್ ಬದಲು ಇಬ್ಬರು ಯುರೋಪಿಯನ್ ಮಹಿಳೆಯರು ಅದಕ್ಕೆ ಬಲಿಯಾದರು. ಪ್ರಫುಲ್ಲ ಚಕಿ ಪೋಲೀಸರಿಂದ ತಪ್ಪಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಂಡ. ಖುದಿರಾಂ ಬೋಸ್ ಆಗಸ್ಟ್ 11, 1908 ರಂದು ನಗುನಗುತ್ತಾ ನೇಣುಗಂಬವೇರಿದ. ಈ ಸಂದರ್ಭದಲ್ಲಿ ಒಬ್ಬ ಅನಾಮಧೇಯ ಕವಿ ಬರೆದ 'ಇಕ್‌ಬಾರ್ ಬಿದಾಯಿ ದೇ ಮಾ' (ಒಮ್ಮೆ ಬೀಳ್ಕೊಡು ಅಮ್ಮಾ) ಎಂಬ ಹಾಡು ಜನಜನಿತವಾಯಿತು. 'ನಾನು ಉರುಳನ್ನು ನಗುತ್ತಾ ಸ್ವೀಕರಿಸುತ್ತೇನೆ. ಭಾರತೀಯರು ನೋಡುತ್ತಾರೆ' ಎನ್ನುವ ಆ ಹಾಡಿನೊಂದಿಗೆ 19 ವರ್ಷದ ಖುದಿರಾಂ ಬೋಸ್ ಅಮರನಾದ.








ಪಂಜಾಬಿನಲ್ಲಿ ತೀವ್ರ ಹೋರಾಟ ನಡೆಯುತ್ತಿತ್ತು. 1907 ರಲ್ಲಿ ಲಜಪತ್ ರಾಯ್ ಮತ್ತು ಭಗತ್ ಸಿಂಗ್ ರ ಚಿಕ್ಕಪ್ಪ ಸರ್ದಾರ್ ಅಜಿತ್ ಸಿಂಗ್ ನೇತೃತ್ವದಲ್ಲಿ ರೈತರು ಗೇಣಿ ಮತ್ತು ತೆರಿಗೆಯೇರಿಕೆ ವಿರುದ್ಧ ನಡೆಸಿದ ತೀವ್ರ ಹೋರಾಟದಿಂದ ಭೀತರಾದ ಬ್ರಿಟಿಶರು ಅವರಿಬ್ಬರನ್ನು ಬಂಧಿಸಿ ದೂರದ ಬರ್ಮಾದಲ್ಲಿದ್ದ ಮಂಡಾಲೆ ಜೈಲಿಗೆ ಕಳಿಸಿದರು. ಬಿಪಿನ್ ಚಂದ್ರ ಪಾಲ್‌ರ ದಕ್ಷಿಣ ಭಾರತ ಪ್ರವಾಸದಿಂದ ಸ್ಫೂರ್ತಿಗೊಂಡ ತಿರುನಲ್ವೇಲಿಯ ಚಿದಂಬರಂ ಪಿಳ್ಳೆ ಹಾಗೂ ಸುಬ್ರಮಣ್ಯ ಶಿವಂರನ್ನು ಬ್ರಿಟಿಶರು ಬಂಧಿಸಿದಾಗ ಕಾರ್ಮಿಕ ವರ್ಗ ಮುಷ್ಕರ, ಹರತಾಳ ನಡೆಸಿತು. ಪೋಲೀಸ್ ಗೋಲೀಬಾರಿನಲ್ಲಿ ನಾಲ್ವರು ಸತ್ತರು-ಮೂರು ದಿನ ಸತತವಾಗಿ ಅಸಂತೃಪ್ತಿ ವ್ಯಕ್ತಗೊಂಡಿತು. ಇವಕ್ಕೆಲ್ಲಾ ಚಿದಂಬರಂ ಪಿಳ್ಳೆ ಮತ್ತು ಶಿವಂ ಕಾರಣಕರ್ತರೆಂದು ಬ್ರಿಟಿಶರು ಅವರಿಗೆ ದೀರ್ಘಾವಧಿಯ ಶಿಕ್ಷೆ ವಿಧಿಸಿ ಅಂಡಮಾನ್‌ಗೆ ಕಳಿಸಿದರು. ಈ ಅವಧಿಯ ಒಂದು ಅತ್ಯಂತ ಮಹತ್ವಪೂರ್ಣ ಘಟನೆಯೆಂದರೆ ತಿಲಕರ ಬಂಧನ ಮತ್ತು ಅದನ್ನು ಪ್ರತಿಭಟಿಸಿ ಮುಂಬಯಿಯ ಕಾರ್ಮಿಕರ ಸಾರ್ವತ್ರಿಕ ಮುಷ್ಕರ. ತಮ್ಮ ಕೇಸರಿ ಪತ್ರಿಕೆಯಲ್ಲಿ ರಾಜದ್ರೋಹದ ಲೇಖನ ಬರೆದ ಆಪಾದನೆಯ ಮೇಲೆ 1908 ಜುಲೈನಲ್ಲಿ ತಿಲಕರಿಗೆ 6 ವರ್ಷದ ಶಿಕ್ಷೆ ವಿಧಿಸಿ ಮಂಡಾಲೆ ಜೈಲಿಗೆ ಕಳಿಸಲಾಯಿತು. ಇದನ್ನು ಪ್ರತಿಭಟಿಸಿ ಮುಂಬೈಯ ಹಿಂದೂ ಮತ್ತು ಮುಸ್ಲಿಂ ಕಾರ್ಮಿಕ ವರ್ಗ 6 ದಿನಗಳ ಸಾರ್ವತ್ರಿಕ ಮುಷ್ಕರ ನಡೆಸಿದರು. ಇದು ಅಲ್ಲಿವರೆಗಿನ ಭಾರತದಲ್ಲಿ ಒಂದು ಅಭೂತಪೂರ್ವ ಘಟನೆ. ತಿಲಕರನ್ನು ಬಿಡುಗಡೆ ಮಾಡಬೇಕೆಂಬ ಒಂದು ರಾಜಕೀಯ ಬೇಡಿಕೆಯ ಮೇಲೆ ಮುಂಬೈ ಸಂಪೂರ್ಣ ಹರತಾಳ ಆಚರಿಸಿತು. ಮುಂಬೈಯ ಬೀದಿಗಳಲ್ಲಿ ಪೋಲೀಸರು, ಸೈನಿಕರು ಒಂದೆಡೆ, ಇನ್ನೊಂದೆಡೆ ಜನಸಾಮಾನ್ಯರು ಘರ್ಷಣೆಗಳಲ್ಲಿ 200 ಕ್ಕೂ ಹೆಚ್ಚು ಕಾರ್ಮಿಕರು ಮತ್ತು ಜನಸಾಮಾನ್ಯರು ಪ್ರಾಣತೆತ್ತರು. ಭಾರತದ ಸ್ವಾತಂತ್ರ್ಯ ಆಂದೋಲನದ ಮುಖಂಡರಿಗೆ ಇದರಲ್ಲಿ ವಿಶೇಷ ಮಹತ್ವ ಕಾಣಲಿಲ್ಲ. ಆದರೆ ಆಗ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಗಡೀಪಾರಿನಲ್ಲಿದ್ದ ಲೆನಿನ್ ಭಾರತೀಯ ಕಾರ್ಮಿಕ ವರ್ಗ ಆಗಲೇ ಪ್ರಜ್ಞಾಶೀಲವಾಗಿ ರಾಜಕೀಯ ಸಾಮೂಹಿಕ ಹೋರಾಟಕ್ಕೆ ಇಳಿದಿದೆ ಎಂದು ಉದ್ಗರಿಸಿದರು.

ಇದೇ ರೀತಿ ಆಗಿನ ಸಂಯುಕ್ತ ಪ್ರಾಂತ್ಯದಲ್ಲಿ 'ಭಾರತ್ ಮಾತಾ ಸಮಾಜ' ರಚನೆಯಾಯಿತು. ಮುಝಫರ್ ನಗರ 'ಸ್ವರಾಜ್ಯ' ಪತ್ರಿಕಾ ಸರಕಾರದ ತೀವ್ರ ದಮನಕ್ಕೆ ಒಳಗಾಯಿತು. ಅದರ ಎಂಟು ಸಂಪಾದಕರು ದೀರ್ಘಕಾಲದ ಜೈಲುಶಿಕ್ಷೆ ಅನುಭವಿಸಬೇಕಾಯಿತು. ರಾಜದ್ರೋಹದ ಲೇಖನಗಳನ್ನು ಬರೆದದ್ದಕ್ಕೆ ಅಂಡಮಾನ್ ಜೈಲಿನಲ್ಲಿ ಕರಿನೀರಿನ ಶಿಕ್ಷೆ ಪಡೆದ ವಿಶಿಷ್ಟ ದಾಖಲೆ ಇವರದ್ದು. ಈ ಪತ್ರಿಕೆಯ ಒಬ್ಬ ಸಂಪಾದಕ ಲಾಧಾರಾಮ್ ಕಪೂರ್ ತನ್ನ ಬಂಧನದ ಮೊದಲು ಪತ್ರಿಕೆಯಲ್ಲಿ ಈ ರೀತಿ ಜಾಹೀರಾತು ನೀಡಿದರಂತೆ-

"ಬೇಕಾಗಿದ್ದಾರೆ 'ಸ್ವರಾಜ್ಯ'ಕ್ಕೆ ಒಬ್ಬ ಸಂಪಾದಕರು.

ದೈನಿಕ ಸಂಬಳ:- ಎರಡು ಒಣ ಚಪಾತಿ, ಒಂದು ಲೋಟ ತಣ್ಣೀರು ಮತ್ತು ಹತ್ತು ವರ್ಷಗಳ ಕಠಿಣ ಸಜೆ!" ಈತ ಅಂಡಮಾನ್ ಜೈಲಿನಲ್ಲಿ ಚಿತ್ರ ಹಿಂಸೆಯನ್ನು ಧೈರ್ಯದಿಂದ ಎದುರಿಸಿದವರು.




ಮಹಾರಾಷ್ಟ್ರದ ನಾಸಿಕ್‌ನಲ್ಲಿ ಸಾವರ್ಕರ್ ಸೋದರರು ಸ್ಥಾಪಿಸಿದ್ದ 'ಮಾತೃ ಮೇಳ' 1907 ರಲ್ಲಿ 'ಅಭಿನವ ಭಾರತ ಸಮಿತಿ' ಎಂದು ಹೆಸರು ಪಡೆಯಿತು. 1906ರಲ್ಲಿ ಇಂಗ್ಲೆಂಡಿಗೆ ಹೋದ ವಿನಾಯಕ ದಾಮೋದರ್ ಸಾವರ್ಕರ್ ಅಲ್ಲಿ "ಇಂಡಿಯನ್ ಸೋಶಿಯಾಲಜಿಸ್ಟ್" ಎಂಬ ಪತ್ರಿಕೆಯ ಮೂಲಕ ಕ್ರಾಂತಿಕಾರಿ ಚಟುವಟಿಕೆ ನಡೆಸುತ್ತಿದ್ದ ಆಕ್ಸ್‌ಫರ್ಡ್ ಪ್ರಾಧ್ಯಾಪಕ ಶ್ಯಾಮ್‌ಜಿ ಕೃಷ್ಣವರ್ಮಾರವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದರು. ಸಾವರ್ಕರ್‌ರಿಂದ ಪ್ರಭಾವಿತನಾದ ಇಂಜಿನೀಯರಿಂಗ್ ವಿದ್ಯಾರ್ಥಿ ಮದನ್‌ಲಾಲ್ ಡಿಂಗ್ರಾ, ಸರ್ ಜಾನ್ ಕರ್ಝನ್ ವಿಲಿಯಂ ಉನ್ನತ



ಪುಟ 6 ನೋಡಿ

ಸ್ವಾತಂತ್ರ ಹೋರಾಟದಲ್ಲಿ ಕಮ್ಯುನಿಸ್ಟರು ಅಥವಾ ನಂತರ ಕಮ್ಯುನಿಸ್ಟರಾದವರು ಎಂತಹ ವಿಶಿಷ್ಟಪಾತ್ರವನ್ನು ವಹಿಸಿದರು ಎಂಬುದನ್ನು ಕೆಲವು ಪ್ರಮುಖ ಕಮ್ಯುನಿಸ್ಟ್ ಸ್ವಾತಂತ್ರ ಹೋರಾಟಗಾರರ ಅನುಭವದ ನೆರಳಿನಲ್ಲಿ ಬಿಂಬಿಸುವ ಈ ಅಂಕಣದಲ್ಲಿ ಈ ಬಾರಿ ೧೨ನೇ ವಯಸ್ಸಿನಲ್ಲೇ ಅಸಹಕಾರ ಆಂದೋಲನದಲ್ಲಿ ಭಾಗವಹಿಸಲು ಶಾಲೆಬಿಟ್ಟು, ಹುಟ್ಟೂರು ಬಿಟ್ಟು ದೂರದ ಅಲಹಾಬಾದಿಗೆ ಹೋಗಿ ಅದೇ ಹೋರಾಟದಲ್ಲಿ ಒಬ್ಬ ಕುಶಲ ಸಂಘಟಕರಾಗಿ, ಕಾರ್ಮಿಕ ಮುಖಂಡರಾಗಿ, ಅತ್ಯುನ್ನತ ಮಟ್ಟದ ಸಂಸದೀಯ ಪಟುವಾಗಿ, ನಿರ್ಭೀತ ಕಮ್ಯುನಿಸ್ಟರಾಗಿ ಪ್ರಖ್ಯಾತರಾದ ಕಾಂ. ಪಿ.ರಾಮಮೂರ್ತಿಯವರ ನೆನಪು

ನಿರ್ಭೀತ ಹೋರಾಟಗಾರ ಪಿ. ರಾಮಮೂರ್ತಿ



"ನಾವು ಪಿತೂರಿಗಾರರಲ್ಲ, ಈ ದೇಶದಲ್ಲಿ ಬ್ರಿಟೀಷ್ ಆಳ್ವಿಕೆಯನ್ನು ಕೊನೆಗಾಣಿಸುವ ಮಹಾನ್ ಗುರಿಸಾಧನೆಗಾಗಿ ಸಮರ್ಪಿಸಿಕೊಂಡವರು. ಈ ಮಹಾನ್ ಹೋರಾಟ ಒಂದು ಸಣ್ಣ ಗುಂಪಿನಿಂದ ಸಾಧ್ಯವಿಲ್ಲ. ಲಕ್ಷಾಂತರ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಜನಸಮೂಹಗಳನ್ನು ಅಣಿಗೊಳಿಸಿದಾಗ ಮಾತ್ರವೇ ಬ್ರಿಟೀಷರನ್ನು ದೇಶದಿಂದ ಹೊರಗಟ್ಟುವಲ್ಲಿ ನಮಗೆ ಯಶಸ್ಸು ಸಿಗಲು ಸಾಧ್ಯ ಎಂಬುದು ನಮ್ಮ ದೃಢ ನಂಬಿಕೆ. ಸಾಮೂಹಿಕ ಕಾರ್ಯಾಚರಣೆಯಲ್ಲೆ ನಮಗೆ ದೃಢ ನಂಬಿಕೆಯೆ ಹೊರತು ಗುಪ್ತ ಪಿತೂರಿಗಳ ವಿಧಾನಗಳಲ್ಲಿ ನಮಗೆ ನಂಬಿಕೆಯಿಲ್ಲ ಎಂದು ಸ್ಪಷ್ಟಪಡಿಸಿದ್ದೇವೆ. ಯಾರನ್ನೂ ನಾವು ಹಿಂಸಾಚಾರಕ್ಕೆ ಪ್ರಚೋದಿಸಿಲ್ಲ. ಹಿಂಸಾಚಾರದ ಆಡಳಿತ ನಡೆಸುವವರು ಬ್ರಿಟೀಷರ ಆಳರಸರ ಒಂದು ಸಣ್ಣ ಗುಂಪಷ್ಟೇ"

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರದ ಈ ಸ್ಪಷ್ಟ ಚಿತ್ರ ನೀಡುವ ಮಾತುಗಳು ಪ್ರಖ್ಯಾತ ಕಾರ್ಮಿಕ ಮುಖಂಡ ಸಿಐಟಿಯು ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಹಾಗೂ ಕಮ್ಯುನಿಸ್ಟ್ ಮುಖಂಡ ಪಿ. ರಾಮಮೂರ್ತಿ ಅವರದ್ದು. ಅವರೊಂದಿಗೆ ಮೋಹನ್ ಕುಮಾರ್ ಮಂಗಳಂ, ಸಿ.ಎಸ್.ಸುಬ್ರಮಣ್ಯಂ, ಆರ್.ಉಮಾನಾಥ್, ಕೆ.ಎ. ಕೇರಳಿಯನ್, ಹನುಮಂತಾರಾವ್ ಮತ್ತಿತರರ ಮೇಲೆ 1940-41 ರಲ್ಲಿ ಬ್ರಿಟೀಷರು ಹಾಕಿದ ಮದ್ರಾಸ್ ಕಮ್ಯುನಿಸ್ಟ್ ಪಿತೂರಿ ಮೊಕದ್ದಮೆಯಲ್ಲಿ ಆಪಾದಿತರ ಪರವಾಗಿ ಸ್ವತಃ ವಾದಿಸುತ್ತಾ ಬ್ರಿಟೀಷ್ ನ್ಯಾಯಾಲಯದಲ್ಲಿ ಪಿ.ರಾಮಮೂರ್ತಿಯವರು ಹೀಗೆಂದು ಸಾರಿದರು. ಪಿ. ರಾಮಮೂರ್ತಿಯವರಿಗೆ ಈ ಮೊಕದ್ದಮೆಯಲ್ಲಿ ನಾಲ್ಕು ವರ್ಷಗಳ ಕಠಿಣ ಶಿಕ್ಷೆ ವಿಧಿಸಲಾಯಿತು. ಅವರನ್ನು ಜೈಲಿನಲ್ಲಿ 'ಸಿ' ವರ್ಗದಲ್ಲಿ ಇಡಲಾಗಿತ್ತು. ಅಂದರೆ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಅವರು ಜೈಲಿನಲ್ಲಿ ಸಹಿಸಬೇಕಾಗಿತ್ತು.

ಆದರೆ, ಪಿ.ರಾಮಮೂರ್ತಿಯವರಿಗೆ ಇದೇನೂ ಹೊಸದಲ್ಲ. 22 ವರ್ಷದವರಿದ್ದಾಗಲೇ ಬ್ರಿಟೀಷ್ ನ್ಯಾಯಾಲಯದಲ್ಲಿ "ನಾನು ಉದ್ದೇಶಪೂರ್ವಕವಾಗಿಯೇ ವಿದೇಶಿ ಬಟ್ಟೆ ಸುಟ್ಟು ಕಾನೂನು ಮುರಿದೆ" ಎಂದು ಸಾರಿ ಮೊದಲ ಸಾರಿ ಜೈಲು ಶಿಕ್ಷೆ ಪಡೆದಿದ್ದರು. ಅವರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ್ದು 12 ವರ್ಷದವರಿದ್ದಾಗಲೇ. 1920 ರ ಅಸಹಕಾರ ಚಳುವಳಿಯ ವೇಳೆ ಮದ್ರಾಸಿನ ಮರೈನಾ ಬೀಚಿನಲ್ಲಿ ಗಾಂಧೀಜಿಯ ಭಾಷಣ ಕೇಳಿ ಪ್ರಭಾವಿತರಾಗಿ ಶಾಲೆ ಬಿಟ್ಟು ಚಳುವಳಿಗೆ ಧುಮುಕಿದವರು ಅವರು. ತಮಿಳಿನ ದೇಶ ಪ್ರೇಮಿ ಕವಿ ಸುಬ್ರಮಣ್ಯ ಭಾರತಿಯವರ ಮನೆ ಇವರು ವಾಸವಾಗಿದ್ದ ಮನೆಯ ಬೀದಿಯಲ್ಲೇ ಇದ್ದುದರಿಂದ ಹಾಗೂ ಜಲೀಯಾನ್ ವಾಲಾಬಾಗ್ ಹತ್ಯಾಕಾಂಡಕ್ಕೆ ಪ್ರತಿಭಟನೆಯಾಗಿ ನಡೆದ ಸಾರ್ವಜನಿಕ ಸಭೆಗಳು ಹಾಗೂ ಉಪವಾಸ ಸತ್ಯಾಗ್ರಹಗಳು ಅವರಲ್ಲಿ ದೇಶಪ್ರೇಮ ಉಂಟು ಮಾಡಿದ್ದವು. 12 ನೇ ವಯಸ್ಸಿನಲ್ಲೇ ಮನೆ ಬಿಟ್ಟು ಟಿಕೇಟಿಲ್ಲದೆ ಅಲಹಾಬಾದಿಗೆ ಹೋಗಿ ಅಲ್ಲಿ ಪುರುಷೋತ್ತಮರಾವ್ ಟಂಡನ್ ಸ್ಥಾಪಿಸಿದ್ದ ರಾಷ್ಟ್ರೀಯ ಶಾಲೆಯಲ್ಲಿ ಭರ್ತಿಯಾದ ರಾಮಮೂರ್ತಿ ಚೌರಿ ಚೌರದ ಹಿಂಸಾಚಾರದ ಹೆಸರಿನಲ್ಲಿ ಗಾಂಧೀಜಿಯವರು ಅಸಹಕಾರ ಆಂದೋಲನವನ್ನು ಹಿಂತೆಗೆದುಕೊಂಡಾಗ ಯುವಜನರಲ್ಲಾದ ಭ್ರಮನಿರಸನದಿಂದ ಅವರು ಓದುತ್ತಿದ್ದ ರಾಷ್ಟ್ರೀಯ ಶಾಲೆಯ ವಿದ್ಯಾರ್ಥಿಗಳೆಲ್ಲಾ ಶಾಲೆ ಬಿಟ್ಟಾಗ ತಾನೂ ಬಿಡಬೇಕಾಯಿತು. ಸಬರಮತಿ ಶಾಲೆಗೆ ಸೇರುವ ಮನಸ್ಸಿದ್ದರೂ ರಾಜಾಜಿಯವರ ಸಲಹೆಯಂತೆ ಮದ್ರಾಸಿಗೆ ಹಿಂದಿರುಗಿದರು.

ಕಾಲೇಜು ವಿದ್ಯಾರ್ಥಿಯಾದ ಮೇಲೂ ಕಾಂಗ್ರೆಸ್ ಹಾಗೂ ಸ್ವರಾಜ್ಯ ಪಕ್ಷಗಳ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಮುಂದುವರಿಸಿದ ರಾಮಮೂರ್ತಿ ಈ ಕಾರಣದಿಂದಾಗಿ ಪ್ರೆಸಿಡೆನ್ಸಿ ಕಾಲೇಜು ಬಿಟ್ಟು ಮತ್ತೆ ಅಲಹಾಬಾದಿಗೆ ಹೋದರು. ಈ ಬಾರಿ ಅಲ್ಲಿದ್ದ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಸೇರಿ ತನ್ನ ಸಾಮ್ರಾಜ್ಯಶಾಹಿ ವಿರೋ ಧಿ ಚಟುವಟಿಕೆಗಳನ್ನು ಮುಂದುವರಿಸಿದರು.

1927 ರಲ್ಲಿ ಅವರು ಭಗತ್ ಸಿಂಗ್ ಸ್ಥಾಪಿಸಿದ್ದ 'ನೌ ಜವಾನ್ ಭಾರತ ಸಭಾ'ದ ಸಂಪರ್ಕಕ್ಕೆ ಬಂದರು. 1927-28ರಲ್ಲಿ ದೇಶವಿಡೀ ಸೈಮನ್ ಗೋಬ್ಯಾಕ್ (ಹಿಂತಿರುಗಿ ಹೋಗು) ಎಂಬ ಘೋಷಣೆ ಮೊಳಗುತ್ತಿತ್ತು. ಬನಾರಸ್‌ನಲ್ಲಿ ಈ ಆಯೋಗದ ವಿರುದ್ಧ ಮತಪ್ರದರ್ಶನದಿಂದ ತಪ್ಪಿಸಿಕೊಳ್ಳಲು ಆಯೋಗದ ಸದಸ್ಯರನ್ನು ಗಂಗಾನದಿಯ ಆಚೆಗಿದ್ದ ಅವರ ನಿವಾಸ ಸ್ಥಳಕ್ಕೆ ಗುಪ್ತವಾಗಿ ಕಳುಹಿಸುವ ಯೋಚನೆ ಮಾಡಲಾಗಿತ್ತು. ಇದರ ಸುಳಿವು ಸಿಕ್ಕ ಯುವಜನರ ಒಂದು ತಂಡ ಮೂವತ್ತು ಸಣ್ಣ ದೋಣಿಗಳಲ್ಲಿ ಕಪ್ಪು ಬಾವುಟ ಹಿಡಿದು ತಟದಲ್ಲಿ ವಿವಿದೆಡೆ ಗುಪ್ತವಾಗಿ ಗಮನಿಸುತ್ತಿದ್ದರು. ಆಯೋಗದ ಸದಸ್ಯರನ್ನು ರವಾನಿಸುತ್ತಿದ್ದ ಸ್ಟೀಮರ್ ಇನ್ನೊಂದು ದಡ ತಲುಪುತ್ತಿದ್ದಂತೆ 30 ದೋಣಿಗಳಲ್ಲಿ ಕಪ್ಪು ಬಾವುಟ ಹಿಡಿದ ಯುವಜನರು ಅಲ್ಲಿ ಬಂದು ಸೇರಿ ಮತಪ್ರದರ್ಶನ ನಡೆಸಿಬಿಟ್ಟರು. ಈ ಬಗ್ಗೆ ಪೋಲೀಸರು ಯಾರನ್ನೂ ಬಂಧಿಸುವ ಪ್ರಯತ್ನ ಮಾಡಲಿಲ್ಲ. ಈ ವಿಶಿಷ್ಟ ಪ್ರತಿಭಟನೆಯ ಯೋಜನೆ ತಯಾರಿಸಿದ್ದವರು ಪಿ. ರಾಮಮೂರ್ತಿ.

ಕಾಂಗ್ರೆಸ್ ಮೊದಲ ಬಾರಿಗೆ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯನ್ನು ಕೊನೆಗೂ ಅಂಗೀಕರಿಸಿದ ಚಾರಿತ್ರಿಕ ಲಾಹೋರ್ ಅಧಿವೇಶನದಲ್ಲಿ ರಾಮಮೂರ್ತಿ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಉಪ್ಪು ಸತ್ಯಾಗ್ರಹದ ವೇಳೆ ಬನಾರಸ್‌ನಲ್ಲಿ ಅತಿ ದೊಡ್ಡ ವಿದೇಶಿ ಬಟ್ಟೆ ಅಂಗಡಿ ಎದುರು ಪ್ರಭಾವಶಾಲಿ ಭಾಷಣ ಮಾಡಿ ಮೊದಲ ಬಾರಿ ಜೈಲಿಗೆ ಹೋದ ರಾಮಮೂರ್ತಿಯವರು ತಮಿಳುನಾಡಿನಲ್ಲಿ ಗುಪ್ತ ಚಟುವಟಿಕೆಗಳನ್ನು ಮುಂದುವರಿಸಿದಾಗ ಮತ್ತೊಮ್ಮೆ ಬಂಧನಕ್ಕೊಳಕಾದರು. ಮಧುರೈ ಜೈಲಿನಲ್ಲಿ ಅಮಾನವೀಯ ಪರಿಸ್ಥಿತಿಗಳ ವಿರುದ್ಧ ಉಪವಾಸ ಸತ್ಯಾಗ್ರಹವನ್ನು ಸಂಘಟಿಸಿದ್ದರು.

ಗಾಂಧೀಜಿ 'ಹರಿಜನ ಸೇವಕ ಸಂಘ' ಸ್ಥಾಪಿಸಿದಾಗ ರಾಮಮೂರ್ತಿಯವರು ಮದ್ರಾಸಿನಲ್ಲಿ ಈ ಕೆಲಸ ಕೈಗೆತ್ತಿಕೊಂಡರು. ಅಲ್ಲಿ ಅವರಿಗೆ ವಹಿಸಿದ ಕೆಲಸ ಕೊಳೆಗೇರಿಗಳಲ್ಲಿ ಸಾಬೂನು ಎಣ್ಣೆ ಹಂಚುವುದು. ಈ ಕೆಲಸವನ್ನು ಅತ್ಯಂತ ಸಹನೆಯಿಂದ ಮಾಡಿದರೂ, ಅದರಿಂದಲೇ ಸಂತುಷ್ಟರಾಗದ ರಾಮಮೂರ್ತಿ ಟ್ರಿಪ್ಲಿಕೇನ್‌ನಲ್ಲಿದ್ದ ಪ್ರಸಿದ್ಧ ವೈಷ್ಣವ ದೇವಸ್ಥಾನದಲ್ಲಿ ಭಜನೆ ಮಂಡಳಿಗಳಲ್ಲಿ ಹರಿಜನರು ಭಾಗವಹಿಸುವಂತೆ ಮಾಡಿದರು. ಇದರಿಂದ ಕುಪಿತರಾದ ಬ್ರಾಹ್ಮಣರು ನೇರವಾಗಿ ಗಾಂಧೀಜಿಯವರಿಗೆ ಇದನ್ನು ನಿಲ್ಲಿಸುವಂತೆ ಮನವಿ ಮಾಡಿದರಂತೆ.

ಹೊಸದಿಕ್ಕು

ಸ್ವತಃ ವಕೀಲರಲ್ಲದಿದ್ದರೂ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಹಾಕಿದ ಮೊಕದ್ದಮೆಗಳನ್ನು ಎದುರಿಸುವಲ್ಲಿ ಇವರು ಸಾಕಷ್ಟು ಅನುಭವ ಪಡೆದಿದ್ದರು. 1934 ರಲ್ಲಿ ಬ್ರಿಟೀಶರು ಮದ್ರಾಸಿನಲ್ಲಿ ಕೆಲವು ಯುವ ಕಾಂಗ್ರೆಸ್ಸಿಗರ ಮೇಲೆ ಅವರು ಭಯೋತ್ಪಾದಕ ತಂಡಗಳೊಡನೆ ಸಂಪರ್ಕ ಹೊಂದಿದ್ದಾರೆ ಎಂಬ ಆಪಾದನೆ ಹಾಕಿದಾಗ ಅವರ ರಕ್ಷಣೆಗೆ ಪಿ. ರಾಮಮೂರ್ತಿ ಮುಂದಾದರು. ಅದೇ ವರ್ಷ ಇಡೀ ದಕ್ಷಿಣ ಭಾರತದಲ್ಲಿ ಸಾಮ್ರಾಜ್ಯ ಶಾಹೀ ವಿರೋಧಿ ಚಟುವಟಿಕೆಗಳನ್ನು ಸಂಘಟಿಸುತ್ತಿದ್ದ ಪಿ. ಸುಂದರಯ್ಯನವರ ಮೇಲೆ ಇದೇ ರೀತಿ ರಾಜದ್ರೋಹದ ಮೊಕದ್ದಮೆ ಬಂದಾಗ ರಾಮಮೂರ್ತಿಯವರು ಕಾನೂನು ರಕ್ಷಣೆಗೆ ವ್ಯವಸ್ಥೆ ಮಾಡಿದರು. ಈ ವಕೀಲರ ತಂಡ ಬಹಳ ಶ್ರಮಪಟ್ಟರೂ ಸುಂದರಯ್ಯನವರಿಗೆ 2 ವರ್ಷಗಳ ಸಜೆಯಾಯಿತು. ಆದರೆ, ಈ ಅನುಭವ ಈ ಯುವ ಹೋರಾಟಗಾರನ ಜೀವನದಲ್ಲಿ ಹೊಸ ಅಧ್ಯಾಯ ಆರಂಭಸಿತು.

ಅದಾಗಲೇ ಕಮ್ಯುನಿಸ್ಟ್ ಪಕ್ಷವನ್ನು ಸಂಘಟಿಸುತ್ತಿದ್ದ ಸುಂದರಯ್ಯನವರೊಂದಿಗೆ ಈ ಮೊಕದ್ದಮೆಯ ವಿಚಾರಣೆಯ ಸಂದರ್ಭದಲ್ಲಿ ಹಲವಾರು ಚರ್ಚೆಗಳನ್ನು ನಡೆಸುವ ಅವಕಾಶ ರಾಮಮೂರ್ತಿಯವರಿಗೆ ದೊರೆಯಿತು. ಕಾರ್ಮಿಕ ವರ್ಗದ ಪಕ್ಷದ ನೇತೃತ್ವದಲ್ಲಿ ಕಾರ್ಮಿಕರು ಮತ್ತು ರೈತರ ಒಂದು ಕ್ರಾಂತಿಕಾರಿ ಆಂದೋಲನ ಮಾತ್ರವೇ ಸಾಮ್ರಾಜ್ಯಶಾಹಿ ವಿರೋಧಿ ಕ್ರಾಂತಿಯನ್ನು ಯಶಸ್ವಿಯಾಗಿ ಈಡೇರಿಸಬಲ್ಲದು ಎಂಬ ಸ್ಪಷ್ಟ ಅರಿವು ಇದರಿಂದ ಪಡೆದ ರಾಮಮೂರ್ತಿಯವರ ಕೆಲಸಕ್ಕೆ ಈಗ ಹೊಸ ದಿಕ್ಕು ದೊರೆಯಿತು.

1934 ರಲ್ಲಿ ರಾಮಮೂರ್ತಿಯವರು ತಮಿಳುನಾಡು ಕಾಂಗ್ರೆಸ್ ಸಮಿತಿಗೆ ಹಾಗೂ ಕಾರ್ಯಕಾರಿ ಸಮಿತಿಗೆ ಚುನಾಯಿತರಾದರು. ಇದೇ ವೇಳೆಗೆ ಕಾಂಗ್ರೆಸ್ ಸಮಾಜವಾದಿ ಪಕ್ಷ (ಸಿಎಸ್‌ಪಿ) ಸ್ಥಾಪನೆ ಗೊಂಡಿತು. ನಂತರ ತಮಿಳುನಾಡಿನಲ್ಲಿ ರಾಮಮೂರ್ತಿ ಮತ್ತಿತರ ತೀವ್ರಗಾಮಿ ಯುವ ಕಾಂಗ್ರೆಸ್ಸಿಗರು ಸಿಎಸ್‌ಪಿ ಕಟ್ಟಿದರು. ಕಾರ್ಮಿಕ ವರ್ಗದ ನಡುವೆ ಕೆಲಸ ಮಾಡಲಾರಂಭಿಸಿದರು. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಭಾಗವಾಗಿ ಮಧುರೈ, ಕೊಯಮತ್ತೂರುಗಳಲ್ಲಿ ಜವಳಿ ಕಾರ್ಮಿಕರ ಸಂಘಗಳನ್ನು ನೆಲ್ಲಿಕುಪ್ಪಂನಲ್ಲಿ ಸಕ್ಕರೆ ಕಾರ್ಖಾನೆ ಕಾರ್ಮಿಕರ ಸಂಘವನ್ನು ರಾಮಮೂರ್ತಿ ಮತ್ತು ಅವರ ಸಂಗಾತಿಗಳು ಕಟ್ಟಿದರು. ದಕ್ಷಿಣ ಭಾರತೀಯ ರೈಲ್ವೆ ಯೂನಿಯನ್ನು ಕಟ್ಟಿದರು. 1937 ರಲ್ಲಿ ತಮಿಳುನಾಡು ಕಾಂಗ್ರೆಸ್ ಸಮಿತಿಯ ಸಮ್ಮೇಳನದಲ್ಲಿ ಜಮೀನುದಾರಿ ಪದ್ಧತಿಯ ರದ್ಧತಿಯ ಹಾಗೂ ಕಾರ್ಷಿಕ ಸುಧಾರಣೆಯ ಒಂದು ಠರಾವನ್ನು ಮಂಡಿಸಿದರು.

ಎರಡನೇ ಮಹಾಯುದ್ಧ ಆರಂಭವಾದಾಗ ಕಾಂಗ್ರೆಸ್ ಒಂದು ಮೆದು ಸ್ವರೂಪದ ಹೋರಾಟ ಆರಂಭಿಸಿದಾಗ ರಾಮಮೂರ್ತಿರವರನ್ನು ಕುಂಭಕೋಣಂ ಬಳಿಯ ಅವರ ಸ್ವಂತ ಊರಿನಲ್ಲಿ ಸ್ಥಾನಬದ್ಧತೆಯಲ್ಲಿಡಲಾಯಿತು. ಪಿ.ಸುಂದರಯ್ಯನವರ ನೆರವಿನಿಂದ ಅವರು ಈ ಬಂಧನದಿಂದ ಪಾರಾದರು. ಹುಟ್ಟಿನಿಂದಲೇ ಒಂದು ಕಾಲು ಕುಂಟುತ್ತಿದ್ದ ರಾಮಮೂರ್ತಿಯವರು ಹೀಗೆ ತಪ್ಪಿಸಿಕೊಳ್ಳುವುದು ಸುಲಭದ ಕೆಲಸವೇನಾಗಿರಲಿಲ್ಲ. ಸ್ಥಾನಬದ್ಧತೆಯಿಂದ ಹೀಗೆ ತಪ್ಪಿಸಿಕೊಂಡ ರಾಮಮೂರ್ತಿಯವರು

ಪುಟ 5 ಕ್ಕೆ

ವಾರದ ಆರ್ಥಿಕ ಟಿಪ್ಪಣಿಗಳು

ಡಿ.ಎಸ್.ಮಣಿ

ರತ್ನಗಳನ್ನು ಮೂರುಕಾಸಿಗೆ ಮಾರುವ ಹುನ್ನಾರ

ಇತ್ತೀಚೆಗೆ ಕೇಂದ್ರ ಸರಕಾರ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ 'ನವರತ್ನ' 'ಮಿನಿರತ್ನ'ಗಳೆಂಬ ಬಿರುದು ಗಳನ್ನು ನೀಡಿ ಪ್ರಚಾರ ಮಾಡಿರುವುದನ್ನು ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್ ಮತ್ತು ಬಿಎಂಎಸ್ ಖಂಡಿಸಿವೆ. ಈ ಬಿರುದು ನೀಡುವ ಕ್ರಮ ಹಿಂಬಾಗಿಲಿ ನಿಂದ ಖಾಸಗೀ ಕರಣ ವನ್ನು ತರುವುದೇ ಆಗಿವೆ ಎಂದಿವೆ ಅವು.

ಈ ರತ್ನಗಳಿಗೆ ಸ್ವಾಯತ್ತತೆ ನೀಡಿ ಅವು ಬೆಳೆಯುವಂತೆ ಮಾಡುವುದೇ ತನ್ನ ಉದ್ದೇಶ ಎಂದು ಸರ್ಕಾರ ಹೇಳಿ ಕೊಂಡಿದೆ. ಆದರೆ ಇದನ್ನು ಹತ್ತಿರದಿಂದ ನೋಡಿದರೆ ಸರ್ಕಾರದ ನಿಜ ಉದ್ದೇಶ ಅದಲ್ಲ ಎನ್ನುವುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಲಾಭ ಮಾಡುತ್ತಿರುವ ಈ ಸಾರ್ವಜನಿಕ ವಲಯದ ಉದ್ದಿಮೆಗಳು ಖಾಸಗೀಯವರಿಗೆ ಸಹಭಾಗಿತ್ವವನ್ನು ಬಯಸಬೇಕಾಗುತ್ತದೆ. ಈ ಖಾಸಗಿ ಪಾಲುಗಾರ ಬಹುರಾಷ್ಟ್ರೀಯ ಕಂಪನಿಯೂ ಆಗಬಹುದು.

ಮುಖ್ಯ ಉದ್ದಿಮೆಗಳಲ್ಲಿ ಶೇ 49 ರಷ್ಟು ಮತ್ತು ಅಷ್ಟು ಮುಖ್ಯವಲ್ಲದ ಉದ್ದಿಮೆಗಳಲ್ಲಿನ ಶೇ 79 ರಷ್ಟು ಶೇರು ಮಾರಾಟಕ್ಕೂ ಅವಕಾಶವನ್ನು ಇದು ಮಾಡಿಕೊಟ್ಟಿದೆ. ಅಂದರೆ ಖಾಸಗೀ ಕರಣಕ್ಕೆ ಎಲ್ಲಾ ತರಹದ ಅನುಕೂಲವನ್ನು ಮಾಡಿಕೊಟ್ಟಂತಾಯಿತು.

ಸಂಯುಕ್ತ ರಂಗದ ಸಮಾನ ಕನಿಷ್ಠ ಕಾರ್ಯಕ್ರಮದ ಪ್ರಕಾರ ಲಾಭಗಳಿ ಸುತ್ತಿರುವ ಉದ್ದಿಮೆಗಳನ್ನು ಇನ್ನೂ ಹೆಚ್ಚು ಬಲಪಡಿಸಬೇಕು ಆದರೆ ಈ 'ರತ್ನ' ಬಿರುದುಗಳ ಮೂಲಕ ಉದ್ದಿಮೆಗಳನ್ನು ಬಲಪಡಿಸುವ ಬದಲು ದುರ್ಬಲಗೊಳಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದಿವೆ ಈ ಟ್ರೇಡ್ ಯೂನಿಯನ್ನುಗಳು.

ಸರ್ಕಾರದ ಕ್ರಮದ ಹಿಂದಿನ ದುರುದ್ದೇಶವಂತೂ ಈಗ ಸ್ಪಷ್ಟವಲ್ಲವೇ?

ಅಮೇರಿಕಕ್ಕೆ ಈ ಉದಾರೀಕರಣ ಬೇಡ

ಅಮೇರಿಕಕ್ಕೆ ಭಾರತದ ಮಾರುಕಟ್ಟೆ ಬೇಕು. ತನ್ನ ಉತ್ಪನ್ನಗಳನ್ನು ಮಾರಲು. ಯಾಕೆಂದರೆ ಅದರ ಕೈಯಲ್ಲಿ ಉತ್ತಮ ತಂತ್ರಜ್ಞಾನವಿದೆ. ಉತ್ತಮ ಉತ್ಪಾದನಾ ಸೌಲಭ್ಯಗಳಿವೆ. ಉತ್ಪಾದನೆ ಮಾಡಿದ ಸರಕುಗಳಿಗೆ ಭಾರತವೂ ಮಾಕುಕಟ್ಟೆಯಾಗಬೇಕು ಆ ಮೂಲಕ ಅಲ್ಲಿನ ಬಂಡವಾಳಿಗರಿಗೆ ಲಾಭ ಕೊಳ್ಳೆ ಹೊಡೆಯಲು ಆಗಬೇಕೆಂಬುದು ಅವರ ಬಯಕೆ. ಇದಕ್ಕಾಗಿ ದೊಡ್ಡ ದೊಡ್ಡ ಮಾತುಗಳನ್ನು ಅದು ಬಳಸುತ್ತದೆ. ಅದರ ಏಜೆಂಟರುಗಳಾದ ಐಎಂಎಫ್ ಮತ್ತು ವಿಶ್ವಬ್ಯಾಂಕ್ ಉದಾರೀಕರಣ ಮತ್ತು ಜಾಗತೀಕರಣದ ಅವಶ್ಯಕತೆಯನ್ನು ಒತ್ತಿ ಹೇಳುತ್ತವೆ. ಈ ಜಾಗತೀಕರಣ ಮತ್ತು ಉದಾರೀಕರಣ ಏನು ಮಾಡುತ್ತವೆಂದರೆ ಅಮೆರಿಕನ್ ಸರಕುಗಳನ್ನು ಮತ್ತು ಅಲ್ಲಿನ ಬಂಡವಾಳವನ್ನು ದೊಡ್ಡ ಪ್ರಮಾಣದಲ್ಲಿ ಭಾರತದೊಳಕ್ಕೆ ಹರಿದು ಬರಲು ಅವಕಾಶ ಮಾಡಿಕೊಡುತ್ತದೆ. ಅಲ್ಲಿನ ಬಂಡವಾಳಿಗರು ಅಂದರೆ ಬಹುರಾಷ್ಟ್ರೀಯ ಕಂಪನಿಗಳು ಅಪಾರ ಪ್ರಮಾಣದಲ್ಲಿ ಲಾಭ ಹೊಂದುತ್ತವೆ. ವ್ಯಾಪಾರವನ್ನು ಹಲವು ಪಟ್ಟು ಹೆಚ್ಚಿಸಿಕೊಳ್ಳುತ್ತವೆ. ಇವೆಲ್ಲವಕ್ಕೂ ಉದಾರೀಕರಣ ಬೇಕು ಜಾಗತೀಕರಣ ಬೇಕು.

ಭಾರತದಲ್ಲಿ ಜನಸಂಪನ್ಮೂಲ ಅಪಾರವಾಗಿದೆಯಲ್ಲವೇ. ಮೂರನೇ ಜಗತ್ತಿನ ಎಲ್ಲಾ ದೇಶಗಳಲ್ಲೂ ಈ ಮಾನವ ಸಂಪನ್ಮೂಲ ಅಪಾರವಾಗೇ ಇದೆ. ಉದಾರೀಕರಣ ಈ ಮಾನವ ಸಂಪನ್ಮೂಲ ಅಮೆರಿಕದಂತಹ ದೇಶದೊಳಕ್ಕೆ ಹೋಗಲು ಯಾಕೆ ಅವಕಾಶ ಮಾಡಿಕೊಡಬಾರದು? ಅಂತಹ ಉದಾರೀಕರಣ ಯಾಕೆ ಬೇಡ?

ಈಗ ಅಮೇರಿಕದ ಸರ್ಕಾರ ಭಾರತ ಮತ್ತು ಪಾಕಿಸ್ತಾನದಂತಹ ದೇಶಗಳಿಂದ ಅಕ್ರಮವಾಗಿ ಬಂದು ಅಲ್ಲಿ ವಾಸಿಸುವ ವ್ಯಕ್ತಿಗಳ ಮೇಲೆ ಧಾಳಿ ಮಾಡುತ್ತಿದೆ. ಅವರಿಗೆ ಶಿಕ್ಷೆ ವಿಧಿಸುತ್ತಿದೆಯಂತೆ. ಇದು ಹೊಸದೇನಲ್ಲ. ಯಾವಾಗಲೂ ಆಗುತ್ತಿರುವಂತಹುದು. ಇಲ್ಲಿ ಸಾಮ್ರಾಜ್ಯಶಾಹಿ ದೇಶಗಳ ಉದಾರೀಕರಣವಾದದ ಹಿಂದಿನ ಸ್ವಾರ್ಥ ಸ್ಪಷ್ಟವಾಗುವುದು. ಅವರ ಸರಕುಗಳ ಆಮದಿನ ಮೇಲೆ ಭಾರತದಂತಹ ದೇಶ ನಿರ್ಬಂಧ ಹೇರಿದರೆ ಅದು ಅನ್ಯಾಯ. ಅನಾವಶ್ಯಕ ರಕ್ಷಣಾಕ್ರಮ, ಅದೇ ಭಾರತದಿಂದ ಜನರು ಅಮೆರಿಕಕ್ಕೆ ಹೋಗಿ ಅಲ್ಲಿ ದುಡಿದು ಸಂಪಾದನೆ ಮಾಡುವುದೂ ಅವರಿಗೆ ಪಥ್ಯವಿಲ್ಲ.

ಅಂದರೆ ಉದಾರೀಕರಣ ಸಾಮ್ರಾಜ್ಯಶಾಹಿಗಳ ಲಾಭಕ್ಕಾಗಿ ಮಾತ್ರ ಎಂದಂತಿಲ್ಲವೇ?

ಉತ್ತಮ ಆಡಳಿತವಿರಬೇಕು

ಈ ಮಾತು ಬಹಳ ಒಳ್ಳೆಯ ಉದ್ದೇಶದ್ದೆಂದು ಅನಿಸುತ್ತದಲ್ಲವೇ? ಹೌದು, ಉತ್ತಮ ಆಡಳಿತವಿರಬೇಕೆಂದು ಯಾರಾದರೂ ಹೇಳಿದರೆ ಹೌದೆಂದು ಹೇಳಲೇ ಬೇಕಾಗುತ್ತದೆ. ಈಗ ಈ ಮಾತನ್ನು ಹೇಳಿದ್ದು ಯಾರೆಂದು ಕೇಳಿ. ಈ ಮಾತನ್ನು ಹೇಳಿದ್ದು ಐಎಂಎಫ್ ಮತ್ತು ವಿಶ್ವಬ್ಯಾಂಕುಗಳು. ಇತ್ತೀಚೆಗೆ ಹಾಂಗ್‌ಕಾಂಗ್‌ನಲ್ಲಿ ವಿಶ್ವಬ್ಯಾಂಕಿನ ವಾರ್ಷಿಕ ಸಭೆ ನಡೆದಾಗ ಈ ಎರಡು ಸಂಸ್ಥೆಗಳು ಇಂತಹ ಬೇಡಿಕೆ ಇಟ್ಟವು.

ಈ ಮಾತನ್ನು ಅವು ಜಾಗತಿಕ ಪೀಡೆಯಾಗಿ ಬೆಳೆಯುತ್ತಿರುವ ಭ್ರಷ್ಟಾಚಾರ ಮತ್ತು ದುರಾಡಳಿತವನ್ನು ಮನಸ್ಸಿನಲ್ಲಿಟ್ಟು ಕೊಂಡು ಹೇಳಿದವೆಂದು ಸಮೂಹ ಮಾಧ್ಯಮ ಗಳು ವರದಿ ಮಾಡಿವೆ. ಈ ಮಾತಿನಲ್ಲಿ ತಪ್ಪಿರಲಿಕ್ಕಿಲ್ಲ. ಆದರೆ ಈ ಮಾತನ್ನು ಹೇಳಿದವರ ಹಿನ್ನೆಲೆ ಉದ್ದೇಶ ಇವೆರಡನ್ನು ನೋಡಿದರೆ ಮಾತ್ರ ಈ ಮಾತಿನ ಗಂಡಾಂತರ ಗೊತ್ತಾಗುತ್ತದೆ.

ಜಗತ್ತಿನ ತುಂಬೆಲ್ಲ ಮೂರನೇ ಜಗತ್ತಿನ ರಾಷ್ಟ್ರಗಳಿಗೆ ಸಾಲ ನೀಡುವ ಈ ಬ್ಯಾಂಕ್ ಫಂಡ್‌ಗಳು ಸಾಲಗಾರ ದೇಶಗಳಿಗೆ ನೂರೆಂಟು ಶರತ್ತುಗಳನ್ನು ಹೇರಿ ಅಲ್ಲಿಯ ಆರ್ಥಿಕಗಳನ್ನು ಹಾಳುಗೆಡವುತ್ತಾರೆ. ತಮ್ಮ ಶರತ್ತುಗಳು ಸಾಲಗಾರ ದೇಶಗಳಿಗೆ ಒಳ್ಳೆಯದನ್ನೇ ಮಾಡುತ್ತದೆಂದು ಅವು ಹೇಳಿಕೊಳ್ಳುತ್ತವೆ. ಆದರೆ ಫಂಡ್-ಬ್ಯಾಂಕ್‌ಗಳ ಶರತ್ತುಗಳಿಗೆ ಬಾಗಿ ಅವುಗಳಿಂದ ಸಾಲ ಪಡೆದ ದೇಶಗಳೆಲ್ಲ ದಿವಾಳಿಯೆದ್ದು ಹೋಗಿರುವುದು ಆ ದೇಶಗಳ ಜನ ನೋವಿನಿಂದ ನಲುಗಿ ಹೋಗಿರುವುದು ಕಣ್ಣಿಗೆ ರಾಚುವಂತೆ ಕಾಣುತ್ತದೆ (ದೃಷ್ಟಿಯಿದ್ದವರಿಗೆ) ಇರಲಿ.

ಈಗ ಸಾಲ ಪಡೆವ ದೇಶಗಳಲ್ಲಿ ಉತ್ತಮ ಆಡಳಿತವಿರಬೇಕೆನ್ನುವ ಈ ಸಾಮ್ರಾಜ್ಯಶಾಹಿ ಸಂಸ್ಥೆಗಳ ಮಾತು ಈ ದೇಶಗಳ ರಾಜಕೀಯದಲ್ಲೂ ಹಸ್ತಕ್ಷೇಪ ಮಾಡುವ ಅವರ ಉದ್ದೇಶವನ್ನು ತೋರುತ್ತದೆ. ಇದುವರೆಗೆ ಬರೀ ಆರ್ಥಿಕ ವಿಷಯಗಳ ಬಗ್ಗೆ ಮಾತ್ರ ಮಾತನಾಡುತ್ತಿದ್ದ ಇವು ಈಗ ಈ ದೇಶಗಳ ರಾಜಕೀಯದ ಬಗ್ಗೆಯೂ ಮಾತನಾಡತೊಡಗಿರುವುದು ಅವುಗಳ ಉದ್ದೇಶವನ್ನು ತೋರುತ್ತವೆ. ಆರ್ಥಿಕದ ಮೂಲಕ ಪರೋಕ್ಷವಾಗಿ ಇವು ರಾಜಕೀಯದ ಮೇಲೂ ಪ್ರಭಾವ ಬೀರುತ್ತಿದ್ದುದು ಬೇರೆ ಮಾತು.

ಇಂತಹ ಮಾತನ್ನು ಭಾರತ ಮತ್ತು ಚೀಣಾ ಆಗಲೇ ಖಂಡಿಸಿದೆ. ಈ ಸಂಸ್ಥೆಗಳಿಗೆ ಸಾಲಗಾರ ದೇಶಗಳ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡುವ ಅಧಿಕಾರವಿಲ್ಲವೆಂದು ಅವು ಹೇಳಿವೆ.

ಒಟ್ಟಾರೆಯಾಗಿ ಈ ಸಭೆ ಬಹಳ ಅದ್ದೂರಿಯಾಗಿ ಈಗ ಚೀನಾಕ್ಕೆ ಸೇರಿರುವ ಹಾಂಗ್ ಕಾಂಗಿನಲ್ಲಿ ನಡೆದದ್ದೂ ಅಲ್ಲಿನ ಜನರ ಹುಬ್ಬೇರುವಂತೆ ಮಾಡಿದೆ. ಯಾಕೆಂದರೆ ಇವರ ಈ ಅದ್ದೂರಿ ಸಮಾವೇಶಕ್ಕೆ ಹಾಂಗ್‌ಕಾಂಗ್ ಬೆಲೆ ತೆರುವಂತೆ ಆಗಿದೆ. ಇದಲ್ಲದೆ ಇತ್ತೀಚೆಗೆ ಚೀನಾಕ್ಕೆ ಸೇರಿರುವ ಹಾಂಗ್‌ಕಾಂಗ್‌ನಲ್ಲೇ ಈ ಸಭೆಯನ್ನು ನಡೆಸುವಲ್ಲೂ ಪಿತೂರಿ ಇರಬಹುದಲ್ಲವೆ?

ಸಹಾಯಧನಗಳು ಅಪರಾಧಿಗಳು

ಈ ಸಹಾಯಧನಗಳಿಂದಲೇ ಹಣದುಬ್ಬರ ಉಂಟಾಗುತ್ತದೆ ಎಂದು ಅಪ್ಪಣೆ ಕೊಡಿಸಿದ್ದಾರೆ ಕೇಂದ್ರ ಹಣಕಾಸು ಮಂತ್ರಾಲಯದ ಮುಖ್ಯ ಸಲಹೆಗಾರ ಡಾ॥ ಶಂಕರ ಆಚಾರ್ಯರು. ಅವರ ಪ್ರಕಾರ ಸಹಾಯ ಧನಗಳು ಹೂಡಿಕೆಗೆ ಪ್ರೇರಣೆ ನೀಡುವುದಿಲ್ಲ. ಇದಕ್ಕೆ ಒಳ್ಳೆಯ ಉದಾಹರಣೆ ವಿದ್ಯುತ್ ವಲಯ ಹಾಗೆಯೇ ರಸಗೊಬ್ಬರಕ್ಕೆ ನೀಡಿದ ಸಹಾಯಧನ ಶ್ರೀಮಂತ ರೈತನಿಗೇ ಹೋಗಬಹುದು.

ಇದರಲ್ಲಿ ತೀರ ಹೊಸತೇನಿಲ್ಲ. ವಿದ್ಯುತ್ ವಲಯವನ್ನು ತೀವ್ರವಾಗಿ ಉದಾರೀಕರಿಸಿದರೂ ದೇಶದ ಬಂಡವಾಳಿಗರಾಗಲಿ ಬಹುರಾಷ್ಟ್ರೀಯ ಕಂಪನಿಗಳಾಗಲಿ ಹೂಡಿಕೆ ಮಾಡಲು ಮುಂದೆ ಬಂದಿಲ್ಲವೆಂದು ಜಗಜ್ಜಾಹೀರಾಗಿರುವ ಸತ್ಯ. ಸರ್ಕಾರ ಈ ಹೂಡಿಕೆಯ ಮೇಲೆ ಪ್ರತಿಫಲದ ಭರವಸೆ ನೀಡಿದ ಮೇಲೆ ಕೆಲವು ಕಂಪನಿಗಳು ಹೂಡಿಕೆ ಮಾಡಲು ಮುಂದೆ ಬಂದಿರುವುದು. ಇವೂ ಹಗರಣಕಾರಿ ರೀತಿಯಲ್ಲಿ ನಡೆದುಕೊಂಡಿ ರುವುದೂ ಈಗ ಏನ್ರಾನ್ ಪ್ರಕರಣದಿಂದ ಸ್ಪಷ್ಟವಾಗಿದೆ. ಹೀಗೆ ಉದಾರೀಕರಣದಿಂದ ವಿದ್ಯುತ್ ವಲಯದ ಸಮಸ್ಯೆಗಳು ಕಡಿಮೆ ಯಾಗುವ ಬದಲು ಹೆಚ್ಚಾಗಿವೆ ಎಂಬುದೂ ಸ್ಪಷ್ಟ.

ಅದೇ ರೀತಿ ಶ್ರೀಮಂತ ರೈತರಿಗೆ/ಜಮೀನುದಾರರಿಗೆ ಸಹಾಯಧನ ನೀಡಬೇಕೆಂಬುದೇನಿಲ್ಲ. ಆದರೆ ಇವರಿಗೆ ಸಹಾಯಧನದ ಲಾಭ ಬರಬಾರದು ಎಂದು ದೇಶದಲ್ಲಿನ ಅಪಾರ ಪ್ರಮಾಣದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಯಾವುದೇ ತರಹದ ನೆರವು ಸಿಗಬಾರದೆನ್ನುವುದೂ ವಿತಂಡವಾದ. ಹೀಗೆ ಉದಾರೀಕರಣ ವಾದಿಗಳು ಇಂತಹ ವಾದಗಳನ್ನು ಹೂಡುತ್ತಲೇ ಇದ್ದಾರೆ.

ಸಹಾಯಧನದಿಂದ ಹಣದುಬ್ಬರ ಹೆಚ್ಚುವುದಾದರೆ ಬಂಡವಾಳಿಗರಿಗೆ ಅಪಾರ ಪ್ರಮಾಣದ ತೆರಿಗೆ ರಿಯಾಯಿತಿ ನೀಡುವುದರಿಂದ ಹಣದುಬ್ಬರ ಹೆಚ್ಚುವುದಿಲ್ಲವೇ?

ದೇಶದ ಬಡಜನರಿಗೆ ಅತ್ಯಾವಶ್ಯಕ ಪರಿಹಾರ ನೀಡುವ ಸಹಾಯಧನಗಳು ಹಣದುಬ್ಬರ ಹೆಚ್ಚಿಸುತ್ತವೆ; ಬಂಡವಾಳಿಗರಿಗೆ ನೀಡುವ ಸಹಾಯಧನಗಳು ರಿಯಾಯಿತಿಗಳು ದೇಶದ ಅಭಿವೃದ್ಧಿಗೆ ಪ್ರೇರಣೆ ನೀಡುತ್ತವೆ. ಹೇಗಿದೆ ಈ ವಾದ?

ಸಾಮಾಜ್ಯಶಾಹಿ-ವಿರೋಧಿ ಹೋರಾಟವನ್ನು ಮುಂದುವರಿಸಿದರು. ಬ್ರಿಟಿಶ್ ಸರಕಾರ ಇವರನ್ನು 'ಅಪಾಯಕಾರಿ ವ್ಯಕ್ತಿ' ಎಂದು ಸಾರಿ ಅವರ ಬಂಧನಕ್ಕೆ ಇನಾಮುಸಹ ಘೋಷಿಸಿತು. ಅತ್ಯಂತ ವಿಕಟ ಪರಿಸ್ಥಿತಿಯಲ್ಲಿ ರಾಮಮೂರ್ತಿ ಮತ್ತು ಅವರ ಸಹಯೋಗಿಗಳು ಈ ಅವಧಿಯಲ್ಲಿ ಸಾಮೂಹಿಕ ಹೋರಾಟಗಳನ್ನು ತಲೆಮರೆಸಿಕೊಂಡೇ ಸಂಘಟಿಸಿದರು. 1940 ರ ಕೊನೆ ಭಾಗದಲ್ಲಿ ಇವರು ಪೋಲೀಸರ ಕೈಗೆ ಸಿಕ್ಕಿಬಿದ್ದಾಗ ಈ ಲೇಖನದ ಆರಂಭದಲ್ಲಿ ಪ್ರಸ್ತಾಪಿಸಿದ ಮದ್ರಾಸ್ ಕಮ್ಯುನಿಸ್ಟ್ ಪಿತೂರಿ ಮೊಕದ್ದಮೆ ಹೂಡಲಾಯಿತು. ಬ್ರಿಟಿಶ್ ಸರಕಾರವನ್ನು ಹಿಂಸಾತ್ಮಕವಾಗಿ ಕಿತ್ತೆಸೆಯುವ ಪಿತೂರಿ ನಡೆಸಿದರೆಂದು ಅವರ ಮೇಲೆ ಆಪಾದನೆ ಹಾಕಲಾಯಿತು. ಸ್ವತಃ ರಾಮಮೂರ್ತಿಯವರೇ ತಮ್ಮ ಸಂಗಾತಿಗಳ ಪರವಾಗಿ ಧೈರ್ಯದಿಂದ ವಾದಿಸಿದರು. ನಿರೀಕ್ಷಿಸಿದಂತೆ ಎಲ್ಲಾ ಆಪಾದಿತರಿಗೆ ಶಿಕ್ಷೆಯಾಯಿತು. ರಾಮಮೂರ್ತಿಯವರಿಗೆ ಎಲ್ಲರಿಗಿಂತ ದೀರ್ಘ ಕಾಲದ ಸಜೆಯಾಯಿತು.

1942 ರಲ್ಲಿ ಬಿಡುಗಡೆಯಾದಾಗ ಮುಂಬೈಯಲ್ಲಿ ಆಗಸ್ಟ್ 7-8 ರಂದು ಐತಿಹಾಸಿಕ ಕಾಂಗ್ರೆಸ್ ಅಧಿವೇಶನ ನಡೆದು 'ಕ್ವಿಟ್ ಇಂಡಿಯಾ' ನಿರ್ಣಯವನ್ನು ಅಂಗೀಕರಿಸಲಾಯಿತು. ರಾಮಮೂರ್ತಿ ಮತ್ತಿತರ 12 ಕಮ್ಯುನಿಸ್ಟ್ ಎಐಸಿಸಿ ಸದಸ್ಯರು ಈ ನಿರ್ಣಯಕ್ಕೆ ಕೆಲವು ತಿದ್ದುಪಡಿಗಳನ್ನು ಸೂಚಿಸಿದರು. ಅದನ್ನು ತಿರಸ್ಕರಿಸಲಾಯಿತು. ಆದರೂ ಬ್ರಿಟಿಶ್ ಸರಕಾರ ಕಾಂಗ್ರೆಸ್ ಮುಖಂಡರನ್ನು ಬಂಧಿಸಿದಾಗ ರಾಷ್ಟ್ರೀಯ ಮುಖಂಡರ ಬಿಡುಗಡೆಗೆ ಒತ್ತಾಯಿಸಿ ವ್ಯಾಪಕ ಪ್ರಚಾರಾಂದೋಲನ ನಡೆಸಿದರು. ಇದೇ ಅವಧಿಯಲ್ಲಿ ಕಾರ್ಮಿಕ ವರ್ಗದ ಸಂಘಟನೆಯಲ್ಲೂ ತೊಡಗಿದರು.

ಯುದ್ಧಾನಂತರ ದೇಶಾದ್ಯಂತ ಒಂದು ಉತ್ಕ್ರಾಂತಿಯೇ ಭುಗಿಲೆದ್ದಿತು. ಆಗ ತಮಿಳು ನಾಡಿನಲ್ಲಿ ಪಿ.ರಾಮಮೂರ್ತಿ ಹಲವು ಹೋರಾಟಗಳ ಮುಂಚೂಣಿಯಲ್ಲಿದ್ದರು. ಇವುಗಳಲ್ಲಿ ಮಧುರೆಯ ಹಾರ್ವೆ ಗಿರಣಿ ಹೋರಾಟ ಪ್ರಮುಖವಾದದು. ಅದರಲ್ಲಿ ಇವರನ್ನು ಬಂಧಿಸಿ ಮತ್ತೊಂದು ಪಿತೂರಿ ಮೊಕದ್ದಮೆ ಹೂಡಲಾಯಿತು. ಆದರೂ ಗಿರಣಿ ಕಾರ್ಮಿಕರ ಹೋರಾಟ ಜಗ್ಗದೇ ಮುಂದುವರಿಯಿತು. ಕೊನೆಗೆ ಆಗಸ್ಟ್ 14, 1947 ರಂದು ಮ್ಯಾಜಿಸ್ಟ್ರೇಟ್‌ರೇ ಜೈಲಿಗೆ ಬಂದು ರಾಮಮೂರ್ತಿ ಮತ್ತಿತರರನ್ನು ಯಾವುದೇ ಪುರಾವೆ ಸಿಗದ ಕಾರಣ ಬಿಡುಗಡೆ ಮಾಡಿರುವುದಾಗಿ ತೀರ್ಪಿತ್ತರು. ಈ ಸುದ್ದಿ ಇಡೀ ಮಧುರೆ ನಗರದಲ್ಲಿ ವಿದ್ಯುತ್ತಿನಂತೆ ಹರಡಿತು. ರಾಮಮೂರ್ತಿಯವರು ತಮ್ಮ ಸಹವರ್ತಿಗಳೊಂದಿಗೆ ಜೈಲಿನಿಂದ ಹೊರ ಬರುತ್ತಿದ್ದಾಗ ಅವರನ್ನು ಸಹಸ್ರಾರು ಕಾರ್ಮಿಕರು ಅತ್ಯಂತ ಸಂತೋಷಗಳಿಂದ ಬರಮಾಡಿಕೊಂಡರು.

ಸಂಸ್ಕೃತ ಪಂಡಿತನಾಗಿ, ಬಹುಶಃ ಕಾಂಚೀ ಶಂಕರಾಚಾರ್ಯರ ಶಿಷ್ಯನಾಗಿ ಬೆಳೆಯಬೇಕಾದ ಕುಂಭಕೋಣಂನ ಹುಡುಗ ಅದರ ಬದಲು ತನ್ನ 12 ನೇ ವಯಸ್ಸಿನಲ್ಲೇ ರಾಷ್ಟ್ರೀಯ ಹೋರಾಟಕ್ಕೆ ಧುಮುಕಿ ಹಲವಾರು ಬಂಧನಗಳು, ತಲೆಮರೆಸಿಕೊಂಡಾಗಿನ ಕಠಿಣ ಬದುಕು ಇವನ್ನೆಲ್ಲಾ ಎದುರಿಸಿ ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಅಮೂಲ್ಯ ಕಾಣಿಕೆ ನೀಡಿದ.

ಆನಂತರ ರಾಮಮೂರ್ತಿಯವರು ಒಬ್ಬ ಕಾರ್ಮಿಕ ವರ್ಗದ ಮುಖಂಡರಾಗಿ, ನಿರ್ಭೀತ ಕಮ್ಯುನಿಸ್ಟನಾಗಿ ಅತ್ಯುನ್ನತ ಮಟ್ಟದ ಸಂಸದೀಯ ಪಟುವಾಗಿ ದೇಶಾದ್ಯಂತ ಪ್ರಖ್ಯಾತರಾದರು. ○

ದುರಹಂಕಾರೀ ಸಾಮ್ರಾಜ್ಯ!

ಸಿಪಿಐ(ಎಂ) ಕೇಂದ್ರ ಸಮಿತಿಯ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯ ಸಂಪಾದಕೀಯ

ಬ್ರಿಟಿಶ್ ರಾಣಿಯ ಭಾರತ ಭೇಟಿಯ ಸಿದ್ಧತೆಗಳಲ್ಲಿ ಎರಡೂ ಕಡೆಗಳಿಂದ ವಿವಾದಾತ್ಮಕ ಪ್ರಶ್ನೆಗಳ ಮೇಲೆ ವಿವಿಧ ಹೇಳಿಕೆಗಳು, ನಿರಾಕರಣೆಗಳು ಎದ್ದು ಕಂಡವು. ಇತ್ತೀಚೆಗೆ ಜಲಿಯನ್ ವಾಲಾಬಾಗ್‌ನಲ್ಲಿ ರಾಣಿಯ ಗಂಡ ಡ್ಯೂಕ್‌ಆಫ್ ಎಡಿನ್‌ಬರೋರವರ 1919 ರ ಹತ್ಯಾಕಾಂಡ ಕುರಿತಂತೆ ಭಾರತೀಯ ಲೆಕ್ಕ 'ವಿಪರೀತ ಉತ್ಪ್ರೇಕ್ಷೆಗಳಿಂದ" ಕೂಡಿದ ಎಂಬ ಹೇಳಿಕೆ ನೀಡಿದರು. 1919 ರ ಅಮಾನುಷ ಕೊಲೆಗಳಿಗೆ ಬ್ರಿಟಿಶ್ ರಾಣಿ ಕ್ಷಮೆ ಯಾಚಿಸಬೇಕು ಎಂದು ಹಲವಾರು ಭಾರತೀಯರು ಒತ್ತಾಯಿಸಿದ್ದರು. ವಿಧ್ಯುಕ್ತವಾಗಿ ಕ್ಷಮೆ ಕೇಳದಿದ್ದರೂ ರಾಣಿ ಹುತಾತ್ಮರ ಸ್ಮಾರಕದಲ್ಲಿ ಪುಷ್ಪಗುಚ್ಛವನ್ನಿಟ್ಟರು. ಬ್ರಿಟಿಶ್ ಚಕ್ರಾಧಿಪತ್ಯ ಹಳೆಯ ಅತ್ಯಾಚಾರಗಳಿಗೆ ಕ್ಷಮೆ ಕೇಳಬೇಕೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ ಎಂದು ವಾದ ಹೂಡುವವರು 1995 ರಲ್ಲಿ ಇದೇ ರಾಣಿ ನ್ಯೂಝಿಲೆಂಡ್‌ನ ಮೂಲ ನಿವಾಸಿ ಮಾವೋರಿ ಜನಗಳಲ್ಲಿ 400 ಪದಗಳ ಕ್ಷಮಾಯಾಚನೆ ಮಾಡಿದ್ದರು ಎಂಬುದನ್ನು ನೆನಪಿಸಿಕೊಳ್ಳುವುದು ಒಳ್ಳೆಯದು. ಬ್ರಿಟಿಶರು ಬಿಳಿಯ ವಸಾಹತುಕಾರರನ್ನು ನ್ಯೂಝಿಲೆಂಡಿನಲ್ಲಿ ನೆಲೆಗೊಳಿಸುವಾಗ ಈ ಜನಗಳ ಮೇಲೆ ಹೇಳತೀರದ ಅತ್ಯಾಚಾರಗಳನ್ನು ನಡೆಸಿದ್ದರು.

ಇದು ಹಳೆಯ ಸಮಾಚಾರವಾಯಿತು. ಸಮಕಾಲೀನ ಮಹತ್ವದ ಒಂದು ಸಂಗತಿಯೂ ನಡೆಯಿತು. ಕಾಶ್ಮೀರ ವಿವಾದ ದಲ್ಲಿ ಕೇಳದಿದ್ದರೂ ಮಧ್ಯಸ್ಥಿಕೆ ವಹಿಸಲು ತಾನು ಸಿದ್ಧ ಎನ್ನುವ ಬಾರಿ ಈಗ ಇಂಗ್ಲೆಂಡಿ ನದ್ದು. ಕೆಲವು ವಾರಗಳ ಹಿಂದೆ ಭಾರತ- ಪಾಕಿಸ್ತಾನಗಳ ನಡುವಿನ ಕಾಶ್ಮೀರ ಸಮಸ್ಯೆ ಯನ್ನು ಪರಿಹರಿಸಲು ತಾನು 'ಮಧ್ಯಸ್ಥಿಕೆ' ವಹಿಸುವುದಾಗಿ ಅಮೆರಿಕಾ ಹೇಳಿದಾಗ ಅದನ್ನು ಭಾರತ ತಿರಸ್ಕರಿಸಿತ್ತು. ಅದು ಸರಿಯಾದ ನಿರ್ಧಾರ. ಏಕೆಂದರೆ ಇದೊಂದು ದ್ವಿಪಕ್ಷೀಯ ಸಂಗತಿ. ಅದರ ಇತ್ಯರ್ಥ ಹಿಂದಿನ ಪ್ರಧಾನಿಗಳಾದ ಇಂದಿರಾಗಾಂಧಿ ಹಾಗೂ ಜುಲ್ಫಿಕರ್ ಆಲಿ ಭುಟ್ಟೋ ನಡುವೆ ನಡೆದ ಶಿಮ್ಲಾ ಒಪ್ಪಂದ ಹಾಕಿದ ಅಡಿಗಲ್ಲನ್ನು ಅವಲಂಬಿಸಿದೆ. ಯಾವ ದೇಶವೂ ಇಲ್ಲಿ ಮಧ್ಯಸ್ಥಿಕೆ ವಹಿಸುವ ಅಗತ್ಯವಿಲ್ಲ. ಎರಡು ನೆರೆ ದೇಶಗಳ ನಡುವೆ ನಾಲ್ಕು ದಶಕಗಳಿಗೂಹೆಚ್ಚು ಕಾಲ ಘರ್ಷಣೆಯ ವಾತಾವರಣ ವನ್ನು ಸೃಷ್ಟಿಸಿ ಲಾಭ ಪಡೆದ ಅಮೆರಿಕಾಕ್ಕಂತೂ ಈ ರೀತಿ ಮಧ್ಯಸ್ಥಿಕೆ ವಹಿಸಲು ಯಾವ ಹಕ್ಕೂ ಇಲ್ಲ. ಇದರಲ್ಲಿ ತಾನೇಕೆ ಹಿಂದೆ ಬೀಳಬೇಕು ಎಂಬುದು ಬ್ರಿಟನ್ನಿನ ಯೋಚನೆಯಿದ್ದಂತಿದೆ. ಎಷ್ಟೆಂದರೂ ಅವಿಭಜಿತ ಭಾರತ ಒಂದೊಮ್ಮೆ ಬ್ರಿಟಿಶ್ ವಸಾಹತುಶಾಹಿ ಕಿರೀಟದ 'ರತ್ನ' ವಾಗಿತ್ತಲ್ಲವೇ? ಹೀಗಿರು ವಾಗ ಬೇರೆಯವರಿಗೆ ಮಧ್ಯಸ್ಥಿಕೆ ವಹಿಸುವ ಬಗ್ಗೆ ಮಾತನಾಡುವ ಧೈರ್ಯವಾದರೂ ಹೇಗೆ ಸಾಧ್ಯ-ಇದು ಬ್ರಿಟನ್ನಿನ ಭಾವನೆ ಯಿಂತಿದೆ. ಬ್ರಿಟಿಶ್ ವಿದೇಶ ಕಾರ್ಯದರ್ಶಿ ಇಸ್ಲಾಮಾಬಾದಿನಲ್ಲಿ ಪತ್ರಿಕೆಗಳಲ್ಲಿ ಹಾಗೇನೂ ಹೇಳಿಲ್ಲ ಎಂದು ನಿರಾಕರಿಸಿದರೂ ಒಂದು ತಿಂಗಳ ಹಿಂದೆ ನ್ಯೂಯಾರ್ಕಿನಲ್ಲಂತೂ ಹೇಳಿದ್ದರು- ಭಾರತ-ಪಾಕಿಸ್ತಾನ ಮಾತುಕತೆ ಗಳಲ್ಲಿ ಭಾಗ ವಹಿಸಲು ಇಂಗ್ಲೆಂಡಿಗೆ ಬಹಳ ಸಂತೋಷವೆನಿಸುತ್ತಿದೆ ಎಂದು. ಭಾರತದಲ್ಲಿ ಬ್ರಿಟಿಶ್ ಹೈಕಮಿಷನರ್ ಟಿಪ್ಪಣೆಗಳಂತೂ ಬಹಳ ಉದ್ವೇಗಕಾರಿ. ಇಂತಹ ಹೇಳಿಕೆಗಳಿಗೆ ಭಾರತೀಯರ ಪ್ರತಿಭಟನೆಗೆ ಪ್ರತಿಕ್ರಿಯಿಸುತ್ತಾ 'ಗಾಳಿಗುದ್ದಾಟ' ಮಾಡಬೇಡಿ ಎಂದು ಭಾರತೀಯ ರಾಜಕೀಯ ಮುಖಂಡತ್ವಕ್ಕೆ ಸಲಹೆ ಮಾಡಿದರು. ಅವರ ಸಲಹೆಯನ್ನು ಯಾರೂ ಕೇಳಿರಲಿಲ್ಲ.

ಬೇರೆ ಯಾವುದೇ ಮೂರನೇ ದೇಶವೂ ಈ ವಿವಾದದಲ್ಲಿ ಮಧ್ಯಸ್ಥಿಕೆ ವಹಿಸುತ್ತೇನೆ ಎಂಬ ದುರಹಂಕಾರವನ್ನು ತೋರಬೇಕಾಗಿಲ್ಲ. ಬ್ರಿಟನ್ನಿಗಂತೂ ಈ ವಿಷಯದಲ್ಲಿ ಯಾವ ವಿಶ್ವಾಸಾರ್ಹತೆಯೂ ಇಲ್ಲ. 1857 ರ ಮೊದಲ ಸ್ವಾತಂತ್ರ್ಯ ಸಮರದ ನಂತರ ಬ್ರಿಟಿಶರು ಪರಿಪೂರ್ಣಗೊಳಿಸಿದ ಕುಖ್ಯಾತ "ಒಡೆದಾಳುವ ನೀತಿ"ಯೇ ತಾನೇ ಭಾರತದಲ್ಲಿ ಮತೀಯ ಕಲಹದ ಆಧಾರವನ್ನು ಸೃಷ್ಟಿಸಿದ್ದು! ನಿಜ, ಎರಡೂ ಕಡೆಯ ಕೋಮುವಾದಿ ಶಕ್ತಿಗಳು ಇದರಲ್ಲಿ ಬ್ರಿಟಿಶರೂ ಮೆಚ್ಚುವಂತಹ ಪ್ರೋತ್ಸಾಹ ನೀಡಿದರು. ದೇಶದ ವಿಭಜನೆ ಇಂತಹ ಬ್ರಿಟಿಶ್ ಧೋರಣೆಗಳ ಫಲಿತಾಂಶ. ವಾಸ್ತವವಾಗಿ ಈ ಉಪಖಂಡವನ್ನು ಒಡೆದ ಪಿತೂರಿ ಇದರ ವಿನಾಶಕಾರಿ ಪರಿಣಾಮ ಈಗಲೂ ಎರಡೂ ದೇಶಗಳನ್ನು ಬಾಧಿಸುತ್ತಿದೆ.

ಪಾಕಿಸ್ತಾನದೊಡನೆ ನಮ್ಮ ವಿವಾದಗಳಲ್ಲಿ ಮಧ್ಯಸ್ಥಿಕೆ ವಹಿಸುವ ಬ್ರಿಟನ್ನಿನ ಹೇಳಿಕೆಗಳನ್ನು ಅಧಿಕೃತವಾಗಿ ತಿರಸ್ಕರಿಸುವುದರ ಜತೆಯೇ ಭಾರತ ಪಾಕಿಸ್ತಾನದೊಡನೆ ಉತ್ತಮ ನೆರೆ-ಕರೆ ಸಂಬಂಧಗಳನ್ನು ಏರ್ಪಡಿಸಿಕೊಳ್ಳಲು ಶ್ರಮಿಸುವತ್ತ ತಾನೇ ಮುತುವರ್ಜಿ ವಹಿಸಬೇಕು.



ಕೊನೆಗೂ ಮುಗಿದ ಬಿಜೆಪಿ-ಬಿಎಸ್‌ಪಿ ಮಧುಚಂದ್ರ : ಅಡ್ಡ ದಾರಿಯಲ್ಲಿ 'ಬಹುಮತ' ಪಡೆದ ಬಿಜೆಪಿ

ಉತ್ತರ ಪ್ರದೇಶದಲ್ಲಿ ಕಳೆದ ಆರು ತಿಂಗಳಿಂದ ಅಧಿಕಾರದಲ್ಲಿದ್ದ ಬಿ.ಜೆ.ಪಿ.-ಬಿ.ಎಸ್.ಪಿ. ಮೈತ್ರಿಕೂಟ ಸರಕಾರ ಎಷ್ಟು ಬೇಗ ತೊಲಗುತ್ತದೋ ದೇಶಕ್ಕೆ ಅಷ್ಟು ಒಳ್ಳೆಯದು ಎಂದು 'ಐಕ್ಯರಂಗ' ಕಳೆದ ಸಂಚಿಕೆಯಲ್ಲಷ್ಟೆ (ಅಕ್ಟೋಬರ್ 20-26) ಬರೆದಿತ್ತು. ಅಪವಿತ್ರ ಕೂಟದ ಈ ಎರಡು ಪಕ್ಷಗಳ ನಡುವೆ ಏರ್ಪಟ್ಟಿರುವ 'ಯುದ್ಧ ವಿರಾಮ' ತಾತ್ಕಾಲಿಕ, ಯಾವಾಗ ಬೇಕಾದರೂ ಉಭಯ ಪಕ್ಷಗಳು ಕಾದಾಟಕ್ಕಿಳಿಯುವ ಸಂಭವ ಇದ್ದೇ ಇದೆ ಎಂದು 'ದೇಶದೊಳಗೆ' ಅಂಕಣದಲ್ಲಿ ವಿಶ್ಲೇಷಿಸಲಾಗಿತ್ತು. ಅದೀಗ ನಿಜವಾಗಿ ಪರಿಣಮಿಸಿದೆ.

ಆಳುವ ಕೂಟದಿಂದ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಅಕ್ಟೋಬರ್ 19 ರಂದು ಹೊರಬಿದ್ದು ಭಾರತೀಯ ಜನತಾ ಪಕ್ಷದ (ಬಿಜೆಪಿ) ಕಲ್ಯಾಣಸಿಂಗ್ ಮುಖ್ಯಮಂತ್ರಿ ಆಗಿರುವ ಸರ್ಕಾರಕ್ಕೆ ಬೆಂಬಲವನ್ನು ವಾಪಸು ಪಡೆಯಿತು.

ಬಿಎಸ್‌ಪಿ ಬೆಂಬಲ ವಾಪಸ್ಸಿನಿಂದ ಅಲ್ಪಸಂಖ್ಯಾತರಾದ ಕಲ್ಯಾಣಸಿಂಗ್ ಸರಕಾರಕ್ಕೆ ವಿಧಾನಸಭೆಯಲ್ಲಿ ಅಕ್ಟೋಬರ್ 21 ರಂದು ವಿಶ್ವಾಸಮತವನ್ನು ಪಡೆಯುವಂತೆ ರಾಜ್ಯಪಾಲರು ಸೂಚಿಸಿದ್ದರು.

ಕೇವಲ ಎರಡು ದಿನಗಳ ಅವಧಿಯಲ್ಲಿ ಈ 'ಮಹಾನ್ ತತ್ವಬದ್ಧ' ಪಕ್ಷ ಪ್ರತಿಪಕ್ಷಗಳ ಶಾಸಕರಿಗೆ ಆಮಿಷವೊಡ್ಡಿ, ಬಹುಮತವನ್ನು ಗಳಿಸುವ 'ಸಾಧನೆ' ಮಾಡುವಲ್ಲಿ ಯಶಸ್ವಿಯಾಗಿದೆ.

ಕಲ್ಯಾಣಸಿಂಗ್ 'ವಿಶ್ವಾಸಮತ' ಪಡೆದ 1997 ರ ಅಕ್ಟೋಬರ್ 21 ದೇಶದ ಸಂಸದೀಯ ಇತಿಹಾಸದಲ್ಲಿ ಒಂದು ಕರಾಳ ದಿನ. ಅಂದು ವಿಧಾನಸಭೆಯ ಕಲಾಪಗಳು ಆರಂಭವಾಗುತ್ತಿದ್ದಂತೆಯೇ ಯಾವತ್ತೂ ಕಂಡು-ಕೇಳರಿಯದ ಗಲಭೆ ನಡೆಯಿತು. ಬಿಎಸ್‌ಪಿ ಬೆಂಬಲ ವಾಪಸಾತಿಯಿಂದ ಕಂಗೆಟ್ಟ ಬಿಜೆಪಿ ಸದಸ್ಯರು ಪ್ರತಿಪಕ್ಷಗಳ ಸದಸ್ಯರ ಮೇಲೆ ಆಕ್ರಮಣ ಮಾಡಿದರು.

ವಿಶೇಷ ರಕ್ಷಣಾ ಪಡೆಯ (ಎಸ್‌ಪಿಎಫ್) ರಕ್ಷಣೆ ಇಲ್ಲದಿದ್ದರೆ ಬಿಜೆಪಿ ಸದಸ್ಯರು ನನ್ನನ್ನು ಕೊಂದು ಹಾಕುತ್ತಿದ್ದರು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಬಿಎಸ್‌ಪಿ ನಾಯಕಿ ಮಾಯಾವತಿ ಹೇಳಿರುವುದು ಪರಿಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಸದನದಲ್ಲಿ ನಡೆದ ಭಾರೀ ಹಿಂಸಾಚಾರದಲ್ಲಿ ಅನೇಕ ಶಾಸಕರಲ್ಲದೆ ಕೆಲವು ಸುದ್ದಿಗಾರರೂ ಗಾಯಗೊಂಡರು.

ಹಿಂಸಾಚಾರವನ್ನು ಪ್ರತಿಭಟಿಸಿ ಎಲ್ಲಾ ಪ್ರತಿಪಕ್ಷಗಳು ಸಭಾತ್ಯಾಗ ಮಾಡಿದಾಗ ಕಲ್ಯಾಣಸಿಂಗ್ ವಿಶ್ವಾಸಮತ ಗೊತ್ತುವಳಿಯನ್ನು ಮಂಡಿಸಿದರು. ಅದು 222 ಮತಗಳಿಂದ 'ಅಂಗೀಕಾರ' ವಾಯಿತು. ವಿರೋಧವಾಗಿ ಒಂದೇ ಒಂದು ಮತ ಬೀಳಲಿಲ್ಲ!

425 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿ ಸ್ವತಂತ್ರವಾಗಿಯಾಗಲೀ ಅದರ ಮಿತ್ರ ಪಕ್ಷಗಳ ನೆರವಿನಿಂದಾಗಲೀ ಸರಳ ಬಹುಮತವನ್ನು ಗಳಿಸುವ ಸ್ಥಿತಿಯಲ್ಲಿ ಇರಲಿಲ್ಲ. ಬಿಜೆಪಿಗೆ ಇರುವುದು 174 ಸದಸ್ಯರು. ಮಿತ್ರ ಪಕ್ಷ ಸಮತಾ ಪಾರ್ಟಿ ಕೇವಲ ಒಬ್ಬರನ್ನು ಹೊಂದಿದೆ.

ಆದರೆ, ಬಿಎಸ್‌ಪಿ ಬೆಂಬಲ ವಾಪಸಾತಿಯ ನಿರ್ಣಯ ಹೊರ ಬೀಳುತ್ತಿದ್ದಂತೆಯೇ ಕಾಂಗ್ರೆಸ್, ಜನತಾದಳ ಮತ್ತು ಸ್ವತಃ ಬಿಎಸ್‌ಪಿಯಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿ ಈ ಮೂರೂ ಪಕ್ಷಗಳ ಕೆಲ ಸದಸ್ಯರು ಆಯಾ ಪಕ್ಷಗಳಿಂದ ಹೊಂದಿದ್ದು ತಮ್ಮದೇ ಪ್ರತ್ಯೇಕ ಗುಂಪುಗಳನ್ನು ರಚಿಸಿಕೊಂಡು ಬಿಜೆಪಿ ಗೆ ಬೆಂಬಲ ನೀಡಿದರು.

ಕಾಂಗ್ರೆಸ್‌ನಿಂದ ಸಿಡಿದು ಹೋದ ಬಣದ 22, ಜನತಾದಳದಿಂದ ಹೊರಬಂದ ಮೂವರು ಮತ್ತು ಬಿಎಸ್‌ಪಿ ಯ 12 ಸದಸ್ಯರಲ್ಲದೆ ಒಂಭತ್ತು ಮಂದಿ ಪಕ್ಷೇತರರೂ ವಿಶ್ವಾಸಮತ ಗೊತ್ತುವಳಿ ಪರವಾಗಿ ಮತ ಹಾಕಿದರು.

ಬಂಡವಾಳಶಾಹಿ ಪಕ್ಷಗಳವರು ಯಾವತ್ತೂ ಒಂದು ತತ್ವ ಸಿದ್ಧಾಂತಕ್ಕೆ ಬದ್ಧರಾಗಿರುವುದಿಲ್ಲ. ಗಾಳಿ ಬಂದತ್ತ ತೂರಿಕೊಳ್ಳುವ ಪ್ರವೃತ್ತಿ ಅವರಲ್ಲಿ ಸಹಜವಾಗಿ ಮನೆ ಮಾಡಿರುತ್ತದೆ ಎನ್ನುವುದಕ್ಕೆ ಉತ್ತರ ಪ್ರದೇಶದ ವಿದ್ಯಮಾನವೇ ಸಾಕ್ಷಿ. ಮಂತ್ರಿ ಸ್ಥಾನದ ಆಮಿಷಕ್ಕೆ ಒಳಗಾಗಿಯೋ, ಚುನಾವಣೆಯ ಹೆದರಿಕೆಯಿಂದಲೋ ಇವರೆಲ್ಲ ಬಿಜೆಪಿ ಗೆ ಬೆಂಬಲ ಕೊಟ್ಟಿರುವುದು ಸುಸ್ಪಷ್ಟ.

ರಾಷ್ಟ್ರಪತಿ ಆಡಳಿತ ಪ್ರಸ್ತಾಪ ಹಿಂದಕ್ಕೆ

ವಿಧಾನಸಭೆಯಲ್ಲಿ ನಡೆದ ಅಭೂತಪೂರ್ವ ಹಿಂಸಾತ್ಮಕ ಘಟನೆಗಳೂ ಹಾಗೂ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದಲ್ಲಿ ರಾಷ್ಟ್ರಪತಿ ಆಡಳಿತ ಹೇರಬೇಕೆಂಬ ರಾಜ್ಯಪಾಲರ ಶಿಫಾರಸ್ಸನ್ನು ಕೇಂದ್ರ ಸಚಿವ ಸಂಪುಟ ಅಂಗೀಕರಿಸಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸ್ಸು ಮಾಡಿತ್ತು.

ಆದರೆ ಕೇಂದ್ರ ಸಚಿವ ಸಂಪುಟ ಮಾಡಿದ ಈ ಶಿಫಾರಸ್ಸನ್ನು ಪುನರ್‌ಪರಿಶೀಲಿಸುವಂತೆ ಸೂಚಿಸಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಈ ಪ್ರಸ್ತಾವವನ್ನು ವಾಪಸು ಕಳಿಸಿದರು.

ಈ ಹಿನ್ನೆಲೆಯಲ್ಲಿ ಅಕ್ಟೋಬರ್ 22 ರಂದು ಮತ್ತೆ ಸಭೆ ಸೇರಿದ ಕೇಂದ್ರ ಸಂಪುಟ ಸುದೀರ್ಘವಾಗಿ ಚರ್ಚಿಸಿ ರಾಷ್ಟ್ರಪತಿ ಆಡಳಿತ ಹೇರುವ ಪ್ರಸ್ತಾವವನ್ನು ವಾಪಸು ಪಡೆದುಕೊಳ್ಳಲು ನಿರ್ಧರಿಸಿತು. ಈ ವಿದ್ಯಮಾನದಿಂದಾಗಿ ಕಲ್ಯಾಣಸಿಂಗ್ ನೇತೃತ್ವದ ಬಿ. ಜೆ.ಪಿ. ಸರಕಾರ ಉತ್ತರ ಪ್ರದೇಶದಲ್ಲಿ ಮುಂದುವರಿಯುವುದು ಖಚಿತವಾಗಿದೆ.

ಬಿಎಸ್‌ಪಿ ಆರೋಪಿ

ದೇಶದ ಅತ್ಯಂತ ದೊಡ್ಡ ಹಾಗೂ ರಾಜಕೀಯವಾಗಿ ಮಹತ್ವವುಳ್ಳ ಒಂದು ರಾಜ್ಯದಲ್ಲಿ ಅಪಾಯಕಾರಿಯಾದ ಕೋಮುವಾದಿ ಪಕ್ಷವೊಂದು ಅಧಿಕಾರದ ಚುಕ್ಕಾಣಿ ಹಿಡಿದು ಕುಳಿತುಕೊಳ್ಳುವ ಸನ್ನಿವೇಶ ನಿರ್ಮಾಣವಾಗಿದೆ. ಇದಕ್ಕೆ, ದಲಿತರ ಹಿತರಕ್ಷಕ ಎಂದು ಹೇಳಿಕೊಳ್ಳುವ ಬಹು ಜನ ಸಮಾಜ ಪಕ್ಷವೇ ಕಾರಣವಾಗಿದೆ.

ಕೋಮುವಾದದ ವಿಷ ಬೀಜ ಬಿತ್ತಿ ದೇಶದ ಶಾಂತಿಗೆ ಕೋಮು ದಳ್ಳುರು ಹಚ್ಚುವ ದುರಾಚಾರದ ಪಕ್ಷಕ್ಕೆ ಅಧಿಕಾರವನ್ನು ತಟ್ಟೆಯಲ್ಲಿಟ್ಟು ಕೊಟ್ಟಿರುವ ಪ್ರಕರಣದಲ್ಲಿ ಬಿಎಸ್‌ಪಿಯೇ ಪ್ರಧಾನ ಆರೋಪಿ.

ಬಿಜೆಪಿ ಯ ಕೋಮುವಾದಿ ಸ್ವರೂಪ ಗೊತ್ತಿದ್ದೂ ಅದರೊಂದಿಗೆ ಅಧಿಕಾರ ಹಂಚಿಕೊಳ್ಳಲು ಬಿಎಸ್‌ಪಿ ಮುಂದಾಗದಿದ್ದರೆ ಬಿಜೆಪಿಗೆ ಈ ಅಧಿಕಾರ ಸಿಗುತ್ತಿತ್ತೇ? ಒಟ್ಟಿನಲ್ಲಿ ಜಾತ್ಯಾತೀತ ಶಕ್ತಿಗಳನ್ನು ದುರ್ಬಲಗೊಳಿಸುವ ಪ್ರಕ್ರಿಯೆಗೆ ಬಿಎಸ್‌ಪಿ ಯೂ ದೊಡ್ಡ ಕರಾಳ ಕೊಡುಗೆ ನೀಡಿದೆ. ಇತಿಹಾಸದಲ್ಲಿ ಒಂದು ಕಳಂಕಿತ ಪಾತ್ರಧಾರಿಯಾಗಿ ದಾಖಲಾಗಿದೆ.

ಗುಜರಾತ್: ವಘೇಲಾ ಸರಕಾರ ಬಿಕ್ಕಟ್ಟಿನಲ್ಲಿ

ಭಾರತೀಯ ಜನತಾ ಪಕ್ಷದಿಂದ ಬಂಡಾಯವೆದ್ದು ಗುಜರಾತಿನಲ್ಲಿ ಆದರ ಸರಕಾರವನ್ನು ಪದಚ್ಯುತಗೊಳಿಸುವಲ್ಲಿ ಕಳೆದ ವರ್ಷ ಯಶಸ್ಸು ಪಡೆದು ಶಂಕರ್ ಸಿಂಗ್ ವಘೇಲಾ ನೇತೃತ್ವದ ಸರಕಾರ ಈಗ ಅಲ್ಪಮತಕ್ಕೆ ಇಳಿದಿದೆ.

ಬಿಜೆಪಿಯಿಂದ ಸಿಡಿದು ಬಂದು ರಾಷ್ಟ್ರೀಯ ಜನತಾ ಪಕ್ಷವನ್ನು ಕಟ್ಟಿದ್ದ ವಘೇಲಾ ಮುಖ್ಯವಾಗಿ ಕಾಂಗ್ರೆಸ್ ಪಕ್ಷದ ಬೆಂಬಲದೊಂದಿಗೆ ಸರಕಾರವನ್ನು ರಚಿಸಿದ್ದರು. 1996 ರಲ್ಲಿ ಅಕ್ಟೋಬರ್ ಮಧ್ಯಭಾಗದಲ್ಲಿ ಈ ವಿದ್ಯಮಾನ ನಡೆದಿತ್ತು.

ಆದಾಗಿ ಸರಿಯಾಗಿ ಒಂದು ವರ್ಷ ತುಂಬಲು ಕೇವಲ ಮೂರು ದಿನಗಳು ಇರುವಾಗ ಕಾಂಗ್ರೆಸ್ ಪಕ್ಷ ವಘೇಲಾ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸು ಪಡೆದಿದೆ.

ಅಕ್ಟೋಬರ್ 28 ರೊಳಗೆ ಬಹುಮತವನ್ನು ಸಾಬೀತು ಪಡಿಸುವಂತೆ ರಾಜ್ಯಪಾಲರು ವಘೇಲಾಗೆ ಸೂಚಿಸಿದ್ದಾರೆ.

ವಘೇಲಾರ ಬದಲಿಗೆ ಬೇರೊಬ್ಬ ನಾಯಕರನ್ನು ಆರಿಸಿದರೆ ಆರ್.ಜೆ.ಡಿ. ಸರಕಾರ ರಚಿಸಲು ಬೆಂಬಲ ನೀಡುವುದನ್ನು ಪರಿಶೀಲಿಸಬಹುದಾಗಿದೆ ಎಂದು ಕಾಂಗ್ರೆಸ್ ಹೇಳಿದೆ.

ಈ ನಡುವೆ, ಬಹುಮತವನ್ನು ಗಳಿಸುವುದಕ್ಕಾಗಿ ತಾವು ಯಾವ ಕಾರಣಕ್ಕೂ ಭಾರತೀಯ ಜನತಾಪಕ್ಷದ ಬೆಂಬಲವನ್ನು ಕೋರುವುದಿಲ್ಲ ಎಂದು ಹೇಳಿರುವುದು ಒಂದು ಗುಣಾತ್ಮಕ ಬೆಳವಣಿಗೆ ಆಗಿದೆ.

ದೇಶಾದ್ಯಂತ ತನ್ನ ನೆಲೆಯನ್ನು ಕಳೆದುಕೊಂಡಿರುವ ಕಾಂಗ್ರೆಸ್ ಪಕ್ಷ ಬಿಜೆಪಿ ಯೇತರ ಸರಕಾರವೊಂದನ್ನು ಉರುಳಿಸಲು ಮುಂದಾಗಿರುವುದರ ಹಿಂದಿನ ತರ್ಕ ಏನೆಂಬುದು ಗೊತ್ತಾಗುವುದಿಲ್ಲ. ಇದೊಂದು ಅವಿವೇಕದ ನಿರ್ಧಾರ ಎನ್ನುವುದರಲ್ಲಿ ಎರಡು ಮಾತುಗಳು ಇರದು,

ಗುಜರಾತಿನಲ್ಲಿ ವಿಧಾನ ಸಭೆ ಚುನಾವಣೆ ಏನಾದರೂ ನಡೆದು ಬಿಜೆಪಿ ಅಧಿಕಾರಕ್ಕೆ ಬಂದರೆ ಕೋಮುವಾದಿ ಪಕ್ಷ ಆಡಳಿತಕ್ಕೆ ಬರಲು ಕಾರಣವಾದ ವಿದ್ಯಮಾನದ ಪಾಪವನ್ನು ಕಾಂಗ್ರೆಸ್ ಪಕ್ಷವೇ ಹೊರಬೇಕಾಗುತ್ತದೆ.

ಭಯೋತ್ಪಾದನೆ ವಿರುದ್ಧ ಬೃಹತ್ ರ್‍ಯಾಲಿ

ಅಸ್ಸಾಮಿನಲ್ಲಿ ಪ್ರತ್ಯೇಕತಾವಾದವನ್ನು ಪ್ರತಿಪಾದಿಸುತ್ತಿರುವ ಭಯೋತ್ಪಾದಕರ ವಿರುದ್ಧ ಅಸ್ಸಾಮ್ ನ ರಾಜಧಾನಿ ಗುವಾಹಟಿಯಲ್ಲಿ ಅಕ್ಟೋಬರ್ 22 ರಂದು ಬೃಹತ್ ರ್‍ಯಾಲಿ ನಡೆಯಿತು. ಅಸ್ಸಾಂ ಗಣ ಪರಿಷತ್ ನೇತೃತ್ವದ ಆಳುವ ಮೈತ್ರಿಕೂಟ ವ್ಯವಸ್ಥೆಗೊಳಿಸಿದ್ದ ರ್‍ಯಾಲಿಯಲ್ಲಿ ಸಾವಿರಾರು ಜನರು ಉತ್ಸಾಹದಿಂದ ಪಾಲ್ಗೊಂಡರು. ಭಯೋತ್ಪಾದನೆಯಾಗಲೀ ಪ್ರತ್ಯೇಕತಾವಾದವಾಗಲೀ ಯಾವುದೇ ಸಮಸ್ಯೆಗೆ ಪರಿಹಾರ ಅಲ್ಲ ಎಂಬುದನ್ನು ಪ್ರತಿಪಾದಿಸುವ ಜನವರ್ಗದ ಭಾವನೆಗಳನ್ನು ಎತ್ತಿಹಿಡಿದ ರ್‍ಯಾಲಿ ಇದಾಗಿತ್ತು.

ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು, ಅಸ್ಸಾಂ ಮುಖ್ಯಮಂತ್ರಿ ಪ್ರಫುಲ್ಲ ಕುಮಾರ ಮಹಂತ ಮತ್ತು ಸಂಯುಕ್ತರಂಗದ ಸಂಚಾಲಕರೂ ಆದ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರ ಬಾಬು ನಾಯ್ಡು ಮೊದಲಾದವರು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಭಾರತೀಯ ವಿಮೋಚನಾ ಸಮರ

ಪುಟ 4 ರಿಂದ

ಬ್ರಿಟೀಷ್ ಅಧಿಕಾರಿಯನ್ನು ಗುಂಡಿಟ್ಟು ಕೊಂದ ಅಪರಾಧಕ್ಕೆ ಆಗಸ್ಟ್ 1909 ರಲ್ಲಿ ನೇಣು ಗಂಬವೇರಿದರು. "ವಿದೇಶಿ ಬಂದೂಕುಗಳ ನೆರವಿನಿಂದ ಅದುಮಿಟ್ಟ ಒಂದು ದೇಶ ತನ್ನ ಶೋಷಕರ ವಿರುದ್ಧ ಸತತ ಹೋರಾಟ ನಡೆಸುತ್ತದೆ. ಈಗ ಭಾರತಕ್ಕೆ ಬೇಕಾಗಿರುವುದು ಒಂದೇ ಪಾಠ- ಅತ್ಯುನ್ನತ ತ್ಯಾಗದ ಪಾಠವದು. ತನ್ನ ಸ್ವಂತ ಜೀವನವನ್ನೇ ತ್ಯಾಗಮಾಡಿ ಈ ಶಿಕ್ಷಣವನ್ನು ಇವರಿಗೆ ನೀಡುವುದು. ಆದ್ದರಿಂದ ಈ ಹುತಾತ್ಮತೆಯ ಕಾರ್ಯದ ಬಗ್ಗೆ ನನಗೆ ಹೆಮ್ಮೆ ಇದೆ" - ಇದು ಆತನ ಅಂತಿಮ ಹೇಳಿಕೆ. ಈ ಕೊಲೆ ನಡೆದ ಮೇಲೆ ವಿನಾಯಕ ಸಾವರ್ಕರ್‌ರನ್ನು ಬಂಧಿಸಲಾಯಿತು. ಸಮುದ್ರಯಾನದ ಮೂಲಕ ಭಾರತಕ್ಕೆ ತರುವಾಗ ಹಡಗಿನಿಂದ ಹಾರಿ ಫ್ರಾನ್ಸಿನ ಬಂದರೊಂದಕ್ಕೆ ಈಜಿ ಹೋದ



ಸಾವರ್ಕರ್‌ರನ್ನು ಫ್ರೆಂಚ್ ಪೋಲೀಸರು ಬ್ರಿಟಿಷರಿಗೆ ಹಿಡಿದುಕೊಟ್ಟರು. ಅಣ್ಣ ದಾಮೋದರ್ ಸಾವರ್ಕರ್‌ರಿಗೆ, ವಿನಾಯಕ ಸಾವರ್ಕರ್‌ರಿಗೆ ಕರಿನೀರಿನ ಶಿಕ್ಷೆ ವಿಧಿಸಲಾಯಿತು. ಅದೇ ವರ್ಷದ ಅಂತ್ಯದಲ್ಲಿ ನಾಸಿಕ್‌ನ ಜಿಲ್ಲಾ ಮ್ಯಾಜಿಸ್ಟ್ರೇಟ್ ಜಾಕ್‌ಸನ್‌ನನ್ನು ಸಾವರ್ಕರ್ ಶಿಷ್ಯ ಅನಂತ ಲಕ್ಷ್ಮಣ ಗುಂಡಿಟ್ಟು ಕೊಂದ. ಆತನನ್ನು ಜೊತೆಗಾರರಾದ ನಾರಾಯಣ ದೇಶಪಾಂಡೆ, ಕೃಷ್ಣಮೂರ್ತಿ ಕಾರ್ವೆಯೊಂದಿಗೆ ಬ್ರಿಟೀಷರು ನೇಣಿಗೇರಿಸಿದರು.

ತಿರುವಾಂಕೂರಿನಲ್ಲಿ ಅದೇ ವರ್ಷ ಜೂನ್ (1909) ವಾಂಚಿ ಅಯ್ಯರ್ ತಿರುನಲ್ವೇಲಿಯ ಕಲೆಕ್ಟರ್ ಆ್ಯಶ್‌ನನ್ನು ಗುಂಡಿಟ್ಟು ಕೊಂದು ಪೋಲೀಸರಿಂದ ತಪ್ಪಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಂಡ. ಇದರ ಪರಿಣಾಮವಾಗಿ ಬ್ರಿಟೀಷರು ಆರಂಭಿಸಿದ ತಿರುನಲ್ವೇಲಿ ಪಿತೂರಿ ಮೊಕದ್ದಮೆಯಲ್ಲಿ ಪ್ರಮುಖ ಆಪಾದಿತ ನೀಲಕಂಠ ಅಯ್ಯರಿಗೆ ಏಳು ವರ್ಷಗಳು ಕಠಿಣ ಸಜೆಯಾಯಿತು. ಆ್ಯಶ್ ಹಾಗೂ ಜಾಕ್‌ಸನ್‌ನನ್ನು ಕೊಂದ ಪಿಸ್ತೂಲುಗಳನ್ನು



ಪ್ಯಾರಿಸ್ಸಿನಿಂದ ಕಳುಹಿಸಲಾಗಿತ್ತೆಂದು ನಂತರ ತಿಳಿದು ಬಂತು. ಇದನ್ನು ಕಳುಹಿಸಿದವರು ಮೇಡಮ್ ಕಾಮ ಎಂದು ಗೊತ್ತಾಯಿತು. ಮೇಡಮ್ ಭಿಕಾಜಿ ರುಸ್ತುಂ ಕಾಮಾ (1861-1931) ಎಂಬುದು ಈ ಪಾರ್ಸಿ ಮಹಿಳೆಯ ಪೂರ್ಣ ಹೆಸರು. ಆಕೆ ಲಂಡನ್ ಹಾಗೂ ಪ್ಯಾರಿಸ್‌ನಿಂದ ಚಟುವಟಿಕೆ ನಡೆಸುತ್ತಿದ್ದ ಪ್ರಖ್ಯಾತ ಕ್ರಾಂತಿಕಾರಿ ಮಹಿಳೆ. ಆಕೆ ಮತ್ತು ಸರ್ದಾರ್ ಸಿಂಗ್ ರಾವೋಜಿ ಕೂಡ ಭಾರತದಲ್ಲಿ ಚಟುವಟಿಕೆ ನಡೆಸುತ್ತಿದ್ದ ಕ್ರಾಂತಿಕಾರಿಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದರು. ಫ್ರೆಂಚ್ ಸೋಷಲಿಸ್ಟ್ ಪಕ್ಷ ಸೇರಿದ ಆಕೆ 1907 ರಲ್ಲಿ ಸ್ಟೆಟ್ ಗಾರ್ಡ್‌ನಲ್ಲಿ ಹಾಗೂ ಅಂತರ್ರಾಷ್ಟ್ರೀಯ ಸೋಷಲಿಸ್ಟ್ ಸಮ್ಮೇಳನದಲ್ಲಿ ಭಾಗವಹಿಸಿ ಭಾರತೀಯ ಸ್ವಾತಂತ್ರ್ಯದ ಸಂಕೇತವಾಗಿ ತ್ರಿವರ್ಣ ರಾಷ್ಟ್ರೀಯ ಧ್ವಜವನ್ನು ಹಾರಿಸಿದರು. ಆ ಸಮ್ಮೇಳನದಲ್ಲಿ ಲೆನಿನ್‌ರ ಭಾಷಣ ಕೇಳಿ ಆಕರ್ಷಿತರಾಗಿ 1917ರಲ್ಲಿ ಅಕ್ಟೋಬರ್ ಕ್ರಾಂತಿಯ ನಂತರ ಆಕೆ ಮಾರ್ಕ್ಸ್‌ವಾದಿ ವಿಚಾರಧಾರೆಯಿಂದ ಪ್ರಭಾವಿತರಾದರು.



(ಮುಂದುವರಿಯುವುದು)

ಸಿಪಿಐ(ಎಂ) ಸರಿಪಡಿಕೆ ಆಂದೋಲನ

ಉನ್ನತ ಮಟ್ಟವನ್ನು ಕಾಯ್ದುಕೊಳ್ಳಲು ಮತ್ತೊಂದು ಕ್ರಮ

ಎಲ್ಲೆಡೆಯೂ ಹೊಲಸು ಭ್ರಷ್ಟ ನಡವಳಿಕೆಗಳೇ ರಾರಾಜಿಸುತ್ತಿರುವಾಗ ಅದರ ನಡುವೆಯೂ ಉನ್ನತ ನೈತಿಕ ಮಟ್ಟವನ್ನು ಕಾಯ್ದುಕೊಂಡಿರುವ ಸಿಪಿಐ(ಎಂ) ತನ್ನ ಈ ನೈತಿಕ ಔನ್ನತ್ಯವನ್ನು ಬಲಗೊಳಿಸಲು ತನ್ನೊಳಗೇ ಒಂದು ಸರಿಪಡಿಕೆ ಆಂದೋಲನವನ್ನು ಈ ವರ್ಷದ ಆರಂಭದಲ್ಲಿ ಆರಂಭಿಸಿತ್ತು. ಪಕ್ಷದ ಕೇಂದ್ರ ಸಮಿತಿ ಸಿದ್ಧಪಡಿಸಿದ ಮಾರ್ಗದರ್ಶಕ ಸೂತ್ರಗಳ ಆಧಾರದಲ್ಲಿ ಆರು ತಿಂಗಳ ಕಾಲ ಈ ಆಂದೋಲನ ನಡೆದಿದೆ. ಪಕ್ಷದೊಳಗೂ ನುಸುಳುತ್ತಿರುವ ತಪ್ಪು ಪ್ರವೃತ್ತಿಗಳನ್ನು ಹಾಗೂ ನ್ಯೂನತೆಗಳನ್ನು ಗುರುತಿಸಿ ಅವನ್ನು ನಿರ್ಮೂಲನೆ ಮಾಡುವುದು ಇದರ ಉದ್ದೇಶ. ಈ ಆಂದೋಲನದ ಕಾಲದಲ್ಲಿ ಗುರುತಿಸಿದ ಕೆಲವು ಪ್ರವೃತ್ತಿಗಳೆಂದರೆ ಸಂಸದೀಯವಾದ, ಅಂದರೆ ಪಕ್ಷವನ್ನು, ಜನಾಂದೋಲವನ್ನು ಉಪೇಕ್ಷಿಸಿ ಸಂಸದೀಯ ಚಟುವಟಿಕೆಗಳಿಗೇ ಹೆಚ್ಚಿನ ಆದ್ಯತೆ ನೀಡುವುದು ಹಾಗೂ ಕ್ರಾಂತಿಕಾರಕ ನಿಲುವನ್ನು ಬಿಟ್ಟು ಕೇವಲ ಸುಧಾರಣಾವಾದೀ ಹಿತಾಸಕ್ತಿಗಳಿಂದಾಗಿ ಗುಂಪುಗಾರಿಕೆ, ಕಮ್ಯುನಿಸ್ಟರಿಗೆ ಪರಕೀಯವಾದ ಸಾಮಾಜಿಕ ಕಣ್ಣೋಟ ಹಾಗೂ ಜೀವನ ಶೈಲಿ, ಅಧಿಕಾರಶಾಹೀ, ಸ್ವಯಂ ಉನ್ನತಿಗೇ ಆದ್ಯತೆ ಹಾಗೂ ಭ್ರಷ್ಟ ನಡವಳಿಕೆಗಳು.

ಪಕ್ಷದ ವಿಭಿನ್ನ ರಾಜ್ಯ ಸಮಿತಿಗಳಲ್ಲಿ ಈ ಬಗ್ಗೆ ನಡೆದ ಚರ್ಚೆಗಳು ಹಾಗೂ ಇವನ್ನು ಜಾರಿಗೆ ತರುವಲ್ಲಿನ ಅನುಭವಗಳ ಆಧಾರದ ಮೇಲೆ ಮೇ 1997 ರಲ್ಲಿ ಸಭೆ ಸೇರಿದ ಸಿಪಿಐ(ಎಂ) ಕೇಂದ್ರ ಸಮಿತಿ ಸರಿಪಡಿಕೆ ಆಂದೋಲನದ ಗುರಿಸಾಧನೆಗಾಗಿ ಕೆಲವು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿತು. ಇವುಗಳಲ್ಲಿ ಒಂದು ಕ್ರಮವೆಂದರೆ ಪಕ್ಷದ ಎಲ್ಲಾ ಪ್ರಮುಖ ಕಾರ್ಯಕರ್ತರು ತಮ್ಮ ಆದಾಯ ಮತ್ತು ಆಸ್ತಿಗಳ ವಾರ್ಷಿಕ ಹೇಳಿಕೆಗಳನ್ನು ಪಕ್ಷಕ್ಕೆ ಸಲ್ಲಿಸಬೇಕು ಎಂಬುದು. ಎಲ್ಲಾ ಕೇಂದ್ರ ಸಮಿತಿ ಸದಸ್ಯರು, ಎಲ್ಲಾ ರಾಜ್ಯ ಸಮಿತಿಗಳ ಹಾಗೂ ಜಿಲ್ಲಾ ಸಮಿತಿಗಳ ಸದಸ್ಯರಿಗೆ ಇದು ಅನ್ವಯವಾಗುತ್ತದೆ. ಅದೇ ರೀತಿ ಸಾಮೂಹಿಕ ಸಂಘಟನೆಗಳ ಜಿಲ್ಲಾ, ರಾಜ್ಯ ಹಾಗೂ ಅಖಿಲ ಭಾರತ ಕೇಂದ್ರಗಳಿಂದ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸುವ ಪಕ್ಷದ ಸದಸ್ಯರು ಕೂಡಾ ಈ ರೀತಿಯ ಹೇಳಿಕೆಗಳನ್ನು ಸಂಬಂಧ ಪಟ್ಟ ಸಮಿತಿಗಳಿಗೆ ಸಲ್ಲಿಸಬೇಕು ಎಂದು ನಿರ್ಧರಿಸಲಾಗಿದೆ.

ಪ್ರತಿವರ್ಷ ಜನವರಿಯಿಂದ ಮಾರ್ಚ್ ನಡುವೆ ನಡೆಯುವ ಪಕ್ಷದ ಸದಸ್ಯತ್ವ ನವೀಕರಣದ ವೇಳೆಗೆ ಈ ಎಲ್ಲಾ ಚುನಾಯಿತ ಸಮಿತಿಗಳ ಸದಸ್ಯರು ಈ ವಾರ್ಷಿಕ ಹೇಳಿಕೆಯನ್ನು ಸಲ್ಲಿಸ ಬೇಕಾಗುತ್ತದೆ. ಪಕ್ಷದ ಪೊಲಿಟ್‌ಬ್ಯೂರೋ ಈ ಬಗ್ಗೆ ಒಂದು ಸುತ್ತೋಲೆಯನ್ನು ಹೊರಡಿಸಿ ಈ ಹೇಳಿಕೆಯಲ್ಲಿರಬೇಕಾದ ವಿವರಗಳ ಬಗ್ಗೆ ತಿಳಿಸಿದೆ. (ಪ್ರಪತ್ರವನ್ನು ಈ ಕೆಳಗೆ ಕೊಡಲಾಗಿದೆ) ಇವರಲ್ಲಿ ಸದಸ್ಯರ ವೈಯಕ್ತಿಕ ಆದಾಯ, ಆಸ್ತಿ, ಅವರ ಪತ್ನಿ/ಪತಿಯ ಆದಾಯ- ಆಸ್ತಿ ಹಾಗೂ ಸಂಯುಕ್ತ ಕುಟುಂಬದ ಆಸ್ತಿಯಲ್ಲಿನ ಪಾಲಿದ್ದರೆ ಅದರ ವಿವರಗಳನ್ನೂ ಕೊಡಬೇಕೆಂದು ನಮೂದಿಸಲಾಗಿದೆ. 1998 ರಲ್ಲಿ ನಡೆಯುವ ನವೀಕರಣದಿಂದ ಇಂತಹ ಹೇಳಿಕೆಗಳನ್ನು ಸಲ್ಲಿಸಬೇಕು ಎಂದು ಪೊಲಿಟ್ ಬ್ಯೂರೋ ನಿರ್ಧರಿಸಿದೆ.

ಇದನ್ನೊಂದು ನಿಗದಿತ ಕ್ರಮವಾಗಿ ಮಾಡುವುದರಿಂದ ಪಕ್ಷಕ್ಕೆ ಈ ಕೆಳಗಿನ ಪ್ರಯೋಜನಗಳಾಗುತ್ತವೆ-

1. ಈ ವಾರ್ಷಿಕ ಹೇಳಿಕೆಗಳಿಂದ ಪಕ್ಷದ ಸಮಿತಿಗಳು ತಮ್ಮ ಸದಸ್ಯರ ಆದಾಯ/ಆಸ್ತಿಗಳ ಹಾಗೂ ಸಂಬಂಧಪಟ್ಟ ಸಂಗಾತಿಯ ಜೀವನ ಮಟ್ಟದ ಮೇಲೆ ನಿಗಾ ಇಡಲು ಸಾಧ್ಯವಾಗುತ್ತದೆ.

2. ಇದು ಪ್ರಮುಖ ಕಾರ್ಯಕರ್ತರು ತಮ್ಮ ಆದಾಯ ಹಾಗೂ ಆಸ್ತಿಗಳ ಬಗ್ಗೆ ಪಕ್ಷಕ್ಕೆ ಜವಾಬುದಾರರಾಗಬೇಕಾದಂತಹ ಒಂದು ಹೊಣೆಗಾರಿಕೆಯ ಭಾವನೆಯನ್ನು ಉಂಟುಮಾಡುತ್ತದೆ.

3. ಎಲ್ಲಾ ಹಂತಗಳಲ್ಲಿ ಪಕ್ಷದ ಮುಖಂಡತ್ವ ತನ್ನ ಮಟ್ಟವನ್ನು, ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಗಂಭೀರ ಹಾಗೂ ಪ್ರಾಮಾಣಿಕ ಕ್ರಮ ಕೈಗೊಳ್ಳುತ್ತದೆ ಎಂಬ ವಿಶ್ವಾಸ ಪಕ್ಷದ ಬಗ್ಗೆ ಜನಗಳಲ್ಲಿ ಉಂಟಾಗುತ್ತದೆ.

ಈ ನಿರ್ಣಯ ಎಲ್ಲಾ ಘಟ್ಟಗಳಲ್ಲಿ ಸರಿಯಾದ ರೀತಿಯಲ್ಲಿ ಜಾರಿಗೆ ಬರುವಂತೆ ಮಾಡಬೇಕು ಎಂದು ಪೊಲಿಟ್‌ಬ್ಯೂರೋ ಎಲ್ಲಾ ರಾಜ್ಯ ಸಮಿತಿಗಳನ್ನು ವಿನಂತಿಸಿದೆ. ನವೀಕರಣದ ವೇಳೆಗೆ ಈ ವಾರ್ಷಿಕ ಹೇಳಿಕೆಗಳನ್ನು ಸಲ್ಲಿಸುವ ವ್ಯವಸ್ಥೆ ಮಾಡಬೇಕು. ಮಾರ್ಚ್ 31, 1998 ರ ಒಳಗೆ ಎಲ್ಲಾ ಕೇಂದ್ರ ಸಮಿತಿ, ರಾಜ್ಯ ಸಮಿತಿ, ಜಿಲ್ಲಾ ಸಮಿತಿ ಸದಸ್ಯರು ಈ ಹೇಳಿಕೆಗಳನ್ನು ಸಲ್ಲಿಸಬೇಕು ಎಂದು ಪೊಲಿಟ್‌ಬ್ಯೂರೋ ಹೇಳಿದೆ.

ಆದಾಯ ಮತ್ತು ಆಸ್ತಿಗಳ ಹೇಳಿಕೆ ಪ್ರಪತ್ರ

ಹೆಸರು: ....
ಪಕ್ಷದಲ್ಲಿ ಸ್ಥಾನ: ....
ಸಾಮೂಹಿಕ ಸಂಘಟನೆಯಲ್ಲಿ ಸ್ಥಾನ: ....
ಎಂದಿನಿಂದ ಪಕ್ಷದ ಸದಸ್ಯರು: ....

1. ನೀವು ಪೂರ್ಣಕಾಲದ ಕಾರ್ಯಕರ್ತರೇ?: ಹೌದು/ಇಲ್ಲ
2. i ನಿಮ್ಮ ಮಾಸಿಕ ಆದಾಯವೇನು? ....
ii ಮಾಸಿಕ ಆದಾಯವಿಲ್ಲದಿದ್ದರೆ ವಾರ್ಷಿಕ ಆದಾಯ: ....
3. ನಿಮ್ಮ ಪತ್ನಿ/ಪತಿಗೆ ಆದಾಯವಿದೆಯೇ? : ....
ಇದ್ದರೆ ಅವರ ಮಾಸಿಕ ಅಥವಾ ವಾರ್ಷಿಕ ಆದಾಯ: ....
4. ನಿಮ್ಮ ಆದಾಯದ ಮೂಲಗಳೇನು?
i ಸಂಬಳ/ಕೂಲಿ/ಭತ್ಯೆಗಳು: ....
ii ಕೃಷಿಆದಾಯ: ....
iii ಆಸ್ತಿ, ಬಡ್ಡಿ, ಡಿವಿಡೆಂಡ್ ಇತ್ಯಾದಿಗಳಿಂದ ಆದಾಯ: ....
iv ಮಕ್ಕಳು/ ಸಂಬಂಧಿಕರಿಂದ ನೆರವು: ....
v ಉಡುಗೊರೆ ಅಥವಾ ಕೊಡುಗೆ, ಡೊನೇಷನ್‌ಗಳು: ....
(ಪ್ರತಿಯೊಂದರ ವಿವರಗಳನ್ನು ಕೊಡಿ)
5. ನಿಮ್ಮ ಆಸ್ತಿಗಳೇನು?
i ಮನೆ ....
ii ಜಮೀನು ....
iii ಬೇರಾವುದೆ ಸ್ಥಿರಾಸ್ತಿ: ....
iv ಸ್ಟಾಕುಗಳು-ಶೇರುಗಳು: ....
v ಬ್ಯಾಂಕ್ ಬ್ಯಾಲೆನ್ಸ್ : ....
vi ಆಭರಣಗಳು: ....
(ಇವುಗಳಲ್ಲಿ ಪ್ರತಿಯೊಂದರ ವಿವರ ಕೊಡಿ)
a ನಿಮ್ಮ ಪತ್ನಿ/ಪತಿಗೆ ಆದಾಯವಿದ್ದರೆ : ....
(ಮೇಲಿನ ಪ್ರತಿಯೊಂದು ವಿಧಗಳಂತೆ ವಿವರ ಕೊಡಿ)
6. ಸಂಯುಕ್ತ ಕುಟುಂಬದ ಆಸ್ತಿಯಲ್ಲಿ ನಿಮಗೇನಾದರೂ ಪಾಲಿದೆಯೇ? ಇದ್ದರೆ ವಿವರ ಕೊಡಿ. ....

ಲೋಕಸಂಚಾರ

ಯುರೋಪಿನಲ್ಲಿ ನವ ಉದಾರವಾದಿ ನೀತಿಗಳಿಂದ ಮತ್ತೊಂದು ಸರ್ಕಾರದ ಪತನ

ಇಟಲಿಯ ಕಮ್ಯುನಿಸ್ಟ್ ಮರು ಸ್ಥಾಪನಾ ಪಕ್ಷ(ಸಿ.ಆರ್.ಪಿ) ಅಲ್ಲಿಯ ಮಧ್ಯ-ಎಡಪಂಥೀಯ ಸಮಿಶ್ರ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡದ್ದರಿಂದ ಸರಕಾರ ಪತನಗೊಂಡಿತು. ಮಿಲಿಯಗಟ್ಟಲೆ ಇಟಾಲಿಯನ್ ಜನಸಾಮಾನ್ಯರ ಜೀವನವನ್ನು ಬಾಧಿಸಲಿರುವ ಅಪಾರ ಬಜೆಟ್ ಕಡಿತಗಳನ್ನು ಮಾಡುವುದಾಗಿ ರೊಮೊನೋ ಪ್ರೋದಿ ಸರಕಾರ ಹಠ ತೊಟ್ಟಿದ್ದರಿಂದ ಸಿ.ಆರ್.ಪಿ. ಈಕ್ರಮ ಕೈಗೊಳ್ಳಲು ಮುಂದಾಯಿತು ಎಂದು ತಿಳಿದು ಬಂದಿದೆ. ಸಂಸತ್ತಿನಲ್ಲಿ 35 ಸದಸ್ಯರಿರುವ ಸಿ.ಆರ್.ಪಿ. ಏಪ್ರಿಲ್ 1996 ರ ಚುನಾವಣೆಗಳ ನಂತರ ಪ್ರೋದಿ ಸರಕಾರಕ್ಕೆ ಹೊರಗಿನಿಂದ ಬೆಂಬಲ ನೀಡಿತ್ತು. 1998 ರ ಬಜೆಟ್‌ನ ಜನವಿರೋಧಿ ಅಂಶಗಳ ವಿರುದ್ಧ ಎಚ್ಚರಿಕೆ ನೀಡಿದ್ದರೂ ಸರಕಾರ ಅದನ್ನು ನಿರ್ಲಕ್ಷಿಸಿರುವುದರಿಂದ ಅಕ್ಟೋಬರ್ 7 ರಂದು ಹಣಕಾಸು ಶಾಸನ ಸಂಸತ್ತಿನ ಎದುರು ಬಂದಾಗ ಅದನ್ನು ಬೆಂಬಲಿಸಲು ಸಿ.ಆರ್.ಪಿ. ನಿರಾಕರಿಸಿದುದರಿಂದ ಪ್ರೋದಿ ಸರಕಾರದ ಪತನವಾಯಿತು.

ಕಳೆದ ವರ್ಷ ಆಲಿವ್ ಟ್ರೀ ಕೋಅಲಿಶನ್(ಆಲಿವ್ ಮರ ಕೂಟ) ಎಂಬ ಮಧ್ಯಪಂಥೀಯ ಹಾಗೂ ಎಡಪಂಥೀಯ ಪಕ್ಷಗಳ ಸಮಿಶ್ರ ಕೂಟದ ವಿಜಯದಿಂದಾಗಿ ಪ್ರೋದಿ ಸರಕಾರ ಅಧಿಕಾರಕ್ಕೆ ಬಂದಿತ್ತು. ಇದರಲ್ಲಿ ಪ್ರಜಾಸತ್ತಾತ್ಮಕ ಸಮಾಜವಾದಿ ಪಕ್ಷ (ಪಿ.ಡಿ.ಎಸ್) ಕೂಡಾ ಇದೆ. ಹಿಂದಿನ ಬಲಿಷ್ಠ ಇಟಾಲಿಯನ್ ಕಮ್ಯುನಿಸ್ಟ್ ಪಕ್ಷದ ಮಾರ್ಕ್ಸ್‌ವಾದಿ ದಾರಿಯನ್ನು ಕೈಬಿಟ್ಟ ಹಿಂದಿನ ಕಮ್ಯುನಿಸ್ಟರು ರಚಿಸಿಕೊಂಡ ಪಕ್ಷ ಇದು. ಸೋವಿಯತ್ ಒಕ್ಕೂಟ ಹಾಗೂ ಇತರ ಪೂರ್ವ ಯುರೋಪಿನ ದೇಶಗಳ ಪತನದ ನಂತರ ಈ ಪಕ್ಷ ಹುಟ್ಟಿಕೊಂಡಿತು. ಆದರೆ ಬಹಳಷ್ಟು ಕಮ್ಯುನಿಸ್ಟರು ಮಾರ್ಕ್ಸ್‌ವಾದಿ-ಲೆನಿನ್‌ವಾದಕ್ಕೆ ಬದ್ಧರಾಗಿಯೇ ಮುಂದುವರಿದ ಮೇಲೆ ಹೇಳಿದ ಸಿ.ಆರ್.ಪಿ. ಪಕ್ಷವನ್ನು ಸ್ಥಾಪಿಸಿದರು. ಪ್ರೋದಿ ಸರಕಾರ ಹಿಂದಿನ ಸರಕಾರದ ಜನ- ವಿರೋಧಿ ನವ ಉದಾರವಾದಿ ಧೋರಣೆ ಗಳನ್ನು ಬದಲಿಸುತ್ತದೆ ಎಂಬ ನಿರೀಕ್ಷೆಯ ಮೇಲೆ ಅಲ್ಪಮತದ ಪ್ರೋದಿ ಸರಕಾರಕ್ಕೆ ಸಿ.ಆರ್.ಪಿ. ಹೊರಗಿನಿಂದ ಬೆಂಬಲ ನೀಡಿತು.

ಆದರೆ ಪ್ರೋದಿ ಸರಕಾರ ಯುರೋಪಿಯನ್ ಹಣಕಾಸು ಸಂಘ(ಇ.ಎಂ.ಯು) ವಿಧಿಸಿದ ಮಾನದಂಡಗಳನ್ನು ಪರಿಪಾಲಿಸಲು ಆತುರವಾಗಿತ್ತು. ಬಜೆಟ್ ಕೊರತೆಯನ್ನು 3% ಕ್ಕೆ ಇಳಿಸಬೇಕು ಎಂಬುದು ಅದರ ಮಾನದಂಡಗಳಲ್ಲೊಂದು. ಇದನ್ನು ಸಿ.ಆರ್.ಪಿ. ವಿರೋಧಿಸಿತು. ಏಕೆಂದರೆ ಇದರಿಂದ ಕಲ್ಯಾಣ ಕಾರ್ಯಕ್ರಮಗಳ ಮೇಲೆ ಭಾರೀ ಹೊಡೆತ ಬರುತ್ತದೆ. ಕಮ್ಯುನಿಸ್ಟ್ ಮುಖಂಡ ಬರ್ತಿನೋತ್ತಿ ಪ್ರಧಾನಮಂತ್ರಿಗಳೊಂದಿಗೆ ಈ ಬಗ್ಗೆ ಮಾತುಕತೆಗಳನ್ನೂ ನಡೆಸಿದರು.

ಈ ಬೇಡಿಕೆಯಲ್ಲದೆ ಕಮ್ಯುನಿಸ್ಟರು ಇನ್ನೂ ಕೆಲವು ಕಾರ್ಮಿಕ ವರ್ಗದ ಬೇಡಿಕೆಗಳನ್ನು ಮುಂದಿಟ್ಟಿದ್ದರು. ಕೆಲಸದ ಅವಧಿಯನ್ನು ವಾರಕ್ಕೆ 35 ಗಂಟೆಗೆ ಇಳಿಸುವುದು ಹಾಗೂ ಸಾರ್ವಜನಿಕ ವಲಯದಲ್ಲಿ ಲಕ್ಷಾಂತರ ಉದ್ಯೋಗಾವಕಾಶಗಳ ನಿರ್ಮಾಣ ಇತ್ಯಾದಿ. ಆದರೆ ಸರ್ಕಾರದ ತನ್ನ 'ಹಣಕಾಸು ಶಾಸನ' ದಲ್ಲಿ ಇವು ಯಾವ ಬೇಡಿಕೆಗಳನ್ನು ಸೇರಿಸಲಿಲ್ಲ.

ಸಿ.ಆರ್.ಪಿ.ಯ ಸಂಸದೀಯ ಗುಂಪು ಇದನ್ನು ವಿರೋಧಿಸುತ್ತಾ 'ಇಟಲಿಯ ದಕ್ಷಿಣದಲ್ಲಿ ನಿರುದ್ಯೋಗ ನಿವಾರಿಸಲು ಯಾವುದೇ ಕ್ರಮಗಳಿಲ್ಲ, ಕಲ್ಯಾಣ ಪ್ರಭುತ್ವವನ್ನು ಸುಧಾರಿಸುವ ಪ್ರಸ್ತಾಪಗಳಿಲ್ಲ. ಸೇವೆಗಳನ್ನು ಸುಧಾರಿಸಿ ಜನಗಳ ಹಕ್ಕುಗಳನ್ನು ರಕ್ಷಿಸುವ ಪ್ರಸ್ತಾಪಗಳಿಲ್ಲ, ಬದಲಿಗೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಮೇಲೆ ಸಾಮಾಜಿಕ ಕಲ್ಯಾಣದ ಮೇಲೆ ಧಾಳಿ ಮಾಡಲಾಗಿದೆ. ತ್ಯಾಗದ ತರ್ಕದಲ್ಲೇ ಇವೆಲ್ಲಾ ಅಡಕವಾಗಿವೆ" ಎಂದು ಹೇಳಿದೆ.

ಪ್ರೋದಿ ಸರಕಾರ ಬಂದಾಗ ಆರ್ಥಿಕ ನೀತಿಗಳಲ್ಲಿ ಬದಲಾವಣೆ ಬರಬಹುದೆಂಬ ನಿರೀಕ್ಷೆ ಸುಳ್ಳಾಗಿದೆ. 'ಯುರೋಪಿನಲ್ಲಿ ವಿಶೇಷವಾಗಿ ಫ್ರಾನ್ಸಿನ ಇತ್ತೀಚಿನ ಎಡಪಂಥೀಯ ವಿಜಯದ ನಂತರ ಈ ಬದಲಾವಣೆಗೆ ಸ್ಫೂರ್ತಿ ದೊರೆಯುವುದೆಂದು ನಿರೀಕ್ಷೆಯಿದ್ದರೂ ಏನೂ ಆಗಿಲ್ಲ"

ಈ ಕಾರಣದಿಂದ ತಮ್ಮ ಪಕ್ಷ ಪ್ರೋದಿ ಸರಕಾರದ ಈ ಹಣಕಾಸು ಶಾಸನವನ್ನು ವಿರೋಧಿಸುವುದಾಗಿ ಆ ಪಕ್ಷದ ಅಂತರ್ರಾಷ್ಟ್ರೀಯ ವಿಭಾಗ ಸಿಪಿಐ(ಎಂ) ಗೆ ಕಳಿಸಿದ ಒಂದು ಪತ್ರದಲ್ಲಿ ಹೇಳಿದೆ.

ಯುರೋಪಿಯನ್ ಹಣಕಾಸು ಸಂಘ(EMU) ದ ನವ ಉದಾರವಾದೀ ಧೋರಣೆಗಳಿಂದಾಗಿ ಪತನಗೊಂಡಿರುವ ಎರಡನೇ ಯುರೋಪಿಯನ್ ಸರಕಾರ ಇದು. ಈ ವರ್ಷದ ಮೇ ತಿಂಗಳಲ್ಲಿ ಫ್ರಾನ್ಸಿನ ಅಲೆನ್‌ಯುಪ್ಪೆ ಸರಕಾರ ಇದರಿಂದಾಗಿ ಪತನಗೊಂಡಿತ್ತು. ಈ ಜನ-ವಿರೋಧಿ ನೀತಿಗಳ ವಿರುದ್ಧ ಯುರೋಪಿನಲ್ಲಿ ಬಲಗೊಳ್ಳುತ್ತಿರುವ ಪ್ರತಿರೋಧದ ಪ್ರತಿಫಲನ ಇದು ಎಂದು ಹೇಳಲಾಗಿದೆ

(ಐಎನ್‌ಎನ್)

ಸಿಪಿಐ(ಎಂ) ಅಭಿನಂದನೆಗಳು

ಆಸ್ಟ್ರಿಯಾ ಕಮ್ಯುನಿಸ್ಟ್ ಪಕ್ಷದ 30ನೇ ಮಹಾಧಿವೇಶನ

ಆಸ್ಟ್ರಿಯಾ ಕಮ್ಯುನಿಸ್ಟ್ ಪಕ್ಷದ 30ನೇ ಮಹಾಧಿವೇಶನದ ಸಂದರ್ಭದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಅಭಿನಂದನೆಗಳನ್ನು ವ್ಯಕ್ತಪಡಿಸುತ್ತಾ ಹೀಗೆಂದಿದೆ - "ಒಂದೆಡೆ ಅಮೆರಿಕಾ ತನ್ನ ಏಕಧ್ರುವೀಯ ಕಣ್ಣೋಟವನ್ನು ಹೇರಲು ಪ್ರಯತ್ನಿಸುತ್ತಿದ್ದರೆ, ಇನ್ನೊಂದೆಡೆ ವಿಶ್ವದ ಬೆಳವಣಿಗೆಗಳು ಇದಕ್ಕೆ ಪ್ರತಿಯಾಗಿ ಬಹುಧ್ರುವೀಯ ಸನ್ನಿವೇಶ ಮೂಡಿಬರುವ ಸಾಧ್ಯತೆಗಳನ್ನು ತೋರುತ್ತಿವೆ. ಇಂತಹ ಕ್ಲಿಷ್ಟ ಸನ್ನಿವೇಶದಲ್ಲಿ ಯುರೋಪಿನಲ್ಲಿನ ಪ್ರತಿಧಾಳಿ ವಿಶ್ವದ ಬೆಳವಣಿಗೆಗಳ ಮೇಲೆ ಮಹತ್ವಪೂರ್ಣ ಪ್ರಭಾವ ಬೀರಬಲ್ಲವು. ನಿಮ್ಮ ಮಹಾಧಿವೇಶನದ ಅಜೆಂಡಾದಲ್ಲಿ ಮ್ಯಾಸ್‌ಟ್ರಿಕ್ಟ್ ಸಂಧಿಯ ವಿರುದ್ಧ, ಸಮಾನ ನಾಣ್ಯದ ವಿರುದ್ಧ, ನಾಟೋವನ್ನು ಪೂರ್ವದ ಕಡೆಗೆ ವಿಸ್ತರಿಸುವುದರ ವಿರುದ್ಧ ಯುರೋಪಿನ ಇತರ ಎಡಪಂಥೀಯ ಹಾಗೂ ಪ್ರಗತಿಪರ ಶಕ್ತಿಗಳೊಂದಿಗೆ ಸಂಯುಕ್ತ ಕಾರ್ಯಾಚರಣೆಯ ಸಾಧ್ಯತೆಗಳನ್ನು ಚರ್ಚಿಸುವ ವಿಷಯ, ಆಸ್ಟ್ರಿಯಾದ ಅಲಿಪ್ತತೆಯ ರಕ್ಷಣೆಯ ವಿಷಯ ಇದೆ ಎಂಬುದು ಸಂತೋಷದ ಸಂಗತಿ"

ಬೆಲೋರಷ್ಯಾ ಕಮ್ಯುನಿಸ್ಟ್ ಪಕ್ಷದ 34ನೇ ಮಹಾಧಿವೇಶನ

ಕ್ಲಿಷ್ಟ ಜಾಗತಿಕ ಸನ್ನಿವೇಶದಲ್ಲಿ ಬೆಲೋ ರಷ್ಯಾದ ಕಮ್ಯುನಿಸ್ಟ್ ಪಕ್ಷವನ್ನು ಮತ್ತೆ ಸ್ಥಾಪಿಸಿ ಮತ್ತೆ ದೇಶದಲ್ಲಿ ಪ್ರಮುಖ ಸ್ಥಾನಗಳಿಸುವ ಪ್ರಯತ್ನ ಒಂದು ಗಮನಾರ್ಹ ಬೆಳವಣಿಗೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿಯ ಶುಭಾಶಯ ಸಂದೇಶ ಹೀಗೆ ಹೇಳಿದೆ -

"ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದದ ಕುಸಿತ ಹಾಗೂ ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ಹಿಂದಿನ ಸೋವಿಯತ್ ಗಣತಂತ್ರಗಳಲ್ಲಿನ ಬೆಳವಣಿಗೆಗಳನ್ನು ಸಿಪಿಐ(ಎಂ) ಆತಂಕದಿಂದ ಗಮನಿಸುತ್ತಿದೆ. ಕಳೆದ ವರ್ಷ 33ನೇ ಮಹಾಧಿವೇಶನದ ನಂತರ ಬೆಲೊರಷ್ಯಾ ಕಮ್ಯುನಿಸ್ಟ್ ಪಕ್ಷ ದೇಶಾದ್ಯಂತ ಪ್ರಾಂತೀಯ, ಪ್ರಾದೇಶಿಕ ಹಾಗೂ ನಗರ ಪಕ್ಷದ ಸಂಘಟನೆಗಳನ್ನು ಮರು ಸ್ಥಾಪಿಸಿರುವುದು ಸಂತೋಷದ ಸಂಗತಿ. 34ನೇ ಮಹಾಧಿವೇಶನದಲ್ಲಿ ಪಕ್ಷದ ಹೊಸ ಕಾರ್ಯಕ್ರಮ ಹಾಗೂ ಸಂವಿಧಾನದ ಅಂಗೀಕಾರ ಕಮ್ಯುನಿಸ್ಟ್ ಪಕ್ಷ ಹಾಗೂ ಬೆಲೋರಷ್ಯಾದ ದುಡಿಯುವ ಜನಗಳ ನಡುವಿನ ಸಂಪರ್ಕಗಳನ್ನು ಇನ್ನಷ್ಟು ಬೆಸೆಯುತ್ತದೆ ಎಂದು ವಿಶ್ವಾಸ ನಮಗಿದೆ"

ಬ್ರೆಝಿಲ್ ಕಮ್ಯುನಿಸ್ಟ್ ಪಕ್ಷದ 9ನೇ ಮಹಾಧಿವೇಶನ

ಬ್ರೆಝಿಲ್‌ನಲ್ಲಿ ಪ್ರಜಾಪ್ರಭುತ್ವ ಮರುಸ್ಥಾಪನೆಯ ಹೋರಾಟದಲ್ಲಿ ಹಾಗೂ ಶೋಷಣಾ ಮುಕ್ತ ಸಮಾಜಕ್ಕಾಗಿ ಜನತಾ ಆಂದೋಲನವನ್ನು ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಬ್ರೆಝಿಲ್ ಕಮ್ಯುನಿಸ್ಟ್ ಪಕ್ಷದ 9ನೇ ಮಹಾಧಿವೇಶನ ಈಗಿನ ನವ ಉದಾರವಾದಿ ಧಾಳಿಯನ್ನು ಎದುರಿಸುವಲ್ಲಿ ಬ್ರೆಝಿಲ್‌ನ ಜನತೆಯ ಹೋರಾಟವನ್ನು ಇನ್ನಷ್ಟು ತೀಕ್ಷ್ಣಗೊಳಿಸುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಶುಭಾಶಯ ಸಂದೇಶದಲ್ಲಿ ವಿಶ್ವಾಸ ವ್ಯಕ್ತಪಡಿಸಿದೆ.

"ವಿಶ್ವದಲ್ಲಿ ಬಹುಧ್ರುವೀಯ ಸನ್ನಿವೇಶದ ಸಾಧ್ಯತೆಗಳಿರುವುದನ್ನು ಬಳಸಿಕೊಂಡು ಕಮ್ಯುನಿಸ್ಟರು ದುಡಿಯುವ ಜನಗಳೊಡನೆ ತಮ್ಮ ಕೊಂಡಿಗಳನ್ನು ಇನ್ನಷ್ಟು ಬೆಸೆದು ಸಾಮ್ರಾಜ್ಯಶಾಹಿಯ ಬಹುಮುಖೀ ಧಾಳಿಗಳ ವಿರುದ್ಧ ವರ್ಗ ಸಮರವನ್ನು ತೀವ್ರಗೊಳಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ಈ ಧಾಳಿಗಳನ್ನು ಎದುರಿಸುವ ಒಂದು ವಿಶಾಲ ಪ್ರಜಾಸತ್ತಾತ್ಮಕ ಹಾಗೂ ಜನಪ್ರಿಯ ರಂಗವನ್ನು ಬೆಸೆಯುವ ಹಾಗೂ ಆಳುವ ವರ್ಗಗಳು ತಮ್ಮ ನೀತಿಗಳನ್ನು ಕೈ ಬಿಡುವಂತೆ ಬಲವಂತ ಮಾಡುವ ಒಂದು ರಾಜಕೀಯ ಕಾರ್ಯಾಚರಣೆಯನ್ನು ರೂಪಿಸಬೇಕೆನ್ನುವ ಬ್ರೆಝಿಲ್ ಕಮ್ಯುನಿಸ್ಟ್ ಪಕ್ಷದ ನಿರ್ಧಾರ ಪ್ರಸಕ್ತ ಸಾಮ್ರಾಜ್ಯಶಾಹಿ ಪ್ರಯತ್ನಗಳ ವಿರುದ್ಧ ವಿಶ್ವಾದ್ಯಂತ ನಡೆಯುತ್ತಿರುವ ದುಡಿಯುವ ಜನಗಳ ಹೋರಾಟದ ಒಂದು ಮಹತ್ವಪೂರ್ಣ ಅಂಗ" ಎಂದು ಸಿಪಿಐ(ಎಂ) ಸಂದೇಶ ಅಭಿಪ್ರಾಯ ಪಟ್ಟಿದೆ.

ಯುರೋಪಿನ್ ಸುದ್ಧಿ ಪ್ರಸಾರದಲ್ಲಿ ಪಕ್ಷಪಾತ ಹೆಚ್ಚು

ಇದು ಸಿಂಗಾಪೂರಿನಲ್ಲಿನ ಅಂತರ್ರಾಷ್ಟ್ರೀಯ ಅಧ್ಯಯನ ತಂಡ ಕಂಡುಕೊಂಡ ಸಂಗತಿ. ಏಶ್ಯಾದ ಬಗ್ಗೆ ಸುದ್ದಿ ಸಂಗ್ರಹಿಸುವಾಗ ಯುರೋಪಿಯನ್ ಸುದ್ದಿ ಸಂಸ್ಥೆಗಳು ಕೆಟ್ಟ ಸುದ್ದಿಗಳ ಮೇಲೆಯೇ ಹೆಚ್ಚು ಆದ್ಯತೆ ನೀಡುತ್ತವೆ. ಆದರೆ ಏಶ್ಯಾದ ಸುದ್ದಿಸಂಸ್ಥೆಗಳು ಯುರೋಪಿನ ಬಗ್ಗೆ ಸುದ್ದಿ ಸಂಗ್ರಹಿಸುವಾಗ ತಟಸ್ಥ ನಿಲುವು ತಳೆದಿರುತ್ತವೆ ಎಂದು ಈ ಅಧ್ಯಯನದಿಂದ ತಿಳಿದು ಬಂದಿದೆಯಂತೆ. ಯುರೋಪಿಯನ್ ಮಾಧ್ಯಮದಲ್ಲಿ ಏಶ್ಯಾದ ಸುದ್ದಿಗಳು ಕಮ್ಮಿ ಏಶ್ಯಾದ ಮಾಧ್ಯಮಗಳಲ್ಲಿ ಯುರೋಪಿಯನ್ ಸುದ್ಧಿ ಹೆಚ್ಚಿರುತ್ತವೆ ಎಂದೂ ಈ ಅಧ್ಯಯನ ತಿಳಿಸಿದೆ.

ಹಾಂಗ್‌ಕಾಂಗ್‌ನ್ನು ಚೀಣಾಕ್ಕೆ ಹಿಂದಿರುಗಿಸುವ ಸುದ್ದಿಯ ಬಗ್ಗೆ ಅಧ್ಯಯನ ಮಾಡಿದ ಸಂಶೋಧಕರು ಯುರೋಪಿಯನ್ ಮಾಧ್ಯಮ ಇದನ್ನು ತಮ್ಮ ರಾಷ್ಟ್ರಗಳ, ತಮ್ಮ ಜನಾಂಗದ ಸಂಕುಚಿತ ಕಣ್ಣೋಟದಿಂದಲೇ ಪ್ರಕಟಿಸಿರುವುದು ಕಂಡು ಬಂದಿದೆ ಎಂದಿದ್ದಾರೆ.

ಬೇಡಿಕೆ ಈಡೇರಿಸದಿದ್ದರೆ ಅವಿಶ್ವಾಸ ಠರಾವು

ಯೆಲ್ಸ್ಟಿನ್‌ಗೆ ಕಮ್ಯುನಿಸ್ಟರ ಎಚ್ಚರಿಕೆ

ದೇಶಾದ್ಯಂತ ಎರಡು ವರ್ಷಗಳ ವರೆಗೆ ಕಂದಾಯ, ಬಾಡಿಗೆಗಳ ಏರಿಕೆಯ ಮೇಲೆ ತಡೆ, ದೂರದರ್ಶನದಲ್ಲಿ ಪ್ರತಿಪಕ್ಷಗಳಿಗೆ ಸಮಯಕೊಡಬೇಕು ಇತ್ಯಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಮಿತ್ರಪಕ್ಷಗಳ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ಈಡೇರಿಸಬೇಕೆಂಬ ಒತ್ತಾಯಿಸಿಕ್ಕೆ ಅಧ್ಯಕ್ಷ ಯೆಲ್ಸ್ಟಿನ್‌ರ ಪ್ರತಿಕ್ರಿಯೆ ಬರುವ ವರೆಗೆ ರಶ್ಯಾದ ಸಂಸತ್ತು ಡೂಮಾದಲ್ಲಿ ಅವಿಶ್ವಾಸ ಠರಾವನ್ನು ತರದಿರಲು ರಶ್ಯನ್ ಕಮ್ಯುನಿಸ್ಟ್ ಪಕ್ಷ ನಿರ್ಧರಿಸಿದೆ.

ಡೂಮಾದಲ್ಲಿ ಕಮ್ಯುನಿಸ್ಟರು ಮತ್ತು ಅವರ ಮಿತ್ರ ಪಕ್ಷಗಳ ಪ್ರಾಬಲ್ಯ ಹೆಚ್ಚಿದ್ದು ಅಕ್ಟೋಬರ್ 22 ರಂದು ಯೆಲ್ಸಿನ್‌ರ ಜನವಿರೋಧಿ ನೀತಿಗಳನ್ನು ಪ್ರತಿಭಟಿಸಿ ಚೆರ್ನೋಮಿರ್ಡಿನ್ ಸರ್ಕಾರದ ವಿರುದ್ಧ ಠರಾವನ್ನು ತರಲು ಕಮ್ಯುನಿಸ್ಟ್ ಪಕ್ಷ ಮತ್ತು ಮಿತ್ರ ಪಕ್ಷಗಳು ನಿರ್ಧರಿಸಿದ್ದವು. ಆದರೆ ಈ ಪಕ್ಷಗಳ ಪ್ರಮುಖ ಬೇಡಿಕೆಗಳನ್ನು ಕುರಿತಂತೆ ಯೆಲ್ಸಿನ್‌ರಿಂದ ರಿಯಾಯಿತಿಗಳನ್ನು ಪಡೆಯಲು ಪ್ರಯತ್ನಿಸಬೇಕು ಎಂದು ರಶ್ಯನ್ ಕಮ್ಯುನಿಸ್ಟ್ ಪಕ್ಷದ ಸಭೆಯೊಂದು ನಿರ್ಧರಿಸಿದೆಯೆಂದು ತಿಳಿದುಬಂದಿದೆ. ಯೆಲ್ಸಿನ್‌ಗೆ ಒಂದು ವಾರದ ಸಮಯ ನೀಡಿ, ಅಷ್ಟರೊಳಗೆ ಆತನಿಂದ ಅನುಕೂಲ ಪ್ರತಿಕ್ರಿಯೆ ಬರದಿದ್ದರೆ ಡೂಮಾದಲ್ಲಿ ಅವಿಶ್ವಾಸ ಠರಾವನ್ನು ಮಂಡಿಸಲಾಗುವುದು.

ಈ ನಡುವೆ ಡೂಮಾ ಅವಿಶ್ವಾಸ ವ್ಯಕ್ತಪಡಿಸಿದರೆ ಸರ್ಕಾರವನ್ನು ವಜಾ ಮಾಡುವುದಿಲ್ಲ, ಡೂಮಾವನ್ನೇ ವಿಸರ್ಜಿಸುವುದಾಗಿ ಬೆದರಿಕೆ ಹಾಕಿದ್ದ ಯೆಲ್ಸಿನ್ ಡೂಮಾದ ಮುಖಂಡರೊಂದಿಗೆ ಮಾತುಕತೆಗೆ ಸಿದ್ಧ ಎಂದು ತನ್ನ ನಿಲುವು ಬದಲಿಸಿರುವುದಾಗಿ ತಿಳಿದುಬಂದಿದೆ. □

ಮಾಜಿ ಪಾಕಿಸ್ತಾನಿ ಪ್ರಧಾನಿಯ ಸ್ವಿಸ್ ಖಾತೆಗಳಲ್ಲಿ 50 ಕೋಟಿ ರೂ.

ಮಾಜಿ ಪಾಕಿಸ್ತಾನೀ ಪ್ರಧಾನ ಮಂತ್ರಿ ಬೆನಝಿರ್ ಭುಟ್ಟೋರವರು ಸ್ವಿಸ್ ಬ್ಯಾಂಕ್ ಖಾತೆಗಳಲ್ಲಿ 13.7 ಮಿಲಿಯ ಡಾಲರುಗಳಷ್ಟು ಹಣವನ್ನು ಜಮಾ ಮಾಡಿದ್ದು ಅದನ್ನೀಗ ಸ್ವಿಜರ್‌ಲ್ಯಾಂಡ್ ಅಧಿಕಾರಿಗಳು ಜಪ್ತು ಮಾಡಿದ್ದಾರೆ. ಬೆನಝಿರ್, ಆಕೆಯ ಪತಿ ಜರ್ದಾರಿ ಹಾಗೂ ನುಸ್ರತ್ ಭುಟ್ಟೋ ಹೆಸರಲ್ಲಿದ್ದ 7 ಬ್ಯಾಂಕ್ ಖಾತೆಗಳಲ್ಲಿ ಮೂರು ತಿಂಗಳ ಕಾಲ ಯಾವುದೇ ವ್ಯವಹಾರ ನಡೆಯದಂತೆ ಆದೇಶ ನೀಡಲಾಗಿತ್ತು. ಈಗ ಪಾಕಿಸ್ತಾನ ಸರಕಾರ ಕಾನೂನಿನ ನೆರವು ಕೇಳಿದ್ದರಿಂದ ಅದು ಮುಗಿಯುವವರೆಗೆ ಆ ಆದೇಶವನ್ನು ಮುಂದುವರಿಸಲಾಗುತ್ತದೆ ಎಂದು ಸ್ವಿಝರ್‌ಲ್ಯಾಂಡ್‌ನ ಫೆಡರಲ್ ಪೋಲೀಸ್ ಕಚೇರಿ ತಿಳಿಸಿದೆ.

ಚೆ ಯವರಿಗೆ ಲಕ್ಷಾಂತರ ಕ್ಯೂಬನ್ನರ ಶ್ರದ್ಧಾಂಜಲಿ

ಕಳೆದ ವಾರ ಮಹಾನ್ ಕ್ರಾಂತಿಕಾರಿ ಮುಂದಾಳು ಚೆಗೆವಾರರವರಿಗೆ ಸಮಾಜವಾದಿ ಕ್ಯೂಬಾದ ರಾಜಧಾನಿ ಹವಾನಾದಲ್ಲಿ ವಿಶಿಷ್ಟ ರೀತಿಯಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಅಕ್ಟೋಬರ್ 11, 12 ಹಗೂ 13 ರಂದು 'ಕಮಾಂಡರ್ ಚೆಗೆವಾರ'ರಿಗೆ ಲಕ್ಷಾಂತರ ಮಂದಿ ಸಾಲು ಗಟ್ಟಿ ನಿಂತು ಶ್ರದ್ಧಾಂಜಲಿ ಅರ್ಪಿಸಿದರು. ಇತಿಹಾಸದ ಯಾವದೇ ಭಾಗದಲ್ಲಿ ಯಾವುದೇ ಮುಂದಾಳುವಿನ ಅಂತಿಮ ಯಾತ್ರೆಯಲ್ಲಿ ಇಷ್ಟೊಂದು ಜನ ತಮ್ಮ ಮುಖಂಡನೊಂದಿಗೆ ತಮ್ಮನ್ನು ಗುರುತಿಸಿಕೊಂಡ ಇಂತಹ ಬೃಹತ್ ಮಾನವ ಪ್ರದರ್ಶನ ಬೇರೊಂದಿಲ್ಲ ಎಂದು ಹೇಳಲಾಗುತಿದೆ. ಚೆ ಯವರು ಹುತಾತ್ಮರಾದ 30 ವರ್ಷಗಳ ನಂತರ ಈ ಘಟನೆ ನಡೆದಿರುವುದು ಇದರ ಇನ್ನೊಂದು ವಿಶಿಷ್ಟತೆ.



ಬೊಲಿವಿಯನ್ ಮಿಲಿಟರಿ ಸರ್ವಾಧಿಕಾರಿ ಹಾಗೂ ಅಮೆರಿಕಾದ ಗುಪ್ತಚರ ಸಂಸ್ಥೆ ಸಿ.ಐ.ಎ. ಜಂಟಿಯಾಗಿ ನಡೆಸಿದ ಕಾರ್ಯಾಚರಣೆಯೊಂದರಲ್ಲಿ ಚೆಯವರ ಕೊಲೆಯಾಯಿತು. ಕೆಲವು ದಿನಗಳ ಹಿಂದೆ ಚೆ ಮತ್ತು ಅವರ ಸಂಗಾತಿಗಳನ್ನು ಮಣ್ಣು ಮಾಡಿದ ಜಾಗ ಪತ್ತೆಯಾಯಿತು. ವೈಜ್ಞಾನಿಕ ಪರೀಕ್ಷೆಗಳ ನಂತರ ಅಲ್ಲಿ ದೊರೆತ ಅವಶೇಷಗಳು ಚೆ ಮತ್ತು ಅವರ ಸಂಗತಿಗಳದ್ದೇ ಎಂದು ರುಜುವಾತಾಯಿತು. ಅವನ್ನು ಅಕ್ಟೋಬರ್ 11, 12, 13 ರಂದು ಹವಾನಾದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು.

ಕ್ಯೂಬಾ ಪಕ್ಷದ ಮಹಾಧಿವೇಶನದ ಕೊನೆಯ ದಿನ ಅಕ್ಟೋಬರ್ 11ರ ಬೆಳಿಗ್ಗೆ ಗಣತಂತ್ರದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ರೂಝ್‌ರವರು ಚೆಯವರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಆಗಲೇ ಲಕ್ಷಾಂತರ ಮಂದಿ ತಮ್ಮ ಶ್ರದ್ಧಾಂಜಲಿ ಅರ್ಪಿಸಲು ಸಾಲುಗಟ್ಟಿ ನಿಂತಿದ್ದರು.

ರಾಷ್ಟ್ರೀಯ ಕ್ಯೂಬಾ ಸೌಹಾರ್ದ ಸಮಿತಿಯ ಸಂಯೋಜಕ ಎಂ.ಎ.ಬೇಬಿಯವರು ಹುತಾತ್ಮ ಚೌಕದಲ್ಲಿಟ್ಟಿದ್ದ ಚೆ ಮತ್ತು ಅವರ ಸಂಗಾತಿಗಳ ಅವಶೇಷಗಳ ಪೆಟ್ಟಿಗೆ ಬಳಿಸಾರಿ ಗೌರವ ಸಲ್ಲಿಸಿದ ಮೊದಲ ವಿದೇಶೀ ಪ್ರತಿನಿಧಿಗಳಲ್ಲೊಬ್ಬರಾಗಿದ್ದರು. ಬೇಬಿಯವರು ಭಾರತೀಯ ಜನತೆಯ ಪರವಾಗಿ ಚೆಯವರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಅಕ್ಟೋಬರ್ 14 ರಂದು ಚೆಗೆವಾರ ಹಾಗೂ ಅವರ ಸಂಗಾತಿಗಳ ದೇಹದ ಅವಶೇಷಗಳನ್ನು ಸಾಂತಾಕ್ಲಾರ ಪ್ರಾಂತ್ಯಕ್ಕೆ ಒಯ್ಯಲಾಯಿತು. ಕ್ಯೂಬಾ ಕ್ರಾಂತಿಯಲ್ಲಿ ಚೆಗೆವಾರ ನೇತೃತ್ವದ ತುಕಡಿ ಹವಾನಾ ಪ್ರವೇಶಿಸಲು ಹಿಡಿದ ಚಾರಿತ್ರಿಕ ಹಾದಿಯಲ್ಲೇ ಇವನ್ನು ಒಯ್ಯಲಾಯಿತಗ ಸಾಂತಾ ಕ್ಲಾರಾದಲ್ಲಿ ಜನತೆ ಅಕ್ಟೋಬರ್ 15,16 ರಂದು ಚೆಯವರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಎಂ.ಎ.ಬೇಬಿಯವರು ಕ್ಯೂಬಾ ಜನತಾ ಸ್ನೇಹ ಸಂಸ್ಥೆಯ ಮುಖಂಡರೊಂದಿಗೆ ಚರ್ಚಿಸಿ ಚೆಗೆವಾರಾವರ ಇಬ್ಬರು ಹೆಣ್ಣು ಮಕ್ಕಳಾದ ಅಲೈದಿತಾ ಗೆವಾರಾ ಹಾಗೂ ಸೆಲಿಯ ಗೆವಾರರವರ ಭಾರತ ಭೇಟಿಯ ವಿವರವನ್ನು ನಿರ್ದಿಷ್ಟಪಡಿಸಿಕೊಂಡರು.

ಬೆಂಗಳೂರಿನಲ್ಲಿ ಚೆ ಪುತ್ರಿಯರು

ಮಹಾನ್ ಕ್ರಾಂತಿಕಾರಿ ಚೆಗೆವಾರಾರವರ ಪುತ್ರಿಯರಾದ ಅಲೈದಿತಾ ಗೆವಾರಾ ಹಾಗೂ ಸೆಲಿಯಾ ಗೆವಾರಾ ಅಕ್ಟೋಬರ್ 25 ರಿಂದ ಭಾರತಕ್ಕೆ ಭೇಟಿ ನೀಡುತ್ತಿದ್ದು ನವಂಬರ್ 1 ರಂದು ಬೆಂಗಳೂರಿಗೆ ಭೇಟಿ ನೀಡಲಿದ್ದಾರೆ. ಅಂದು ಅವರಿಗೆ ಒಂದು ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ. ನಗರದ ದುಡಿಯುವ ಜನರ ಪ್ರತಿನಿಧಿಗಳು, ಇತರ ಪ್ರಗತಿಪರರು ಇದರಲ್ಲಿ ಭಾಗವಹಿಸಲಿದ್ದಾರೆ.

ಗೋದೂತಾಯಿಯ ಸ್ಮರಣೆ

ಅಕ್ಟೋಬರ್ 10 ರಂದು ವಾರ್ಲಿ ಆದಿವಾಸಿ ಬಂಡಾಯದ ವೀರವನಿತ ಕಾಂ। ಗೋದಾವರಿ ಪರುಳೇಕರ್‌ರವರ ನಿಧನದ ಮೊದಲ ವಾರ್ಷಿಕವನ್ನು ಮಹಾರಾಷ್ಟ್ರದ ಥಾಣೆ ಜಿಲ್ಲೆಯ ತಲಸಾರಿಯಲ್ಲಿ ಒಂದು ಬೃಹತ್ ರ್‍ಯಾಲಿಯೊಂದಿಗೆ ಆಚರಿಸಲಾಯಿತು. 10 ಸಾವಿರಕ್ಕೂ ಹೆಚ್ಚು ಜನ ಇದರಲ್ಲಿ ಭಾಗವಹಿಸಿದ್ದರು. ಅಂದು ತಲಸೇರಿಯಲ್ಲಿ 52ನೇ ಹುತಾತ್ಮ ದಿನಾಚರಣೆಯೂ ಆಗಿತ್ತು.

ಅಕ್ಟೋಬರ್ 10, 1945 ಸಾವಿರಾರು ಆದಿವಾಸಿಗಳ ಮೇಲೆ ಬ್ರಿಟಿಶ್ ಸರಕಾರ ಪೋಲೀಸ್ ಗೋಳಿಬಾರು ನಡೆಸಿತು. ಮಹಾನ್ ಆದಿವಾಸಿ ಬಂಡಾಯದ ಮೊದಲ ಐದು ಹುತಾತ್ಮರನ್ನು ಬಲಿತೆಗೆದುಕೊಂಡ ಘಟನೆಯಾಗಿತ್ತದು. ಬಂಡಾಯವನ್ನು ಹತ್ತಿಕ್ಕುವ ಬ್ರಿಟಿಶರ ಆ ಪ್ರಯತ್ನ ಮಾತ್ರ ಸಾಗಲಿಲ್ಲ. ಅಂದಿನಿಂದ ಪ್ರತಿವರ್ಷ ಇಲ್ಲಿ ಅಕ್ಟೋಬರ್ 10 ನ್ನು ಹುತಾತ್ಮ ದಿನವಾಗಿ ಆಚರಿಸಲಾಗುತ್ತಿದೆ. ಅಂದಿನಿಂದ ಇದುವರೆಗೆ ಈ ಜಿಲ್ಲೆಯ 57 ಸಂಗಾತಿಗಳು ಹುತಾತ್ಮರಾಗಿದ್ದಾರೆ. ಮೊದಲು ಬ್ರಿಟಿಶರು, ಆಮೇಲೆ ಕಾಂಗ್ರೆಸ್ ಹಾಗೂ ಶಿವಸೇನೆ-ಬಿಜೆಪಿ ಆಳರಸರ ಗುಂಡೇಟುಗಳಿಗೆ ಅವರು ಬಲಿಯಾದರು. ಈ ಪಟ್ಟಿಯಲ್ಲಿ ಇತ್ತೀಚಿನ ಸೇರ್ಪಡೆಯೆಂದರೆ ಈ ವರ್ಷ ಗಣತಂತ್ರದಿನದಂದು ಸಮೀಪದ ಕವಾಡಾ ಗ್ರಾಮದಲ್ಲಿ ಶಿವಸೇನಾ-ಬಿಜೆಪಿ ಪೋಲೀಸರ ಗುಂಡುಗಳಿಗೆ ಬಲಿಯಾದ ಇಬ್ಬರು ಯುವ ಆದಿವಾಸಿಗಳು. ಗೋದಾವರಿ ಪರುಳೇಕರ್ ಕಳೆದ ವರ್ಷ ಅಕ್ಟೋಬರ್ 8 ರಂದು ನಿಧನರಾದರು. ಅವರ ನೆನಪಿಗೆ ಸಂಯೋಗ್ಯ ಶ್ರದ್ಧಾಂಜಲಿಯೆನ್ನುವಂತೆ ಅವರ ದಹನ ಕ್ರಿಯೆಯನ್ನು ಅಕ್ಟೋಬರ್ 10 ರಂದು ಹುತಾತ್ಮ ದಿನದ 51ನೇ ವಾರ್ಷಿಕದಂದು ತಲಸಾರಿಯಲ್ಲಿ ನಡೆಸಲಾಯಿತು.

ಬೇಸಾಯದ ಕೆಲಸಗಳು ಆರಂಭವಾಗಿದ್ದರೂ ಸುತ್ತಮುತ್ತಲಿನ ತಹಸೀಲುಗಳಿಂದ ಸಾವಿರಾರು ಜನ ಈ ಸಮಾರಂಭದಲ್ಲಿ ಬಂದು ಭಾಗವಹಿಸಿದರು. ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂಯೆಚೂರಿ, ಕೇಂದ್ರ ಸಮಿತಿ ಸದಸ್ಯರುಗಳಾದ ಪ್ರಭಾಕರ್ ಸಾಂಝುರಿ ಮತ್ತು ಅಹಲ್ಯಾ ರಂಗ್ನೇಕರ್, ಜಿಲ್ಲಾ ಕಾರ್ಯದರ್ಶಿ ಸುಹಾಸ್ ಸಾಮಂತ್ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರೆಲ್ಲರೂ ಉಪಸ್ಥಿತರಿದ್ದರು.

ಭಾಷಣಕಾರರು 1945-47 ರ ವಾರ್ಲಿ ಆದಿವಾಸಿ ಬಂಡಾಯದ ಅದರ ಮುಖಂಡರಾದ ಶ್ಯಾಮರಾವ್ ಪರುಳೇಕರ್ ಮತ್ತು ಗೋದಾವರಿ ಪರುಳೇಕರ್‌ರವರ ಉಜ್ವಲ ಪರಂಪರೆಗಳನ್ನು ನೆನಪಿಸಿಕೊಂಡು ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಪ್ರಸಕ್ತ ರಾಜಕೀಯ ಸವಾಲುಗಳು ಹಾಗೂ ಹೋರಾಟಗಳ ಬಗ್ಗೆಯೂ ಅವರು ಮಾತನಾಡಿದರು.

ಈ ಸಂದರ್ಭಕ್ಕೆಂದೇ ಸಿಪಿಐ(ಎಂ) ನ ಥಾಣೆ ಜಿಲ್ಲಾ ಸಮಿತಿ 50 ವರ್ಷಗಳ ಹಿಂದೆ ಶ್ಯಾಮರಾವ್ ಪರುಳೇಕರ್ ಬರೆದ 'ವಾರ್ಲಿ ಬಂಡಾಯ' ಎಂಬ ಪುಸ್ತಕವನ್ನು ಮೊತ್ತ ಮೊದಲಬಾರಿಗೆ ಮರಾಠಿಯಲ್ಲಿ ಪ್ರಕಟಿಸಿತು. ಈಗ ಯುವಜನರ ರಾಜಕೀಯ ಶಿಕ್ಷಣಕ್ಕೆಂದು ಇದನ್ನು ತಯಾರಿಸಲಾಗಿತ್ತು. ಅಲ್ಲದೆ ಶ್ಯಾಮರಾವ್ ಮತ್ತು ಗೋದಾವರಿ ಪರುಳೇಕರ್‌ರವರ ಬಣ್ಣದ ಭಾವಚಿತ್ರಗಳನ್ನು ಮುದ್ರಿಸಲಾಗಿತ್ತು. ಇವೆರಡೂ ರ್‍ಯಾಲಿಯಲ್ಲಿ ಚೆನ್ನಾಗಿ ಮಾರಾಟವಾದವು.

ಅದೇ ದಿನ ಬೆಳಿಗ್ಗೆ ಈ ಪ್ರದೇಶದ ಏಕಮಾತ್ರ ಹಿರಿಯ ಕಲಾ ಕಾಲೇಜಿಗೆ ಗೋದಾವರಿ ಶ್ಯಾಮರಾವ್ ಪರುಳೇಕರ್ ಹೆಸರಿಡಲಾಯಿತು. ಇದಕ್ಕಾಗಿ ಒಂದುಸಮಾರಂಭ ಉಧವದಲ್ಲಿ ನಡೆಯಿತು. ಮೂರು ದಶಕಗಳ ಹಿಂದೆ ಪಕ್ಷದ ಮುಖಂಡತ್ವದಲ್ಲಿ ಸ್ಥಾಪಿಸಿದ ಆದಿವಾಸಿ ಪ್ರಗತಿ ಮಂಡಳಿ ಈ ಕಾಲೇಜನ್ನು ಇತ್ತೀಚೆಗೆ ಪ್ರಾರಂಭಿಸಿತ್ತು. ತಲಾಸರಿ ತಹಸೀಲಿನಲ್ಲಿ ಈ ಮಂಡಳಿ ಹಲವಾರು ಶಾಲೆ, ಹಾಸ್ಟೆಲ್‌ಗಳನ್ನು ನಡೆಸುತ್ತಿದೆ.

ಹೊಸ ಕಾಲೇಜು ಕಟ್ಟಡಕ್ಕೆ ಸೀತಾರಾಂ ಯೆಚೂರಿ ಅಡಿಗಲ್ಲನ್ನಿಟ್ಟರು. ಪ್ರಭಾಕರ್ ಸಾಂಝುಗಿರಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಹಲ್ಯಾ ರಂಗ್ನೇಕರ್ ಕಾಲೇಜಿನ ಹೊಸ ನಾಮಫಲಕದ ಅನಾವರಣ ಮಾಡಿದರು. ಮಂಡಳದ ಅಧ್ಯಕ್ಷ ಹಾಗೂ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಲಹಾಣುಕೋವ್ ಮತ್ತು ಮಂಡಳದ ಕಾರ್ಯದರ್ಶಿ ಹಾಗೂ ಎಂ.ಎಲ್.ಎ. ರಾಮ್‌ಜಿ ವಾರ್ತಾ ಕೂಡಾ ಈ ಸಂದರ್ಭದಲ್ಲಿ ಮಾತನಾಡಿದರು. ಎಲ್ಲಾ ವಿಭಾಗಗಳ ಜನ ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

(ಐಎನ್‌ಎನ್)

ಪದಬಂಧ-3ರ ಉತ್ತರ - ವಿಶ್ವ

ಚಂ	ದ	ಶೇ	ಖ	ರ	ಆ	ಝಾ	ದ್		ಸ
	ಚಿ	ತ್ತ	ಗಾಂ	ಗ್	ಜಾ	ತಿ	ಪ	ದ್ಧ	ತಿ
ಮಾ					ದ್				
ಡು		ಆ	ರ್ಥಿ	ಕ	ಹಿಂ	ಜ	ರಿ	ಕೆ	
ಇ	ಳಿ	ಮು	ಖ		ದ್				
ಲ್ಲ					ಫೌ		ನೇ	ತಾ	ಜಿ
ವೆ		ನಾ			ಜ್	ಸೂ	ತಾ		
ಮ		ಗ	ಣ	ವಾ	ಣಿ	ರ್ಯ	ರ	ಮುಂ	
ಡಿ		ಪು				ಸೇ		ಬ	
		ರ		ಕ	ಲ್ಪ	ನೆ		ಯಿ	

ರೈತ ಸಂಘದ 60 ನೇ ವಾರ್ಷಿಕೋತ್ಸವ



ಅಖಿಲ ಭಾರತ ಕಿಸಾನ್ ಸಭಾದ 60 ನೇ ವಾರ್ಷಿಕೋತ್ಸವದ ಮತ್ತು ಸ್ವಾತಂತ್ರ್ಯ ಸುವರ್ಣ ಜಯಂತಿಯ ಅಂಗವಾಗಿ, ಕರ್ನಾಟಕ ಪ್ರಾಂತ ರೈತ ಸಂಘದ ಬಸವನ ಬಾಗೇವಾಡಿ ತಾಲೂಕ ಸಮಿತಿಯ (ಬಿಜಾಪುರ ಜಿಲ್ಲೆ) ವತಿಯಿಂದ ದಿ. 29-9-97 ರಂದು ಬಸವನ ಬಾಗೇವಾಡಿಯಲ್ಲಿ ಸಾರ್ವಜನಿಕ ಸಭೆ ಮತ್ತು ಜಿಲ್ಲೆಯಲ್ಲಿ ರೈತರ ಹೋರಾಟ ನಡೆಸಿದವರಿಗೆಲ್ಲಾ ಸನ್ಮಾನ ಮಾಡಲಾಯಿತು. ಕ.ಪ್ರಾ. ರೈತಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಈ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ದೇಶದಲ್ಲಿ ನಡೆದು ಬಂದ ಕಿಸಾನ್ ಸಭಾದ ಹೋರಾಟಗಳನ್ನು ನೆನಪಿಸಿಕೊಟ್ಟು, ರೈತ ಸಂಘದ ಅವಶ್ಯಕತೆಯನ್ನು ವಿವರಿಸಿ, ರೈತರಿಗಾಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಲು ಮುಂದಾಗಬೇಕೆಂದು ಕರೆ ನೀಡಿದರು. ವಿಜಾಪುರ ಜಿಲ್ಲೆಯಲ್ಲಿ ರೈತ ಸಂಘ ಕಟ್ಟಿ ಹೋರಾಟ ನಡೆಸಿದ್ದ ಎನ್.ಕೆ. ಉಪಾಧ್ಯಾಯರು ಭಾಷಣದಲ್ಲಿ ಜಿಲ್ಲೆ ರೈತ ಚಳುವಳಿಯ ವಿವರಗಳನ್ನು ನೀಡಿ, ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಪಾತ್ರದ ಮಹತ್ವ ಹೇಳಿ, ನೀರಾವರಿ ಯೋಜನೆಗಳಿಗಾಗಿ, ಭೂಸುಧಾರಣೆಗಾಗಿ ಹೋರಾಟ ಮುಂದುವರಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಅಣ್ಣಾರಾಯ ಇಳಿಗೇರ, ಕಾರ್ಮಿಕ ಮುಖಂಡ ಡಿ.ಎಂ.ಖಲಾಸಿ ಮೊದಲಾದವರು ಭಾಷಣ ಮಾಡಿದರು. ರೈತ ಸಂಘಟನೆಗಾಗಿ ಹೋರಾಡಿದ ಡಿ.ಎಂ. ಖಲಾಸಿ, ವೆಂಕಟಗೌಡ ಬಿರಾದಾರ (ಮಲಘಾ) ರಾಜೇ ಸಾಬ, ನಭೀಸಾಬ (ಗಣಿ) ಬಸಪ್ಪಾ ಶಿಬೀರ (ಕಲಬುರ್ಗಿ) ಭೀಮಣ್ಣ ಸಗರಪ್ಪ, ಮಾನಪ್ಪ ಅಖಂಡಪ್ಪ ಬಣಗೇರ, ಹಸನ ಸಾಬ ದೊಡ್ಡಮನಿ ಮೊದಲಾದವರನ್ನು ಸನ್ಮಾನಿಸಲಾಯಿತು. ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಭೀಮಸಿ ಕಲಾದಗಿಯವರು, ಅಖಿಲ ಭಾರತ ಕಿಸಾನ ಸಭಾದ ಹಾಗೆಯೇ ಜಿಲ್ಲೆಯ ರೈತರ ಹೋರಾಟಗಳನ್ನು ವಿವರಿಸಿ ಕ್ರಾಂತಿಕಾರಿ ಚಳುವಳಿಯ, ಸ್ವಾತಂತ್ರ್ಯ ಹೋರಾಟದ ಪರಂಪರೆ ಉಳ್ಳ ರೈತ ಸಂಘ, ರೈತರ ಬೇಡಿಕೆಗಳಿಗಾಗಿ ಹೋರಾಟ ಮುಂದುವರಿಸಬೇಕೆಂದು ಹೇಳಿದರು. ರೈತ ಮಹಿಳೆಯರು ಕ್ರಾಂತಿಕಾರಿ ಹಾಡುಗಳನ್ನು ಹಾಡಿ ಹೊಸ ಸ್ಫೂರ್ತಿ ತುಂಬಿದರು.

"ನಾನು ಸದಾ ಸಾಂಸ್ಕೃತಿಕವಾಗಿ ಶ್ರಮ ಜೀವಿ ವರ್ಗದ ಭಾಗ"

ಎನ್ನುತ್ತಾರೆ ಈ ವರ್ಷದ ನೋಬೆಲ್ ಸಾಹಿತ್ಯ ಪ್ರಶಸ್ತಿ ವಿಜೇತ ದೇರಿಯೊಪೋ

ಸಾಹಿತ್ಯಕ್ಕಾಗಿ ನೀಡುವ ನೋಬೆಲ್ ಪ್ರಶಸ್ತಿ ಈ ಭಾರಿ ಇಟಾಲಿಯನ್ ನಾಟಕಕಾರ ದೇರಿಯೊಫೋಗೆ ದೊರೆತಿದೆ. ಈ ಸುದ್ದಿ ಕೇಳಿದ ರೋಮನ್ ಕ್ಯಾಥೋಲಿಕ್ ಚರ್ಚಿನ ವ್ಯಾಟಿಕನ್ ಮುಖ್ಯಸ್ಥರಿಗೆ ದಂಗು ಬಡಿದಿದೆಯಂತೆ. ಹೀಗೆಂದು ಸ್ವತಃ ವ್ಯಾಟಿಕನ್ ಮುಖ್ಯವಾಗಿ "ಲಅಬ್ಸರ್ವೇಟರೋ ರೋಮನೋ" ಸ್ವತಃ ಹೇಳಿಕೊಂಡಿದೆ. ಇಟಲಿಯ ಆಳುವ ಮಂದಿಯೂ ಇದನ್ನು ಟೀಕಿಸಿದ್ದಾರೆ. ಆದರೆ ಇಟಲಿಯ ಜನಸಾಮಾನ್ಯರಿಗೆ ಬಹಳ ಸಂತೋಷವಾಗಿದೆ.

ಇವೆಲ್ಲಕ್ಕೆ ಕಾರಣಗಳಿಲ್ಲದಿಲ್ಲ. ಫೋ ಒಬ್ಬ ಬದ್ಧ ಕಮ್ಯುನಿಸ್ಟರು. ಬೂರ್ಜ್ವಾ ವರ್ಗದ ಗೋಸುಂಬೆತನಕ್ಕೆ ಹಿಡಿದ ಕನ್ನಡಿಗಳು ಅವರ ವಿಡಂಬನಾ 'ನಾಟಕಗಳು, ವಿಡಂಬನೆ, ಪ್ರಹಸನ ಹಾಗೂ ಆಶು ಹಾಸ್ಯ ತುಂಬಿದ ಅವರ ನಾಟಕಗಳು ಇಟಲಿಯ ಮಧ್ಯಕಾಲೀನ ಹಾಸ್ಯಗಾರರ ಪರಂಪರೆಯನ್ನು ಮುಂದುವರೆಸುವಂತವು ಎಂದು ಹೇಳಲಾಗಿದೆ. ಈ ಹಾಸ್ಯಗಾರರು ಆದ ಒಂದೆಡೆಯಿಂದ ಇನ್ನೊಂದೆಡೆಗೆ ಅಲೆದಾಡುತ್ತಾ ಅಧಿಕಾರಸ್ಥರು, ಕುಲೀನರ ಬಗ್ಗೆ ಆಶು ಹಾಸ್ಯ ಚಟಾಕಿಗಳಿಂದ ತುಂಬಿದ ದಲಿತ ವಿಭಾಗಗಳ ಘನತೆಯನ್ನು ಎತ್ತಿ ತೋರುವ ನಾಟಕಗಳನ್ನು ಪ್ರದರ್ಶಿಸುತ್ತಿದ್ದರು.

ದೇರಿಯೋಫೋರವರ ಮೇಲೆ ಪ್ರಭಾವ ಬೀರಿದ 20 ನೇ ಶತಮಾನದ ಲೇಖಕರೆಂದರೆ ಭರ್ಟೋಲ್ಟ್ ಬ್ರೆಕ್ಟ್ ಮತ್ತು ವಾಡ್ಲಿಮಿರ್ ಮಾಯೋವ್‌ಸ್ಕಿ.

ಐವತ್ತಕ್ಕಿಂತ ಹೆಚ್ಚು ನಾಟಕಗಳನ್ನು ರಚಿಸಿರುವ ಫೋ ರ ಕೃತಿಗಳ ಶಕ್ತಿಯೆಂದರೆ "ಅವುಗ ಏಕಕಾಲದಲ್ಲಿ ನೀಡುವ ರಂಜನೆ, ಚಿಂತನೆ ಹಾಗೂ ಕಣ್ಣೋಟಗಳು" ಎಂದು ನೋಬೆಲ್ ಪ್ರಶಸ್ತಿಯ ಒಕ್ಕಣೆ ಹೇಳಿದೆ. "ಹಾಸ್ಯ ಮತ್ತು ಗಂಭೀರತೆಯನ್ನು ಬಳಸಿ ಅವರು ಸಮಾಜದಲ್ಲಿನ ಅನ್ಯಾಯಗಳು, ಅಧಿಕಾರ ದುರುಪಯೋಗಗಳ ಬಗ್ಗೆ ನಮ್ಮ ಕಣ್ಣು ತೆರೆಸುತ್ತಾರೆ. ಈಚೆಗೇ ಅವನ್ನು ಒಂದು ವಿಶಾಲ ಚಾರಿತ್ರಿಕ ಪರಿಪ್ರೇಕ್ಷದಲ್ಲಿಡುತ್ತಾರೆ....." ಅವರ ಸ್ವತಂತ್ರ ಮನೋಭಾವ ಹಾಗೂ ಸ್ಪಷ್ಟ ಕಣ್ಣೋಟದಿಂದಾಗಿ ಅವರು ಬಹಳಷ್ಟು ಅಪಾಯಗಳನ್ನು ಎದುರಿಸಬೇಕಾಯಿತು. ಅದೇ ವೇಳಗೆ ವಿಭಿನ್ನ ವಲಯಗಳಿಂದ ಅವರಿಗೆ ಅಪಾರ ಸ್ಪಂದನವೂ ದೊರೆಯಿತು" ಎಂದು ಮುಂದುವರೆದು ನೋಬೆಲ್ ಪ್ರಶಸ್ತಿಯ ಒಕ್ಕಣಿಕೆ ಹೇಳಿದೆ.

"ಒಬ್ಬ ಅರಾಜಕತಾವಾದಿಯ ಆಕಸ್ಮಿಕ ಸಾವು" ಎಂಬುದು ಅವರ ಅತ್ಯಂತ ಪ್ರಸಿದ್ಧ ನಾಟಕದ ಹೆಸರು. ಇದು 1968 ರ ಒಂದು ಸತ್ಯ ಘಟನೆಯನ್ನು ಆಧರಿಸಿದ್ದು. ಮಿಲ್ಲಾನ್ ನಗರದಲ್ಲಿನ ಒಂದು ಬಾಂಬ್ ಸ್ಫೋಟದಲ್ಲಿ ಭಾಗಿಯಾಗಿದ್ದ ಸಂದೇಹದ ಮೇಲೆ ಪೋಲೀಸರ ವಿಚಾರಣೆಗೊಳಗಾಗಿದ್ದ ಒಬ್ಬ ಯುವ ಅರಾಜಕತಾವಾದಿ ನಾಲ್ಕನೇ ಮಹಡಿಯ ಒಂದು ಕೋಣೆಯಿಂದ ಕೆಳಗೆ ಬಿದ್ದು ಅಸು ನೀಗಿದ. ಅದೊಂದು 'ಅಪಘಾತ' ಎಂದರು ಅಧಿಕಾರಸ್ಥರು. ಆದರೆ ಇಟಾಲಿಯನ್ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಪ್ರಗತಿಪರರಿಗೆ ಅದೊಂದು ಕೊಲೆ ಎಂಬುದರಲ್ಲಿ ಸಂದೇಹವಿರಲಿಲ್ಲ.

"ಮಿಸ್ಟರೋ ಬಫ್ಫೋ", "ನಾವು ತರಲಾರೆವು; ನಾವು ತರಲಾರೆವು!", "ಮೊಗದ ಕುರಿತು", "ಪೋಪ್ ಮತ್ತು ಮಾಟಗಾತಿ" ಅವರ ಇತರ ಪ್ರಸಿದ್ಧ ನಾಟಕಗಳು. ಇವೆಲ್ಲಾ ವಿವಾದಾತ್ಮಕ ಕೃತಿಗಳೇ. ಏಕೆಂದರೆ ಅವು ಬಂಡವಾಳಶಾಹಿ, ಭೋಗ ಪ್ರವೃತ್ತಿ, ವ್ಯಾಟಿಕನ್ ಚರ್ಚ್, ಸಿಐಎ ಇಟಾಲಿಯನ್ ಬಲ ಪಂಥೀಯರು ಇತ್ಯಾದಿಗಳಿಗೆ ಗುರಿಯಿಟ್ಟ ವಿಡಂಬನೆಗಳು.

ದೇರಿಯೋ ಫೋ 1926 ರ ಮಾರ್ಚ್ 24 ರಂದು ಇಟಲಿಯ ಚಿಕ್ಕ ಪಟ್ಟಣ ಲೆಗ್ಗಿನೋ ಸಾಂಗಿಯಾನೋದಲ್ಲಿ ಒಂದು ಬಡ ಕುಟುಂಬದಲ್ಲಿ ಜನಿಸಿದರು. ರೈಲ್ವೇ ಸ್ಟೇಶನ್ ಮಾಸ್ತರ್ ರಾಗಿದ್ದ ಅವರ ತಂದೆ ಬಿಡುವಿನ ವೇಳೆಯಲ್ಲಿ ನಾಟಕಗಳಲ್ಲೂ ಅಭಿನಯಿಸುತ್ತಿದ್ದರು. "ನಾನೂ ಸದಾ ಕಾರ್ಮಿಕ ವರ್ಗದ ಭಾಗ ಎಂದು ನನಗನಿಸಿದೆ" ಎಂದಿದ್ದರು ಫೋ ಕಳೆದ ವರ್ಷ ಬ್ರಿಟೀಷ್ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ.

"ಸಾಂಸ್ಕೃತಿಕವಾಗಿ ನಾನೂ ಸಹ ಶ್ರಮ ಜೀವಿ ವರ್ಗದ ಭಾಗವಾಗಿದ್ದೇನೆ. ಗಾಜು ಕೆಲಸಗಾರರು, ಮೀನುಗಾರರು, ಕಳ್ಳಸಾಗಾಣಿಕೆದಾರರ ಮಕ್ಕಳೊಂದಿಗೆ ಬಾಳಿದವನು ನಾನು. ಅವರು ಹೇಳುವ ಕಥೆಗಳು, ಅಧಿಕಾರಸ್ಥರ, ಉತ್ತಮ ವರ್ಗಗಳ ಗೋಸುಂಬೆತನದ ತೀಕ್ಷ್ಣ ವ್ಯಂಗ್ಯಗಳಾಗಿದ್ದವು. ಅಧ್ಯಾಪಕರು, ವಕೀಲರು, ರಾಜಕಾರಣಿಗಳ ಇಬ್ಬಂದಿತನವನ್ನು ಗೇಲಿ ಮಾಡುತ್ತಿದ್ದರು. ನಾನು ರಾಜಕೀಯ ಗ್ರಸ್ತನಾಗಿಯೇ ಹುಟ್ಟಿದೆ ಎನ್ನುತ್ತಾರೆ ದೇರಿಯೋ ಫೋ. ವಯಸ್ಕನಾದಂತೆ ಹೆಚ್ಚೆಚ್ಚು ತೀವ್ರಗಾಮಿಯಾದ ಅವರು ಇಟಾಲಿಯನ್ ಕಮ್ಯುನಿಸ್ಟ್ ಪಕ್ಷ ಸೇರಿದರು. ಈಗ ಅವರು ಯಾವುದೇ ಕಮ್ಯುನಿಸ್ಟ್ ಪಕ್ಷದ ಸದಸ್ಯರಲ್ಲದಿದ್ದರೂ ಸ್ವಭಾವತಃ ಇನ್ನೂ ಕಮ್ಯುನಿಸ್ಟರಾಗಿಯೇ ಉಳಿದಿದ್ದಾರೆ. ತನ್ನ ಅನಿಸಿಕೆಗಳನ್ನು ನಿರ್ಭೀತವಾಗಿ ಹೇಳುವ ತೀವ್ರಗಾಮಿ ಎಂದು ಪರಿಗಣಿಸಲಾಗುತ್ತಿದೆ.

ಫೋ ನಾಟಕಕಾರರಷ್ಟೇ ಅಲ್ಲ, ಉತ್ತಮ ನಟರೂ ಕೂಡಾ. ಇಟಲಿಯಲ್ಲಿ ಮತ್ತು ಜಗತ್ತಿನ ಹಲವೆಡೆ ಅವರ ನಾಟಕಗಳು ಜನಪ್ರಿಯವಾಗಿದೆ. ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಅವರಿಗೆ ಎರಡು ಬಾರಿ ವೀಸಾ ನಿರಾಕರಿಸಲಾಗಿತ್ತು. ಕಾರಣ ಅವರು ಕಮ್ಯುನಿಸ್ಟರು. ಆದರೂ ಅವರ ಕೃತಿಗಳು ಜನಪ್ರಿಯವಾಗಿವೆ. "ಶ್ರೀಯುತ ಫೋ ಮತ್ತು ಇತರ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿರುವ ಅಥವಾ ಆಗಿದ್ದ ವಿದೇಶೀ ಸಾಂಸ್ಕೃತಿಕ ವ್ಯಕ್ತಿಗಳ ಮೇಲಿನ ನಿರ್ಬಂಧ 1914 ರಲ್ಲಿ ಹೆಚ್ಚಾಯಿತು. ಅನಂತರ ಅಮೇರಿಕಾಕ್ಕೆ ಭೇಟಿ ನೀಡಲು ಫೋ ಗೆ ಸಾಧ್ಯವಾದಾಗ ಇಲ್ಲಿನ ವಿಮರ್ಶಕರು ನಾಟಕಕಾರನಾಗಿಯೂ, ನಟನಾಗಿಯೂ ಅವರ ಅತ್ಯುತ್ತಮ ಸಾಮರ್ಥ್ಯವನ್ನು ಹೊಗಳಿದ್ದಾರೆ." ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಪೋಪ್‌ರ ವ್ಯಾಟಿಕನ್ ವ್ಯವಸ್ಥೆಯಂತೂ ಫೋ ರವರ ಕೃತಿಗಳು 'ಪಾಷಂಡತನ' ವೇ ಆಗಿತ್ತು. ಆದ್ದರಿಂದ ಅವರಿಗೆ ಈಗ ದೊರೆತಿರುವ ಪ್ರಶಸ್ತಿ "ಊಹೆಗೂ ನಿಲುಕದ್ದು" ಎಂದು ಅದು ಹೇಳಿದೆ. ಅಲ್ಲದೆ ಇಟಲಿಯ ಜನಸಾಮಾನ್ಯರು ಇದು ತಮಗೆ ಸಿಗುತ್ತಿರುವ ಗೌರವ ಎಂದೇ ಬಗೆದಿದ್ದಾರೆ.

(ಐ.ಎನ್.ಎಸ್).

.......ನೀತಿ, ತತ್ವ ಹೋಯಿತು

ಪುಟ 1 ರಿಂದ

ಹೊಡೆತ ತಿಂದಿರುವ ಪಕ್ಷವೆಂದರೆ ಕಾಂಗ್ರೆಸ್. ಈ ಪಕ್ಷ ಒಂದು ವರ್ಷದ ಹಿಂದೆ ಬಿಜೆಪಿಯ ವಿರುದ್ಧದೃಢ ನಿಲುವು ತಳೆಯುವ ಬದಲು ಪರಿಸ್ಥಿತಿಯನ್ನು ಬಳಸಿಕೊಂಡು ತಾನು ಕಳಕೊಂಡದ್ದನ್ನು ಪಡೆಯಲು ಪ್ರಯತ್ನಿಸಿತು. ತನ್ನ ನೇತೃತ್ವದ ಸರಕಾರ ರಚಿಸಲು ಅಥವಾ ಸಮಿಶ್ರ ಸರಕಾರ ರಚಿಸಲು ಪ್ರಯತ್ನಿಸಿತು. ಅದಕ್ಕೀಗ ಭಾರೀ ಬೆಲೆ ತೆತ್ತಿದೆ ಎಂದಿರುವ ಸುರ್ಜಿತ್‌ರವರು "ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುವ ಕಾಂಗ್ರೆಸ್ ನೀತಿಯಿಂದಾಗಿ ಅವರು ಅಲ್ಪಸಂಖ್ಯಾತರಿಂದ ದೂರವಾಗಿದ್ದಾರೆ. ಹೊಸಪೀಳಿಗೆಯ ಕಾಂಗ್ರೆಸ್ ಮುಖಂಡರು ಕೂಡಾ ಅಧಿಕಾರ ದಾಹಿಗಳು, ರಾಷ್ಟ್ರೀಯ ಆಂದೋಲನದ ಮೌಲ್ಯಗಳನ್ನು ಮರೆತವರು. ಬಾಬ್ರಿ ಮಸೀದಿಯ ಧ್ವಂಸದ ನಂತರವೂ ಒಂದು ಕೋಮುವಾದಿ ಪಕ್ಷದೊಂದಿಗೆ ಕೈ ಮಿಲಾಯಿಸಲು ಆ ಪಕ್ಷದ ಬಹಳಷ್ಟು ಶಾಸಕರು ಪಕ್ಷವನ್ನು ತ್ಯಜಿಸಲೂ ಹೇಸಲಿಲ್ಲ. ದೇಶಪ್ರೇಮಿ ಮತ್ತು ಜಾತ್ಯಾತೀತತೆಯ ಮೂಲಭೂತ ಮೌಲ್ಯಗಳನ್ನು ಕೈ ಬಿಟ್ಟರೆ ಕಾಂಗ್ರೆಸ್ ಅಸಂಬದ್ಧವಾಗುತ್ತದೆ. ತನ್ನ ನೀತಿಗಳ ದಿಕ್ಕನ್ನು ಬದಲಿಸದೆ ಅದಕ್ಕೆ ಮತ್ತೆ ಜನತೆಯ ವಿಶ್ವಾಸ ಗಳಿಸಲು ಸಾಧ್ಯವಿಲ್ಲ" ಎಂದು ಸುರ್ಜಿತ್ ಎಚ್ಚರಿಸಿದ್ದಾರೆ.

ಸಂಯುಕ್ತ ರಂಗ ಕೂಡಾ ಈ ಘಟನೆಗಳಿಂದ ಪಾಠ ಕಲಿಯಬೇಕಾಗುತ್ತದೆ ಎಂದಿದ್ದಾರೆ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು. ಪ್ರಮುಖ ಪ್ರಶ್ನೆಗಳ ಮೇಲೆ ಒಂದು ಸುಸಂಗತ ನಿಲುವ ರೂಪಿಸದಿದ್ದರೆ ತಾನೊಂದು ನಿಜವಾದ ಪರ್ಯಾಯ ಎಂದು ಜನಗಳಲ್ಲಿ ವಿಶ್ವಾಸ ಮೂಡಿಸಲು ಅದಕ್ಕೆ ಸಾಧ್ಯವಾಗದು. ಆರ್ಥಿಕ ನೀತಿಗಳ ಮೇಲೆ ಗಂಭೀರ ಭಿನ್ನಾಭಿಪ್ರಾಯಗಳಿವೆ. ಆದರೆ ಕೆಲವರು ತಮ್ಮದೇ ಅಜೆಂಡಾದಂತೆ ವರ್ತಿಸುತ್ತಿದ್ದಾರೆ. ಧರ್ಮ ನಿರಪೇಕ್ಷತೆಗೆ ಸಂಯುಕ್ತ ರಂಗದ ಎಲ್ಲಾ ಪಕ್ಷಗಳೂ ಬದ್ಧವಾಗಿದ್ದರೂ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಹೆಚ್ಚಿನ ಆಸಕ್ತಿ ತೋರುತ್ತಿಲ್ಲ. ಇದೂ ಕೋಮುವಾದಿ ಶಕ್ತಿಗಳ ಬೆಳವಣಿಗೆಗೆ ಅವಕಾಶ ನೀಡಿದೆ ಎಂದು ಸುರ್ಜಿತ್ ಖೇದವ್ಯಕ್ತಪಡಿಸಿದ್ದಾರೆ.

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ ಎಸ್.ಆರ್.ನಗರ, ಬೆಂ.27